ಶನಿವಾರ, ಜುಲೈ 29, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹುಲಿ ದಿನ
ಅಂತರರಾಷ್ಟ್ರೀಯ ಹುಲಿ ದಿನದ ಅಂಗವಾಗಿ ಉತ್ತರಪ್ರದೇಶದ ಮೊರಾದಾಬಾದ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿ



15 ವರ್ಷವಾದರೂ ನವೀಕರಣವಾಗದ ಗುತ್ತಿಗೆ • ಮುಖ್ಯಮಂತ್ರಿ ಮಧ್ಯಪ್ರವೇಶಕ್ಕೆ ಭಕ್ತರ ಆಗ್ರಹ

ಅದುರುತ್ತಿದೆ ಶ್ರೀಶೈಲ ಕರ್ನಾಟಕ ಛತ್ರದ ನೆಲ

• ಬಾಲಕೃಷ್ಣ ಪಿ.ಎಚ್.


ಆಂಧ್ರಪ್ರದೇಶದ ಶ್ರೀಶೈಲದಲ್ಲಿ ಇರುವ ಕರ್ನಾಟಕ ಛತ್ರ

ಬೆಂಗಳೂರು: ಆಂಧ್ರಪ್ರದೇಶದ ಶ್ರೀಶೈಲಂನಲ್ಲಿ ಕರ್ನಾಟಕದ ಭಕ್ತರ ಅನುಕೂಲಕ್ಕೆ ನಿರ್ಮಿಸಲಾಗಿದ್ದ ಛತ್ರಕ್ಕಾಗಿ 44 ವರ್ಷಗಳ ಹಿಂದೆ ನೀಡಿದ್ದ ಜಮೀನಿನ ಗುತ್ತಿಗೆ ನವೀಕರಣವಾಗದೇ 15 ವರ್ಷಗಳು ಕಳೆದಿವೆ. ಈ ಜಮೀನಿನ ಮೇಲೆ ರಿಯಲ್ ಎಸ್ಟೇಟ್‌ನವರ ಕಣ್ಣು ಬಿದ್ದಿದ್ದು, ಜಮೀನು ಕೈ ತಪ್ಪುವ ಸಾಧ್ಯತೆಯಿದೆ.

ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಕರ್ನಾಟಕದಿಂದ ಬರುವ ಭಕ್ತರಿಗಾಗಿ ಛತ್ರ ನಿರ್ಮಿಸಲು 1969ರಲ್ಲಿ ಆಂಧ್ರ ಪ್ರದೇಶವು 4 ಎಕರೆ 13 ಗುಂಟೆ ಜಮೀನನ್ನು ಗುತ್ತಿಗೆ ಆಧಾರದಲ್ಲಿ 16 ವರ್ಷಗಳ ಅವಧಿಗೆ ಮಂಜೂರು ಮಾಡಿತ್ತು. ಕರ್ನಾಟಕ ಸರ್ಕಾರವು ಅಲ್ಲಿ 24 ಕೊಠಡಿಗಳ ಕಟ್ಟಡವನ್ನು ನಿರ್ಮಿಸಿತ್ತು. 1986, 1997ರಲ್ಲಿ ನವೀಕರಣವಾಗಿತ್ತು. 1997ರಲ್ಲಿ ನವೀಕರಣ ಮಾಡುವಾಗ ₹5000 ಇದ್ದ ನೆಲಬಾಡಿಗೆಯನ್ನು ₹6,500ಕ್ಕೆ ಏರಿಸಲಾಗಿತ್ತು. ಈ ನವೀಕರಣದ ಅವಧಿ 2008ಕ್ಕೆ ಮುಗಿದಿದೆ. ಆನಂತರ ನವೀಕರಣಗೊಂಡಿಲ್ಲ. ಅಲ್ಲಿಂದ ಇಲ್ಲಿವರೆಗೆ ಆಡಳಿತ ನಡೆಸಿದ ಕರ್ನಾಟಕದ ಯಾರೂ ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎಂದು ಭಕ್ತರು ದೂರಿದ್ದಾರೆ.

44 ವರ್ಷಗಳ ಹಿಂದೆ ಈ ಜಮೀನು ಮಂಜೂರು ಮಾಡುವಾಗ ಆ ಜಮೀನು ನಗರದ ಹೊರಗೆ ಇತ್ತು. ಈಗ ನಗರ ಬೆಳೆದಿದ್ದು, ದೇವಸ್ಥಾನದ ಸುತ್ತಲ ಪ್ರದೇಶಗಳೆಲ್ಲ ವಾಣಿಜ್ಯ ಕಟ್ಟಡಗಳಿಂದ ತುಂಬಿ ಹೋಗಿವೆ. ದೇವಸ್ಥಾನದ ಸಮೀಪ ಇರುವ ಈ ಸ್ಥಳಕ್ಕೂ ಪ್ರಾಮುಖ್ಯ ಬಂದಿದೆ.

‘ಗುತ್ತಿಗೆ ನವೀಕರಣವಾಗಿಲ್ಲ. ಶೀಘ್ರ ನವೀಕರಿಸಲು ಆಂಧ್ರ ಸರ್ಕಾರದ ಜತೆಗೆ ಮಾತುಕತೆ ನಡೆಸಲಾಗುವುದು ಎಂದು ಈ ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಗಲೂ ಸಿದ್ದರಾಮಯ್ಯ ತಿಳಿಸಿದ್ದರು. ಆದರೆ, ನವೀಕರಣ ಆಗಿಲ್ಲ. ಬಸವರಾಜ ಬೊಮ್ಮಾಯಿಯವರು ಮಂಡಿಸಿದ್ದ 2022–23ನೇ ಸಾಲಿನ ಬಜೆಟ್‌ನಲ್ಲಿ ಕರ್ನಾಟಕ ಛತ್ರ ಪುನರ್‌ನಿರ್ಮಾಣಕ್ಕಾಗಿ ₹85 ಕೋಟಿ ಅನುದಾನ ನೀಡಿದ್ದರು. ಟೆಂಡರ್ ಪ್ರಕ್ರಿಯೆ ಕೂಡ ಮುಗಿದಿತ್ತು. ಇಲ್ಲಿವರೆಗೆ ಕಟ್ಟಡ ಕಾಮಗಾರಿ ನಡೆದಿಲ್ಲ’ ಎಂದು ಶ್ರೀಶೈಲದ ಭಕ್ತ, ಲಿಂಗಸಗೂರು ಸಮರ್ಥ ಚಾರಿಟಬಲ್ ಟ್ರಸ್ಟ್ ಧರ್ಮದರ್ಶಿ ಶರಣಪ್ಪ ಮೇಟಿ ‘ಪ್ರಜಾವಾಣಿ’ಗೆ ತಿಳಿಸಿದರು.



ಈಗಾಗಲೇ ಈ ಜಾಗದ ಒತ್ತುವರಿ ಆಗುತ್ತಿದೆ. ಸಿದ್ದರಾಮಯ್ಯನವರು ಆಂಧ್ರದ ಮುಖ್ಯಮಂತ್ರಿ ಜೊತೆಗೆ ಮಾತುಕತೆ ನಡೆಸಿ, ಛತ್ರದ ಜಾಗವನ್ನು ಉಳಿಸಿಕೊಳ್ಳಬೇಕು

ಶರಣಪ್ಪ ಮೇಟಿ, ಲಿಂಗಸುಗೂರು ಸಮರ್ಥ ಚಾರಿಟಬಲ್ ಟ್ರಸ್ಟ್ ಧರ್ಮದರ್ಶಿ

‘ಅಲ್ಲಿಂದ 1 ಕಿಲೋಮೀಟರ್ ದೂರದಲ್ಲಿ ಇಲ್ಲವೇ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದ ಬಳಿ ಜಮೀನು ಒದಗಿಸುತ್ತೇವೆ. ಅಲ್ಲಿ ಛತ್ರ ನಿರ್ಮಿಸಿ ಎಂದು ಆಂಧ್ರ ಸರ್ಕಾರದ ಅಧಿಕಾರಿಗಳು ಈಗ ಹೇಳುತ್ತಿದ್ದಾರೆ. ಕೂಡಲೇ ರಾಜ್ಯ ಸರ್ಕಾರವು ಆಂಧ್ರ ಸರ್ಕಾರದ ಜತೆಗೆ ಮಾತುಕತೆ ನಡೆಸಿ ಈ ಜಮೀನು ಉಳಿಸಿಕೊಳ್ಳಬೇಕು. ಇಲ್ಲಿರುವ ಶಿಥಿಲ ಕಟ್ಟಡ ತೆಗೆದು ಹೊಸ ಕಟ್ಟಡ ನಿರ್ಮಿಸಬೇಕು. ಎಲ್ಲೋ ದೂರದಲ್ಲಿ ಛತ್ರ ನಿರ್ಮಿಸಿದರೆ ಶ್ರೀಶೈಲದ ಭಕ್ತರಿಗೆ ಉಪಯೋಗವಾಗುವುದಿಲ್ಲ’ ಎಂದು ವಿವರಿಸಿದರು.

‘ಬೆಂಗಳೂರಿನಿಂದ ಶ್ರೀಶೈಲಕ್ಕೆ ಹೋಗುವ ಭಕ್ತರ ಪ್ರಮಾಣ ಕಡಿಮೆ. ಉತ್ತರ ಕರ್ನಾಟಕದ ಭಕ್ತರ ಸಂಖ್ಯೆ ಹೆಚ್ಚು. ರಾಜ್ಯದಿಂದ ನಿತ್ಯ ಸಾವಿರಾರು ಭಕ್ತರು ಬರುತ್ತಿದ್ದು, ಜಾತ್ರೆಯ ಸಂದರ್ಭದಲ್ಲಿ 2–3 ಲಕ್ಷ ಜನರು ಹೋಗುತ್ತಾರೆ. ಭಕ್ತರಿಗೆ ಸರಿಯಾದ ವ್ಯವಸ್ಥೆ ಮಾಡಿಕೊಡಬೇಕು’ ಎಂದು ಅವರು ಆಗ್ರಹಿಸಿದರು.

‘ಆ.6ಕ್ಕೆ ಮುಜರಾಯಿ ಆಯುಕ್ತರು ಶ್ರೀಶೈಲಕ್ಕೆ’


ರಾಮಲಿಂಗಾ ರೆಡ್ಡಿ

ಆಂಧ್ರಪ್ರದೇಶದ ಶ್ರೀಶೈಲದಲ್ಲಿ ಕರ್ನಾಟಕ ಛತ್ರಕ್ಕಾಗಿ ನೀಡಿರುವ ಜಮೀನಿಗೆ ಸಂಬಂಧಿಸಿದ ವಿವಾದ ಏನು ಎಂಬುದನ್ನು ತಿಳಿಯಲು ಮುಜರಾಯಿ ಇಲಾಖೆಯ ಆಯುಕ್ತ ಬಸವರಾಜೇಂದ್ರ ಅವರೇ ಆ.6ಕ್ಕೆ ಶ್ರೀಶೈಲಕ್ಕೆ ತೆರಳಲಿದ್ದಾರೆ ಎಂದು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಅವರು ಅಲ್ಲಿನ ಸ್ಥಿತಿಗತಿ ತಿಳಿದುಕೊಂಡು ಬಂದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜತೆಗೂ ಚರ್ಚಿಸಲಾಗುವುದು ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ದ್ವಿತೀಯ ಪಿಯು: ಆ.21ರಿಂದ ಎರಡನೇ ಪೂರಕ ಪರೀಕ್ಷೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆ.21ರಿಂದ ಎರಡನೇ ಪೂರಕ ಪರೀಕ್ಷೆ ನಡೆಯಲಿದೆ.

2023ರ ವಾರ್ಷಿಕ ಪರೀಕ್ಷೆ ಹಾಗೂ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಜೂನ್‌ನಲ್ಲಿ ಪೂರಕ ಪರೀಕ್ಷೆ ನಡೆಸಲಾಗಿತ್ತು. ಇದೇ ಮೊದಲ ಬಾರಿ ಒಂದೇ ಶೈಕ್ಷಣಿಕ ವರ್ಷದಲ್ಲಿ ಎರಡನೇ ಪೂರಕ ಪರೀಕ್ಷೆ ನಡೆಸಲು ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧಿಸೂಚನೆ ಹೊರಡಿಸಿದೆ.



ವಿದ್ಯಾರ್ಥಿಗಳು ತಾವು ಓದಿದ ಕಾಲೇಜಿಗೆ ತೆರಳಿ, ಕಾಲೇಜಿನ ಲಾಗಿನ್ ಮೂಲಕ ಆ. 10ರ ಒಳಗೆ ನೋಂದಣಿ ಮಾಡಿಕೊಳ್ಳಬೇಕು. ನಂತರ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಬೇಕು ಎಂದು ಮಂಡಳಿ ಪ್ರಕಟಣೆ ತಿಳಿಸಿದೆ.

ಪರೀಕ್ಷೆಗಳು ಆ.21ರಿಂದ ಸೆ.2ರವರೆಗೆ ನಡೆಯಲಿವೆ. ಮಾಹಿತಿಗೆ http://kseab.karnataka.gov.in ಸಂಪರ್ಕಿಸಬಹುದು.

ಜಾತಿ ಕಾರಣ: ಅಂಗನವಾಡಿ ಕಾರ್ಯಕರ್ತೆ ಕೆಲಸಕ್ಕೆ ಅಡ್ಡಿ ಆರೋಪ

ದೊಡ್ಡಬಳ್ಳಾಪುರ: ಇಲ್ಲಿನ ಮೆಳೆಕೋಟೆ ಅಂಗನವಾಡಿ ಕೇಂದ್ರಕ್ಕೆ ಕಾರ್ಯಕರ್ತೆಯಾಗಿ ನಿಯೋಜನೆಗೊಂಡಿರುವ ಆನಂದಮ್ಮ ಅವರು ಪರಿಶಿಷ್ಟ ಜಾತಿ ಎಂಬ ಕಾರಣಕ್ಕೆ ಕೆಲಸ ನಿರ್ವಹಿಸಲು ಸ್ಥಳೀಯರು ಶುಕ್ರವಾರ ಅಡ್ಡಿಪಡಿಸಿದ್ದಾರೆ ಎಂದು ಆರೋಪಿಸಲಾಗಿದೆ

ರಾಜಘಟ್ಟ ಅಂಗನವಾಡಿ ಕೇಂದ್ರದಲ್ಲಿ ಸಹಾಯಕಿ ಆಗಿ ಕೆಲಸ ಮಾಡುತ್ತಿದ್ದ ಅವರು, ಕಾರ್ಯಕರ್ತೆ ಹುದ್ದೆಗೆ ಬಡ್ತಿ ಪಡೆದು ಮೆಳೆಕೋಟೆ ಕೇಂದ್ರಕ್ಕೆ ಜುಲೈ 25ರಂದು ವರ್ಗಾವಣೆಗೊಂಡಿದ್ದರು. ಸ್ಥಳೀಯ ಅಭ್ಯರ್ಥಿ ಅಲ್ಲ ಎನ್ನುವ ಕಾರಣಕ್ಕೆ ವರದಿ ಮಾಡಿಕೊಳ್ಳಲು ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಜಾತಿ ತಾರತಮ್ಯ: ‘ಪರಿಶಿಷ್ಟ ಜಾತಿ ಮಹಿಳೆ ಎನ್ನುವ ಕಾರಣಕ್ಕೆ ಕಾರ್ಯಕರ್ತೆಯಾಗಿ ಕೆಲಸ ಮಾಡಲು ಅಡ್ಡಿಪಡಿಸಿದ್ದಾರೆ. ಈ ಬಗ್ಗೆ ಮೇಲಧಿಕಾರಿ ಗಮನಕ್ಕೆ ತಂದರೂ ಯಾವುದೇ ಕ್ರಮಕೈಗೊಂಡಿಲ್ಲ’ಎಂದು ಆನಂದಮ್ಮ ದೂರಿದ್ದಾರೆ.

‘ಆನಂದಮ್ಮ ಅವರು ಸೋಮವಾರದಿಂದ ಕೆಲಸಕ್ಕೆ ಹಾಜರಾಗಲು ಅಗತ್ಯ ಕ್ರಮಕೈಗೊಳ್ಳಲಾಗುವುದು. ಜತೆಗೆ ಗ್ರಾಮಸ್ಥರೊಂದಿಗೂ ಸಭೆ ನಡೆಸಲಾಗುವುದು. ಆದಾಗ್ಯೂ ಸ್ಥಳೀಯರು ಕೆಲಸಕ್ಕೆ ಅಡ್ಡಿಪಡಿಸಿದರೆ ದೂರು ದಾಖಲಿಸಲಾಗುವುದು’ ಎಂದು ಸಿಡಿಪಿಒ ರವಿಕುಮಾರ್ ತಿಳಿಸಿದ್ದಾರೆ.

ಗ್ರಾಮಕ್ಕೆ ಪೊಲೀಸರು ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಆದರೆ, ಯಾರ ವಿರುದ್ಧವೂ ಪ್ರಕರಣ ದಾಖಲಿಸುವುದಿಲ್ಲ ಎಂದು ಆನಂದಮ್ಮ ತಿಳಿಸಿದ್ದಾರೆ.

ಕೃಷಿ ಭೂಮಿ ಪರಿವರ್ತನೆ ಸರಳಗೊಳಿಸಲು ಕಾಯ್ದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿಯೇತರ ಉದ್ದೇಶಕ್ಕಾಗಿ ಕೃಷಿ ಭೂಮಿಯನ್ನು ಪರಿವರ್ತಿಸುವುದಕ್ಕೆ ಅವಕಾಶ ಮಾಡಿಕೊಡುವ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆ 2023 ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದು, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಕಾಯ್ದೆಯು ತಕ್ಷಣದಿಂದಲೇ ಜಾರಿಗೆ ಬಂದಿದೆ.

ಈ ಕಾಯ್ದೆಯಿಂದಾಗಿ ಅರ್ಜಿದಾರ ಸ್ವಯಂ ಘೋಷಣೆಯ ಮೂಲಕವೇ ಕೃಷಿಯೇತರ ಉದ್ದೇಶಕ್ಕೆ ಕೃಷಿ ಭೂಮಿಯನ್ನು ಪರಿವರ್ತಿಸಲು ಅವಕಾಶ ನೀಡಲಾಗಿದೆ.

ಕೃಷಿಯೇತರ ಉದ್ದೇಶಗಳಿಗಾಗಿ ಮಾಸ್ಟರ್ ಪ್ಲಾನ್ ಮಾಡಲಾಗಿರುವ ಭೂಮಿಯನ್ನು ಆ ಮಾಸ್ಟರ್ ಪ್ಲಾನ್‌ನಲ್ಲಿ ಉಲ್ಲೇಖಿಸಿರುವ ಉದ್ದೇಶಗಳಿಗೆ ಬಳಸಿಕೊಳ್ಳಲು ಜಿಲ್ಲಾಧಿಕಾರಿಗಳ ಅನುಮತಿ ಬೇಕಿಲ್ಲ. ಯಾವುದೇ ಮಾಸ್ಟರ್ ಪ್ಲಾನ್ ಇಲ್ಲದ ಸ್ಥಳೀಯ ಯೋಜನಾ ಪ್ರದೇಶದ ಹೊರಗಿನ ಭೂಮಿಯನ್ನು ಪರಿವರ್ತನೆ ಮಾಡಿಕೊಳ್ಳಲು ಅರ್ಜಿದಾರರು ಪ್ರಮಾಣಪತ್ರ ಸಲ್ಲಿಸಬೇಕು. 30 ದಿನಗಳಲ್ಲಿ ಆದೇಶ ನೀಡದೇ ಇದ್ದರೆ, ಭೂಪರಿವರ್ತನೆಯನ್ನು ಅನುಮೋದಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ಈ ಮಸೂದೆಯೂ ಸೇರಿ ಒಟ್ಟು ಒಂಬತ್ತು ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕಿದ್ದು, ಎಲ್ಲವನ್ನೂ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಇತರ ಮಸೂದೆಗೂ ರಾಜ್ಯಪಾಲರ ಅಂಕಿತ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂಮಿ ಪರಭಾರೆಗೆ ಸಂಬಂಧಿಸಿದ ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) (ತಿದ್ದುಪಡಿ) ಅಧಿನಿಯಮ ಮಸೂದೆ 2023ಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಂಗೀಕಾರ ನೀಡಿದ್ದಾರೆ.

ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಮಸೂದೆ, ಕರ್ನಾಟಕ ಧನವಿನಿಯೋಗ ಮಸೂದೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ಮಸೂದೆ,ಕರ್ನಾಟಕ ಅಗ್ನಿ ಶಾಮಕ (ತಿದ್ದುಪಡಿ)ಮಸೂದೆ, ಕರ್ನಾಟಕ ವಿಧಾನಮಂಡಲ(ಅನರ್ಹತಾ ನಿವಾರಣಾ)(ತಿದ್ದುಪಡಿ) ಮಸೂದೆ, ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಮಸೂದೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆಗೆ ಅಂಕಿತ ಹಾಕಿದ್ದಾರೆ.


ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡದ ಉತ್ತರಾದಿಮಠ ಜಲಾವೃತವಾಗಿದೆ


ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯದಲ್ಲಿ ಶುಕ್ರವಾರ 111.54 ಅಡಿ ನೀರು ಸಂಗ್ರಹವಾಗಿತ್ತು

ಮಳೆ ಇಳಿಕೆ; ಮೂಡಿದ ಬಿಸಿಲು

111 ಅಡಿ ದಾಟಿದ ಕೆಆರ್‌ಎಸ್ ಜಲಾಶಯ • ಆಲಮಟ್ಟಿ ಒಳಹರಿವು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ, ಮಲೆನಾಡು ಸೇರಿದಂತೆ ರಾಜ್ಯದ ಬಹುತೇಕ ಭಾಗಗಳಲ್ಲಿ ಶುಕ್ರವಾರ ಮಳೆ ಬಹುತೇಕ ಇಳಿಕೆಯಾಗಿದ್ದು, ಬಿಸಿಲಿನ ವಾತಾವರಣ ಕಂಡು ಬಂದಿತು. ಕೆಲವೆಡೆ ಆಗೊಮ್ಮೆ, ಈಗೊಮ್ಮೆ ಅಲ್ಪಸ್ವಲ್ಪ ಮಳೆಯಾಗಿದೆ.

ಮಳೆ ಕಡಿಮೆಯಾಗಿರುವುದರಿಂದ ರಾಜ್ಯದ ಬಹುತೇಕ ನದಿಗಳಲ್ಲಿ ನೀರಿನ ಹರಿವು ಕಡಿಮೆಯಾಗಿದ್ದು, ಜಲಾಶಯಗಳಿಗೆ ನೀರಿನ ಒಳಹರಿವಿನ ಪ್ರಮಾಣ ತಗ್ಗಿದೆ.

ವಾರದಿಂದ ಸುರಿದ ಭಾರಿ ಮಳೆ ಕಾರಣ ಹಲವು ಜಲಾಶಯಗಳಿಗೆ ಈಗಾಗಲೇ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬಂದಿದೆ. ಹೀಗಾಗಿ ಜಲಾಶಯಗಳ ಗೇಟ್‌ಗಳನ್ನು ತೆರೆದು ನೀರನ್ನು ನದಿಗೆ ಹರಿಸಲಾಗುತ್ತಿದೆ.

111 ಅಡಿ ದಾಟಿದ ಕೆಆರ್‌ಎಸ್: ಕೊಡಗು ಜಿಲ್ಲೆ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ವಾರದಿಂದ ಉತ್ತಮ ಮಳೆ ಸುರಿದ ಪರಿಣಾಮ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಶುಕ್ರವಾರ ರಾತ್ರಿ 8 ಗಂಟೆ ವೇಳೆಗೆ 111.54 ಅಡಿಗೆ ತಲುಪಿತ್ತು. 26,135 ಕ್ಯುಸೆಕ್ ಒಳಹರಿವು ಇದ್ದು, 3,137 ಕ್ಯುಸೆಕ್ ಹೊರಹರಿವು ಇದೆ. ವಾರದಿಂದೀಚೆಗೆ ಜಲಾಶಯಕ್ಕೆ 20 ಅಡಿ ನೀರು ಹರಿದು ಬಂದಿರುವುದು ಕಾವೇರಿ ಅಚ್ಚುಕಟ್ಟು ಭಾಗದ ರೈತರ ಮೊಗದಲ್ಲಿ ಸಂತಸ ಮೂಡಿದೆ.

ಯಗಚಿ ಜಲಾಶಯದಿಂದ ನದಿಗೆ ನೀರು: ಹಾಸನ ಜಿಲ್ಲೆಯ ಬೇಲೂರು ಸಮೀಪದ ಯಗಚಿ ಜಲಾಶಯದಿಂದ ಮೂರು ಕ್ರೆಸ್ಟ್ ಗೇಟ್‌ಗಳ ಮೂಲಕ ನೀರನ್ನು ನದಿಗೆ ಹರಿಸಲಾಗಿದೆ. ಚಿಕ್ಕಮಗಳೂರು, ಮೂಡಿಗೆರೆ ಹಾಗೂ ಬೇಲೂರು ತಾಲ್ಲೂಕಿನ ಭಾಗಗಳಲ್ಲಿ ಇತ್ತೀಚೆಗೆ ಜೋರು ಮಳೆಯಾದ ಪರಿಣಾಮ ಈ ಜಲಾಶಯ ಭರ್ತಿಯಾಗಿದೆ. 750 ಕ್ಯುಸೆಕ್ ಒಳಹರಿವಿದ್ದು, 300 ಕ್ಯುಸೆಕ್ ನೀರನ್ನು ನದಿಗೆ ಹಾಗೂ 100 ಕ್ಯುಸೆಕ್ ನೀರನ್ನು ನಾಲೆಗೆ ಹರಿಸಲಾಗುತ್ತಿದೆ.

ಆಲಮಟ್ಟಿ ಒಳಹರಿವು ಇಳಿಕೆ: ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಒಳಹರಿವು 1.38 ಲಕ್ಷ ಕ್ಯುಸೆಕ್‌ಗೆ ಇಳಿದಿದೆ. ವಿಜಯನಗರ ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿದ್ದರೂ, ಜಿಲ್ಲೆಯಲ್ಲಿ 23 ಮನೆಗಳು ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ 3 ಮನೆಗಳು ಭಾಗಶಃ ಹಾನಿಗೊಂಡಿವೆ.

ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 84,506 ಕ್ಯುಸೆಕ್‌ಗೆ ಇಳಿದಿದೆ. ಜಲಾಶಯದ ನೀರು ಸಂಗ್ರಹ ಪ್ರಮಾಣ 59 ಟಿಎಂಸಿ ಅಡಿಗೆ (ಗರಿಷ್ಠ 105 ಟಿಎಂಸಿ ಅಡಿ) ಹೆಚ್ಚಳವಾಗಿದೆ.

ಕಾಗಿಣಾ ಪ್ರವಾಹ: ಮಳಖೇಡ ಉತ್ತರಾದಿಮಠ ಜಲಾವೃತ

ಕಲಬುರಗಿ: ನೆರೆಯ ತೆಲಂಗಾಣ ಹಾಗೂ ಜಿಲ್ಲೆಯ ಚಿಂಚೋಳಿ ಸುತ್ತಮುತ್ತ ಭಾರಿ ಮಳೆ ಸುರಿದಿದ್ದರಿಂದ ಸೇಡಂ ತಾಲ್ಲೂಕಿನಲ್ಲಿ ಕಾಗಿಣಾ ನದಿ ಉಕ್ಕಿ ಹರಿಯುತ್ತಿದೆ. ಇದರ ಪರಿಣಾಮ ಮಳಖೇಡ ಬಳಿಯ ಉತ್ತರಾದಿಮಠ ಜಲಾವೃತವಾಗಿತ್ತು. ಅಲ್ಲದೇ, ಮಳಖೇಡ ಸೇತುವೆ ಹಾಗೂ ಸಂಗಾವಿ (ಎಂ) ಗ್ರಾಮದ ಬಳಿಯ ಸೇತುವೆಯು ಜಲಾವೃತವಾಗಿತ್ತು.

ಭಾರಿ ಪ್ರವಾಹದಿಂದಾಗಿ ಮಳಖೇಡ ಸೇತುವೆ ಮೇಲಿನ ಸಂಚಾರ 18 ಗಂಟೆ ಸ್ಥಗಿತಗೊಂಡಿತ್ತು. ಮಧ್ಯಾಹ್ನದ ಬಳಿಕ ಸಂಚಾರ ಆರಂಭಗೊಂಡಿತು. ಮಳಖೇಡ ಸೇತುವೆ ಬಳಿ ಪೊಲೀಸರು ಬೀಡು ಬಿಟ್ಟಿದ್ದು, ನದಿಯತ್ತ ತೆರಳದಂತೆ ಮುನ್ನೆಚ್ಚರಿಕೆ ಕೈಗೊಂಡಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	111.54	26,135	3,137
ಹಾರಂಗಿ	2,859	2,855.28	9,580	3,000
ಕಬಿನಿ	2284.00	2,282.46	10,756	6,000
ಹೇಮಾವತಿ	2,922	2,911.75	9,152	200
ಲಿಂಗನಮಕ್ಕಿ	1,819	1,785.60	25,631	891.25
ಸೂಪಾ (ಮೀ)	564	543.30	27,001	00
ಮಾಣಿ	595	579.96	2,803	00
ತುಂಗಭದ್ರಾ	1,633	1,619.16	84,506	59
ಮಲಪ್ರಭಾ	2079.5	2,062.10	12,821	194
ಘಟಪ್ರಭಾ	2175	2,148	29,415	114
ಭದ್ರಾ	186	159.60	16,041	185
ಆಲಮಟ್ಟಿ (ಮೀ)	519.6	517.32	1,38,722	1,25,000
ನಾರಾಯಣಪುರ (ಮೀ)	492.25	490.68	1,66,900	1,57,500

*ನೆಲಮಟ್ಟದಿಂದ

ಆಯ್ಕೆ ಅಸಿಂಧು ಕೋರಿ ಅರ್ಜಿ ಸಿದ್ದರಾಮಯ್ಯಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣೆ ವೇಳೆ ಮತದಾರರಿಗೆ ಉಚಿತ ಗ್ಯಾರಂಟಿಗಳ ಆಮಿಷವೊಡ್ಡಿ ವರುಣಾ ಕ್ಷೇತ್ರದಿಂದ ಆಯ್ಕೆಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅನರ್ಹಗೊಳಿಸಬೇಕು‘ ಎಂದು ಕೋರಿ ಸಲ್ಲಿಸಲಾಗಿರುವ ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮೈಸೂರಿನ ವರುಣಾ ಹೋಬಳಿಯ ಕೂಡನಹಳ್ಳಿಯ ಕೆ.ಎಂ. ಶಂಕರ್ ಸಲ್ಲಿಸಿರುವ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ‘ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿ ಸಿದ್ದರಾಮಯ್ಯ ಅವರು ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಸೆಪ್ಟೆಂಬರ್ 1ಕ್ಕೆ ಮುಂದೂಡಲಾಗಿದೆ.

ಕೋರಿಕೆ ಏನು?: ‘ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷವು ಮತದಾರರಿಗೆ ಗ್ಯಾರಂಟಿ ಕಾರ್ಡ್ ಯೋಜನೆಗಳ ಮೂಲಕ ಆಮಿಷ ಒಡ್ಡಿದೆ. ಈ ಗ್ಯಾರಂಟಿ ಯೋಜನೆಗಳನ್ನು ಸಿದ್ದರಾಮಯ್ಯ ಅವರ ಸಮ್ಮತಿಯೊಂದಿಗೇ ಪ್ರಕಟಿಸಲಾಗಿದೆ. ಇವು ವರುಣಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತಹಾಕಲು ಮತದಾರರನ್ನು ಪ್ರೇರೇಪಿಸಿದೆ. ಇದು ಲಂಚಕ್ಕೆ ಸಮನಾದುದು. ಪ್ರಜಾಪ್ರತಿನಿಧಿ ಕಾಯ್ದೆ–1951ರ ಕಲಂ 123 (1) ಪ್ರಕಾರ ಮತ್ತು ಕಲಂ 123 (2) ಪ್ರಕಾರ ಮತದಾರರ ಮೇಲೆ ಪ್ರಭಾವ ಬೀರುವ ಯತ್ನ. ಕಲಂ 123 (4) ರ ಪ್ರಕಾರ ಆಮಿಷವೊಡ್ಡಿ ಪ್ರಚಾರ ಮಾಡುವುದೂ ಅಪರಾಧ. ಆದ್ದರಿಂದ, ಅಕ್ರಮಗಳನ್ನು ಎಸಗುವ ಮೂಲಕ ಶಾಸಕರಾಗಿ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಬೇಕು‘ ಎಂದು ಕೋರಿದ್ದಾರೆ.

ಪೊಲೀಸರ ಮೇಲೆ ಮತೀಯ ಗೂಂಡಾಗಿರಿ?

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ಕರ್ತವ್ಯಕ್ಕೆ ತೆರಳುತ್ತಿದ್ದ ಪೊಲೀಸ್ ಸಿಬ್ಬಂದಿಯೊಬ್ಬರಿಗೆ ಅವಾಚ್ಯ ಪದಗಳಿಂದ ಬೈದು, ಅವರ ಪತ್ನಿ ಜತೆ ಅಸಭ್ಯವಾಗಿ ವರ್ತಿಸಿ, ಕಿರುಕುಳ ನೀಡಿದ ಆರೋಪದ ಮೇಲೆ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ. ತುಂಬೆ ನಿವಾಸಿಗಳಾದ ಮನೀಶ್ ಮತ್ತು ಮಂಜುನಾಥ್ ಆರೋಪಿಗಳು.

‘ಪೊಲೀಸ್ ಹಾಗೂ ಅವರ ಜೊತೆಗಿದ್ದ ಮಹಿಳೆಯರು ಬೇರೆಬೇರೆ ಧರ್ಮಕ್ಕೆ ಸೇರಿದವರಾಗಿರಬಹುದು ಎಂದು ಭಾವಿಸಿ, ಆರೋಪಿಗಳು ವಿಚಾರಿಸಿರುವ ಸಾಧ್ಯತೆ ಇದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗುರುವಾರ ರಾತ್ರಿ ಪೊಲೀಸ್ ಸಿಬ್ಬಂದಿ ಕುಮಾರ್ ಅವರು, ಪತ್ನಿ ಮತ್ತು ನಾದಿನಿ ಜತೆ ಬಿ.ಸಿ. ರೋಡ್‌ನಲ್ಲಿರುವ ವಸತಿಗೃಹಕ್ಕೆ ಹೋಗುತ್ತಿದ್ದರು. ಈ ವೇಳೆ ಇವರನ್ನು ಹಿಂಬಾಲಿಸಿಕೊಂಡು ಹೋದ ಆರೋಪಿಗಳು, ಕುಮಾರ್ ಅವರು ಪತ್ನಿ ಮತ್ತು ನಾದಿನಿಯನ್ನು ವಸತಿಗೃಹದಲ್ಲಿ ಬಿಟ್ಟು ವಾಪಸ್ ಬರುತ್ತಿದ್ದಾಗ ಅಡ್ಡಗಟ್ಟಿ, ‘ಯುವತಿಯರೊಂದಿಗೆ ನಿನಗೇನು ಕೆಲಸ’ ಎಂದು ಪ್ರಶ್ನಿಸಿದ್ದರು. ತಾವು ಪೊಲೀಸ್ ಎಂದು ಕುಮಾರ್ ಹೇಳಿಕೊಂಡರೂ, ‘ನೀನು ಪೊಲೀಸ್ ಅಲ್ಲ, ಅವಳು ನಿನ್ನ ಪತ್ನಿಯೂ ಅಲ್ಲ’ ಎಂದು ಹೇಳಿ ವಾಗ್ವಾದಕ್ಕೆ ಇಳಿದಿದ್ದರು. ಇದನ್ನು ಕಂಡು ಅಲ್ಲಿಗೆ ಬಂದ ಕುಮಾರ್ ಅವರ ಪತ್ನಿಯೊಂದಿಗೆ ಆರೋಪಿಗಳು ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಬಂಟ್ವಾಳ ನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ವಿವರಿಸಲಾಗಿದೆ.

ಆರೋಪಿಗಳ ವಿರುದ್ಧ ಐಪಿಸಿ ಕಲಂ 341, 504, 354(ಡಿ), 354(ಎ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ‘ಆರೋಪಿಗಳು ನಮ್ಮ ಸಿಬ್ಬಂದಿಗೆ ಕಿರುಕುಳ ನೀಡಿದ ಸಂಬಂಧ ಪ್ರಕರಣ ದಾಖಲಾಗಿದೆ. ಅವರು ಯಾವುದಾದರೂ ಸಂಘಟನೆಗೆ ಸೇರಿದವರೇ ಎಂಬ ಬಗ್ಗೆ ಮಾಹಿತಿ ಇಲ್ಲ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮಾತೃ ವಂದನಾ: ರಾಜ್ಯಕ್ಕೆ ₹615 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯಡಿ ಇಲ್ಲಿವರೆಗೆ ಕರ್ನಾಟಕದ 20.72 ಲಕ್ಷ ಮಂದಿ ಫಲಾನುಭವಿಗಳಾಗಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಲೋಕಸಭೆಯಲ್ಲಿ ತಿಳಿಸಿದರು.

ಬಿಜೆಪಿ ಸಂಸದ ಪಿ.ಸಿ.ಮೋಹನ್ ಶುಕ್ರವಾರ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ದೇಶದಲ್ಲಿ ಈ ತನಕ 3.36 ಕೋಟಿ ಜನರು ಯೋಜನೆಯ ಲಾಭ ಪಡೆದಿದ್ದಾರೆ. ಈ ಯೋಜನೆಗೆ ಕೇಂದ್ರದ ಪಾಲಿನ ರೂಪದಲ್ಲಿ ಕರ್ನಾಟಕಕ್ಕೆ ಈವರೆಗೆ ₹615 ಕೋಟಿ ಬಿಡುಗಡೆ ಮಾಡಲಾಗಿದೆ’ ಎಂದರು.

ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ವರು ಐಎಫ್‌ಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ವೆಂಕಟೇಶ್ ಎಸ್– ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ, ಪ್ರಶಾಂತ್ ಸಂಕಿನಮಠ– ಅರಣ್ಯ ಉಪ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು, ಸರೀನಾ ಎಸ್ – ಅರಣ್ಯ ಉಪ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಶ್ರೀಪತಿ ಬಿ.ಎಸ್– ಅರಣ್ಯ ಉಪ ಸಂರಕ್ಷಣಾಧಿಕಾರಿ (ಸಂಶೋಧನೆ), ಧಾರವಾಡ.

ಅಲ್ಪಾವಧಿ ಬೆಳೆ ಬಿತ್ತನೆ ಬೀಜ ಪೂರೈಕೆ: ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತಡವಾಗಿ ಮಳೆಯಾಗುತ್ತಿರುವುದರಿಂದ ರೈತರಿಗೆ ಅಲ್ಪಾವಧಿ ಬೆಳೆಗಳ ಬಿತ್ತನೆ ಬೀಜ ಪೂರೈಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ತಿಳಿಸಿದ್ದಾರೆ.

ಹಿರಿಯ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ದ್ವಿದಳ ಧಾನ್ಯ ಬಿತ್ತನೆ ಸಮಯ ಮೀರಿದೆ. ಆದ್ದರಿಂದ ಅಲ್ಪಾವಧಿಯಲ್ಲಿ ಬೆಳೆಯುವ ರಾಗಿ, ಹುರುಳಿ, ಜೋಳ ಸೇರಿದಂತೆ ಅಗತ್ಯ ಬಿತ್ತನೆ ಬೀಜ ಪೂರೈಸಲು ತೀರ್ಮಾನಿಸಲಾಗಿದೆ ಎಂದರು.

ಸದ್ಯಕ್ಕೆ 14 ಲಕ್ಷ ಟನ್ ರಸಗೊಬ್ಬರ ಮತ್ತು 1 ಲಕ್ಷ ಕ್ವಿಂಟಲ್ ಬಿತ್ತನೆ ಬೀಜ ದಾಸ್ತಾನಿದೆ. ಯಾವುದೇ ಜಿಲ್ಲೆಯಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜದ ಕೊರತೆ ಇದ್ದರೆ ನೆರೆಯ ಜಿಲ್ಲೆಯಿಂದ ಪೂರೈಕೆ ಮಾಡಲು ಅಧಿಕಾರಿಗಳಿಗೆ ಆದೇಶ ಮಾಡಲಾಗಿದೆ ಎಂದರು.

ಮಳೆ ಕೊರತೆಯಿಂದ ಶೇ 53ರಷ್ಟು ಮಾತ್ರ ಬಿತ್ತನೆಯಾಗಿದೆ. ಮುಂದಿನ 15 ದಿನಗಳಲ್ಲಿ ಶೇ 100ರಷ್ಟು ಬಿತ್ತನೆಯಾಗಲಿದೆ. ರೈತರು ಬಿತ್ತನೆ ಬೀಜವನ್ನು ರೈತ ಕೇಂದ್ರ ಇಲ್ಲವೇ ಇಲಾಖೆಯಿಂದ ಪಡೆಯಬಹುದಾಗಿದೆ. ಇಲಾಖೆಗೆ ಹೊರೆಯಾಗಿದ್ದ ಮೈಕ್ರೋ ಇರಿಗೇಷನ್ ಮತ್ತು ಕರ್ನಾಟಕ ಆಗ್ರೋ ಇಂಡಸ್ಟ್ರಿ ಕಾರ್ಪೊರೇಷನ್ ಮುಚ್ಚಲು ತೀರ್ಮಾನಿಸಲಾಗಿದೆ. ಹನಿ ಮತ್ತು ತುಂತುರು ನೀರಾವರಿ ಕಾರ್ಯವನ್ನು ತೋಟಗಾರಿಕೆ ಇಲಾಖೆ ನಿರ್ವಹಿಸಲಿದೆ. ಇವೆರಡನ್ನೂ ಮುಚ್ಚಿ ಅಲ್ಲಿರುವ ನೌಕರರನ್ನು ಇಲಾಖೆಯಲ್ಲಿ ವಿಲೀನ ಮಾಡಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಕೃಷಿ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ₹167 ಕೋಟಿ ವೆಚ್ಚದ 37 ಕಾಮಗಾರಿಗಳು ನಡೆಯುತ್ತಿವೆ. ಅವುಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಕಾಮಗಾರಿಗಳ ಗುಣಮಟ್ಟ ಪರಿಶೀಲಿಸುವಂತೆ ಕುಲಪತಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.


ಮೂವರಿಗೆ ವಿಟಿಯು ಗೌರವ

ಚೆನ್ನೈ ಐಐಟಿ ನಿರ್ದೇಶಕ ವಿ.ಕಾಮಕೋಟಿಯಿಂದ ಭಾಷಣ

ಪ್ರಜಾವಾಣಿ ವಾರ್ತೆ


ನಿರ್ಮಲಾನಂದನಾಥ ಸ್ವಾಮೀಜಿ


ಎ.ವಿ.ಎಸ್ ಮೂರ್ತಿ


ಎಚ್‌.ಎನ್‌.ಶೆಟ್ಟಿ

ಬೆಳಗಾವಿ: ‘ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 23ನೇ ಘಟಿಕೋತ್ಸವ ಆಗಸ್ಟ್ 1ರಂದು ಬೆಳಿಗ್ಗೆ 11.30ಕ್ಕೆ ಜ್ಞಾನ ಸಂಗಮ ಆವರಣದ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಭವದಲ್ಲಿ ನಡೆಯಲಿದೆ’ ಎಂದು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ ತಿಳಿಸಿದರು.

‘ಅಧ್ಯಾತ್ಮ ಕ್ಷೇತ್ರದಲ್ಲಿ ಸಾಧನೆ–ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಶಿಕ್ಷಣ ಕ್ಷೇತ್ರದ ಸಾಧನೆ– ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಎ.ವಿ. ಎಸ್. ಮೂರ್ತಿ ಹಾಗೂ ಔದ್ಯೋಗಿಕ ಕ್ಷೇತ್ರದ ಸಾಧನೆ ಪರಿಗಣಿಸಿ ಮೈಸೂರು ಮೆಕ್ರ್ಯಾನ್ ಟೈಲ್ ಕಂಪನಿ ಅಧ್ಯಕ್ಷ ಎಚ್. ಎನ್.ಶೆಟ್ಟಿ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು’ ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಚೆನ್ನೈನ ಭಾರತೀಯ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕ ವಿ.ಕಾಮಕೋಟಿ ಘಟಿಕೋತ್ಸವ ಭಾಷಣ ಮಾಡುವರು. ರಾಜ್ಯಪಾಲ ಥಾವರಚಂದ ಗೆಹಲೋತ್ ಅಧ್ಯಕ್ಷತೆ ವಹಿಸುವರು. ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ ಅತಿಥಿಯಾಗಿ ಪಾಲ್ಗೊಳ್ಳುವರು ಎಂದರು.

42,545 ವಿದ್ಯಾರ್ಥಿಗಳಿಗೆ ಪದವಿ


ಮದಕ್‌ಶಿರಾ ಚಿನ್ಮಯ ವಿಕಾಸ

‘ಘಟಿಕೋತ್ಸವದಲ್ಲಿ ಬಿ.ಇ, ಬಿ.ಟೆಕ್ ಸೇರಿ 42,545 ಪದವಿ, ಬಿ.ಪ್ಲಾನ್- 6, ಬಿ.ಆರ್ಕ್ 1,003, ಪಿಎಚ್.ಡಿ 550, 4 ಎಂಎಸ್‌ಸಿ (ಸಂಶೋಧನೆ) ಪದವಿಗಳನ್ನು ಪ್ರದಾನ ಮಾಡಲಾಗುವುದು. ಈ ಬಾರಿ, ಬೆಂಗಳೂರು ಸರ್ ಎಂ.ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿ ಮದಕ್‌ಶಿರಾ ಚಿನ್ಮಯ ವಿಕಾಸ ಅವರು 13 ಚಿನ್ನದ ಪದಕ ಪಡೆದು ಮೊದಲಿಗರಾಗಿದ್ದಾರೆ’ ಎಂದು ಪ್ರೊ.ಎಸ್. ವಿದ್ಯಾಶಂಕರ ಹೇಳಿದರು.

ರಜೆ ಹಾಕಿ ಸರ್ಕಾರಿ ವಾಹನವನ್ನೂ ಕೊಂಡೊಯ್ದ ಅಧಿಕಾರಿ

ಐಆರ್‌ಎ ಕುರ್ಚಿ ಕಿತ್ತಾಟ: ಕಚೇರಿಗೆ ಬೀಗ!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ವರ್ಗಾವಣೆ ಆದೇಶಕ್ಕೆ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ತಡೆ ನೀಡುತ್ತಿದ್ದಂತೆಯೇ ಕೆಎಎಸ್ ಅಧಿಕಾರಿ ಪ್ರಜ್ಞಾ ಅಮ್ಮೆಂಬಳ ಅವರು ಬೆಂಗಳೂರು ಅನೌಪಚಾರಿಕ ಪಡಿತರ ವಲಯದ (ಐಆರ್‌ಎ) ಹೆಚ್ಚುವರಿ ನಿರ್ದೇಶಕರ ಕಚೇರಿ ಬಾಗಿಲಿಗೆ ಬೀಗ ಹಾಕಿ ರಜೆ ಮೇಲೆ ತೆರಳಿದ್ದಾರೆ!

ಪ್ರಜ್ಞಾ ಅವರನ್ನು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಆಯುಕ್ತರ ಕಚೇರಿಯಲ್ಲಿರುವ ಐಆರ್‌ಎ– ಹೆಚ್ಚುವರಿ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡಿ ಜುಲೈ 6ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿತ್ತು. ಅದೇ ದಿನ ಕಚೇರಿಗೆ ಬಂದಿದ್ದ ಅವರು, ಹಾಲಿ ಈ ಹುದ್ದೆಯಲ್ಲಿರುವ ಕೆಎಎಸ್ ಅಧಿಕಾರಿ ವಿ. ಪಾತರಾಜು ಅವರ ಅನುಪಸ್ಥಿತಿಯಲ್ಲೇ ಅಧಿಕಾರ ಸ್ವೀಕರಿಸಿದ್ದರು.

ವರ್ಗಾವಣೆ ಪ್ರಶ್ನಿಸಿ ಜುಲೈ 7ರಂದು ಕೆಎಟಿಗೆ ಅರ್ಜಿ ಸಲ್ಲಿಸಿರುವ ಪಾತರಾಜು, ‘ಕನಿಷ್ಠ ಎರಡು ವರ್ಷಗಳ ಅವಧಿಗೆ ಮುನ್ನ ವರ್ಗಾವಣೆ ಮಾಡುವಂತಿಲ್ಲ ಮತ್ತು ವರ್ಗಾವಣೆ ಮಾಡಿದಾಗ ಹುದ್ದೆ ತೋರಿಸುವುದು ಕಡ್ಡಾಯ ಎಂದು 2013ರ ಜೂನ್ 7ರಂದು ಹೊರಡಿಸಿದ್ದ ಆದೇಶವನ್ನು ಉಲ್ಲಂಘಿಸಿ ನನ್ನನ್ನು ವರ್ಗಾವಣೆ ಮಾಡಲಾಗಿದೆ. 2013ರ ಆದೇಶದ ಅನುಸಾರ ನನ್ನನ್ನು ಹುದ್ದೆಯಲ್ಲಿ ಮುಂದುವರಿಸಬೇಕು’ ಎಂದು ಮನವಿ ಮಾಡಿದ್ದರು.

ಅರ್ಜಿಯ ವಿಚಾರಣೆ ಆರಂಭಿಸಿದ ಕೆಎಟಿ, ವರ್ಗಾವಣೆ ಆದೇಶಕ್ಕೆ ತಡೆ ನೀಡಿ ಜುಲೈ 7ರಂದು ಮಧ್ಯಂತರ ಆದೇಶ ನೀಡಿತ್ತು. ಅರ್ಜಿದಾರ ಪಾತರಾಜು ಮಧ್ಯಂತರ ಆದೇಶದ ಪ್ರತಿಯನ್ನು ಪ್ರಜ್ಞಾ ಹಾಗೂ ಇಲಾಖೆಯ ಅಧಿಕಾರಿಗಳಿಗೆ ತಲುಪಿಸಿ, ಹುದ್ದೆಯಲ್ಲಿ ಮುಂದುವರಿಯಲು ಅನುವು ಮಾಡಿಕೊಡುವಂತೆ ಕೋರಿದ್ದರು.

ಇದಾದ ಬಳಿಕ 15 ದಿನಗಳ ರಜೆ ಪಡೆದಿರುವ ಪ್ರಜ್ಞಾ, ಹೆಚ್ಚುವರಿ ನಿರ್ದೇಶಕರ ಕಚೇರಿಯ ಬಾಗಿಲಿಗೆ ಬೀಗ ಹಾಕಿಕೊಂಡು ಹೋಗಿದ್ದಾರೆ. ಜತೆಗೆ ಇಲಾಖೆಯ ವಾಹನವನ್ನೂ ಕೊಂಡೊಯ್ದಿದ್ದಾರೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಕೆಎಟಿ ಮಧ್ಯಂತರ ಆದೇಶದಂತೆ ಹುದ್ದೆ ಬಿಟ್ಟುಕೊಟ್ಟಿಲ್ಲ ಎಂದು ಪಾತರಾಜು ಅವರು ಪ್ರಜ್ಞಾ ಅವರ ವಿರುದ್ಧ ಕೆಎಟಿಯಲ್ಲಿ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನೂ ದಾಖಲಿಸಿದ್ದರು. ಅಂತಿಮ ಆದೇಶ ಪ್ರಕಟಿಸುವವರೆಗೂ ವರ್ಗಾವಣೆಗೆ ತಡೆ ನೀಡಿದ್ದ ಮಧ್ಯಂತರ ಆದೇಶವನ್ನು ಕೆಎಟಿ ಮುಂದುವರಿಸಿದೆ.

ಪಕ್ಕದ ಕೊಠಡಿಯಲ್ಲೇ ಕೆಲಸ: ಕೆಎಟಿ ಆದೇಶದ ಅನುಸಾರ ಪಾತರಾಜು ಅದೇ ಹುದ್ದೆಯಲ್ಲಿ ಮುಂದುವರಿದಿದ್ದಾರೆ. ಆದರೆ, ಕಚೇರಿ ಬಾಗಿಲಿಗೆ ಬೀಗ ಬಿದ್ದಿರುವುದರಿಂದ ಪಕ್ಕದ ಕೊಠಡಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದಾರೆ.


ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಆಯುಕ್ತೆ ಎಂ. ಕನಗವಲ್ಲಿ ಅವರಿಗೆ ಪತ್ರವೊಂದನ್ನು ನೀಡಿರುವ ಪಾತರಾಜು, ‘ಕೆಎಟಿ ಆದೇಶದಂತೆ ಪ್ರಜ್ಞಾ ಅವರು ಹುದ್ದೆಯನ್ನು ಬಿಟ್ಟುಕೊಟ್ಟಿಲ್ಲ. ನ್ಯಾಯಾಲಯದ ಆದೇಶದಂತೆ ನಾನು ಹುದ್ದೆಯಲ್ಲಿ ಮುಂದುವರಿದಿದ್ದೇನೆ. ಕಚೇರಿ ಬಾಗಿಲಿಗೆ ಬೀಗ ಹಾಕಿರುವುದರಿಂದ ಕೆಲಸಕ್ಕೆ ಅಡ್ಡಿಯಾಗುತ್ತಿದೆ. ಸರ್ಕಾರಿ ವಾಹನವನ್ನೂ ಅವರು ಕೊಂಡೊಯ್ದಿದ್ದು, ನಾನು ಸಾರ್ವಜನಿಕ ಸಾರಿಗೆ ಬಳಸಿಕೊಂಡು ಕರ್ತವ್ಯಕ್ಕೆ ಹಾಜರಾಗುತ್ತಿದ್ದೇನೆ’ ಎಂಬ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಕುರಿತು ಪ್ರಜ್ಞಾ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ. ಪಾತರಾಜು ಅವರನ್ನೂ ಸಂಪರ್ಕಿಸಿದಾಗ, ‘ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ’ ಎಂದರು.

‘ಬೀಗ ಹಾಕಿರುವುದೇ ಆಶ್ಚರ್ಯ’

‘ಕೆಎಟಿ ಆದೇಶದಂತೆ ಐಆರ್‌ಎ–ಹೆಚ್ಚುವರಿ ನಿರ್ದೇಶಕರ ಹುದ್ದೆಯಲ್ಲಿ ವಿ. ಪಾತರಾಜು ಮುಂದುವರಿದಿದ್ದಾರೆ. ಇಲಾಖೆಯ ಸಭೆಗಳಲ್ಲಿ ಅವರೇ ಭಾಗವಹಿಸುತ್ತಿದ್ದಾರೆ. ಹೊಸದಾಗಿ ವರ್ಗಾವಣೆಯಾಗಿ ಬಂದಿದ್ದ ಅಧಿಕಾರಿ ಕಚೇರಿಗೆ ಬೀಗ ಹಾಕಿಕೊಂಡು ಹೋಗಿರುವುದು ಆಶ್ಚರ್ಯ ಉಂಟುಮಾಡಿದೆ’ ಎಂದು ಪ್ರಕರಣದ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಆಯುಕ್ತ ಎಂ.ಟಿ. ರೇಜು ತಿಳಿಸಿದರು.

ಶನಿವಾರ, ಜುಲೈ 29, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 209 | ಪುಟ 18
www.prajavani.net
prajavani.net prajavani prajavani prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,160	19,646	₹61,270 (ಬೆಂಗಳೂರು)	₹75,500 (ಬೆಂಗಳೂರು)	82,24

ಸಚಿವರ ದುರಹಂಕಾರಕ್ಕೆ ಕಿಡಿ: ಮಧ್ಯವರ್ತಿಗಳ ಹಾವಳಿ ತಡೆಗೆ ಶಾಸಕರ ಆಗ್ರಹ

ತಣಿಯದ ಮುನಿಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವು ಸಚಿವರ ಅಸಹಕಾರ ಮತ್ತು ದುರಹಂಕಾರದ ನಡವಳಿಕೆ ವಿರುದ್ಧ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲೇ ಆಕ್ರೋಶ ಹೊರಹಾಕಿದ್ದ ಶಾಸಕರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭರವಸೆಯ ಬಳಿಕವೂ ಮುನಿಸಿನಲ್ಲೇ ಇದ್ದಾರೆ.

ಜಿಲ್ಲಾವಾರು ಸಭೆ ಕರೆದು ಪ್ರತಿಯೊಬ್ಬರ ಸಮಸ್ಯೆ ಪರಿಹರಿಸುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದರೂ, ಹಲವು ಶಾಸಕರ ಕೋಪ ಶಮನವಾಗಿಲ್ಲ. ಕೆಲವು ಸಚಿವರು ನಡವಳಿಕೆ ಬದಲಿಸಿಕೊಂಡು, ಶಾಸಕರನ್ನು ಗೌರವಿಸುವುದನ್ನು ರೂಢಿಸಿಕೊಳ್ಳದಿದ್ದರೆ ಮತ್ತೆ ಸಿಡಿದೇಳುವುದಾಗಿ ಅನೌಪಚಾರಿಕವಾಗಿ ಅಭಿಪ್ರಾಯ ಹಂಚಿಕೊಂಡಿರುವ ಕೆಲವು ಶಾಸಕರು ಸುಳಿವು ನೀಡಿದ್ದಾರೆ.

ಶಾಸಕರ ಕೋಪ ತಣಿಸಲು ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಗುರುವಾರ ನಡೆದ ಶಾಸಕಾಂಗ ಪಕ್ಷದ ಸಭೆ ಗದ್ದಲದಲ್ಲೇ ಆರಂಭವಾಗಿ, ಹಾಗೆಯೇ ಅಂತ್ಯಗೊಂಡಿದೆ. ಆರಂಭದಿಂದ ಅಂತ್ಯದವರೆಗೂ ಕೆಲವು ಸಚಿವರ ವಿರುದ್ಧ ಹರಿಹಾಯ್ದ ಅಸಮಾಧಾನಿತ ಶಾಸಕರು, ಎರಡು ತಿಂಗಳ ಅವಧಿಯಲ್ಲಿ ಎದುರಾದ ಮುಜುಗರದ ಸನ್ನಿವೇಶಗಳನ್ನು ಬಿಚ್ಚಿಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಸಚಿವರು ನಮಗೆ ಗೌರವ ನೀಡುತ್ತಿಲ್ಲ. ಸಹಕಾರವನ್ನೂ ನೀಡುತ್ತಿಲ್ಲ. ಈ ಬಗ್ಗೆ ಚರ್ಚಿಸಲು ಶಾಸಕಾಂಗ ಪಕ್ಷದ ಸಭೆ ಕರೆಯಬೇಕು' ಎಂದು ಆಗ್ರಹಿಸಿದ್ದ 33 ಶಾಸಕರು, ಬಿ.ಆರ್. ಪಾಟೀಲ ನೇತೃತ್ವದಲ್ಲಿ ಪತ್ರ ಬರೆದಿದ್ದರು. ಈ ಕಾರಣಕ್ಕಾಗಿಯೇ ಶಾಸಕಾಂಗ ಪಕ್ಷದ ಸಭೆ ನಿಗದಿಯಾಗಿತ್ತು. ಪತ್ರಕ್ಕೆ ಸಹಿ ಮಾಡಿದ್ದವರಲ್ಲಿ ಬಸವರಾಜ ರಾಯರಡ್ಡಿ, ಕೆ.ಎಂ. ಶಿವಲಿಂಗೇಗೌಡ ಮತ್ತು ಎಸ್.ಎನ್. ನಾರಾಯಣಸ್ವಾಮಿ ಮಾತ್ರ ನಿಲುವು ಸಡಿಲಿಸಿದರು. ಉಳಿದ 30 ಶಾಸಕರೂ ತಮ್ಮ ನಿಲುವಿನಿಂದ ಹಿಂದೆ ಸರಿದಿಲ್ಲ ಎಂದು ಗೊತ್ತಾಗಿದೆ.

11ನೇ ಪುಟ ನೋಡಿ

146 ತಹಶೀಲ್ದಾರ್‌ಗಳ ವರ್ಗಾವಣೆ

ಶಾಸಕರ ಅಸಮಾಧಾನ ಹೊರಬಿದ್ದ ಬೆನ್ನಲ್ಲೇ ಗ್ರೇಡ್–1 ಮತ್ತು ಗ್ರೇಡ್–2 ದರ್ಜೆಯ 146 ತಹಶೀಲ್ದಾರ್‌ಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ತಹಶೀಲ್ದಾರ್‌ಗಳ ವರ್ಗಾವಣೆಗೆ ಸಂಬಂಧಿಸಿದಂತೆ ಒಂದೇ ದಿನ ಮೂರು ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ಅನುಕ್ರಮವಾಗಿ 84, 46 ಮತ್ತು 16 ತಹಶೀಲ್ದಾರ್‌ಗಳ ವರ್ಗಾವಣೆಗೆ ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗಿದೆ.

ಈ ಪೈಕಿ 12 ಮಂದಿ ತಹಶೀಲ್ದಾರ್‌ಗಳನ್ನು ಈಗ ಇರುವ ಸ್ಥಳದಲ್ಲೇ ಮುಂದುವರಿಸಲಾಗಿದೆ. ಅದನ್ನು ವರ್ಗಾವಣೆ ಆದೇಶದಲ್ಲೇ ಪ್ರಕಟಿಸಲಾಗಿದೆ. ಈ ಹಿಂದೆ ವರ್ಗಾವಣೆಯಾಗಿದ್ದು, ಸ್ಥಳ ನಿರೀಕ್ಷಣೆಯಲ್ಲಿದ್ದ ಕೆಲವರಿಗೆ ಶುಕ್ರವಾರದ ಪಟ್ಟಿಗಳಲ್ಲಿ ಹುದ್ದೆ ತೋರಿಸಲಾಗಿದೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹಲವು ಮಂದಿ ತಹಶೀಲ್ದಾರ್‌ಗಳನ್ನು ವರ್ಗಾವಣೆ ಮಾಡಲಾಗಿತ್ತು. ಸಾಮಾನ್ಯ ವರ್ಗಾವಣೆ ಪ್ರಕ್ರಿಯೆ ಆರಂಭವಾದ ಬಳಿಕ ಶಾಸಕರು, ಸಚಿವರು ಮತ್ತು ಪಕ್ಷದ ಮುಖಂಡರ ಶಿಫಾರಸು ಆಧರಿಸಿ ತಹಶೀಲ್ದಾರ್‌ಗಳ ವರ್ಗಾವಣೆ ಪಟ್ಟಿಯೊಂದನ್ನು ಸಿದ್ಧಪಡಿಸಲಾಗಿತ್ತು. ಆದರೆ, ಅದನ್ನು ಪ್ರಕಟಿಸದೇ ಕೆಲವು ದಿನಗಳಿಂದ ತಡೆ ಹಿಡಿಯಲಾಗಿತ್ತು. ಶಾಸಕರು ಪತ್ರದ ಮೂಲಕ ಅಸಮಾಧಾನ ಹೊರಹಾಕಿದ ಬಳಿಕ 170 ತಹಶೀಲ್ದಾರ್‌ಗಳ ವರ್ಗಾವಣೆಗೆ ಆದೇಶ ಹೊರಡಿಸಲು ಸಿದ್ಧತೆ ನಡೆದಿತ್ತು. ಆದರೆ, ಅಂತಿಮವಾಗಿ 146 ಮಂದಿಯ ವರ್ಗಾವಣೆ ಆದೇಶಗಳು ಹೊರಬಿದ್ದಿವೆ ಎಂದು ಮೂಲಗಳು ತಿಳಿಸಿವೆ.

ಪತ್ರ ಹರಿದೆಸೆದ ಸಿದ್ದರಾಮಯ್ಯ

ಸಚಿವರ ವರ್ತನೆಯ ವಿರುದ್ಧ ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗ ಪತ್ರವೊಂದನ್ನು ಶಾಸಕಾಂಗ ಪಕ್ಷದ ಸಭೆಯಲ್ಲೇ ಸಿದ್ದರಾಮಯ್ಯ ಅವರಿಗೆ ನೀಡಿದ್ದು, ಅದನ್ನು ಕಂಡ ಅವರು ಸಿಟ್ಟಿನಿಂದ ಹರಿದೆಸೆದಿದ್ದಾರೆ.



'ಸಚಿವರು ನಮಗೆ ಸ್ಪಂದಿಸುತ್ತಿಲ್ಲ. ಶಾಸಕರಾಗಿದ್ದರೂ ಮರ್ಯಾದೆ ಸಿಗುತ್ತಿಲ್ಲ. ನಮ್ಮನ್ನೇ (ಶಾಸಕರನ್ನು) ಸಚಿವರ ವಿಶೇಷಾಧಿಕಾರಿಗಳನ್ನಾಗಿ ನೇಮಿಸಿ. ಆಗ ಅವರಿಂದ ಕೆಲಸ ಮಾಡಿಸಿಕೊಳ್ಳಲು ಸುಲಭವಾಗುತ್ತದೆ' ಎಂದು ಆ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು ಎಂದು ಮೂಲಗಳು ಹೇಳಿವೆ.



ಎಲ್ಗಾರ್ ಪರಿಷತ್ ಪ್ರಕರಣ: ಇಬ್ಬರಿಗೆ ಜಾಮೀನು

ನವದೆಹಲಿ: ಎಲ್ಗಾರ್ ಪರಿಷತ್–ಮಾವೋವಾದಿಗಳ ಜೊತೆಗಿನ ಸಂಪರ್ಕ ಪ್ರಕರಣದಲ್ಲಿ ಹೋರಾಟಗಾರರಾದ ವೆರ್ನನ್ ಗೊನ್ಸಾಲ್ವೆಸ್, ಅರುಣ್ ಫೆರೀರಾ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ. 11

ಶೌಚಾಲಯದಲ್ಲಿ ಚಿತ್ರೀಕರಣ ನಡೆದಿದೆ ಎನ್ನಲಾದ ಪ್ರಕರಣ

ವಿದ್ಯಾರ್ಥಿನಿಯರಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಉಡುಪಿ: ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ ಮಾಡಿದ್ದಾರೆ ಎನ್ನಲಾದ ಪ್ರಕರಣದಲ್ಲಿ ಮೂವರು ವಿದ್ಯಾರ್ಥಿನಿಯರಿಗೆ ಜಿಲ್ಲಾ ನ್ಯಾಯಾಲಯ ಶುಕ್ರವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಬೆಳಿಗ್ಗೆ ನ್ಯಾಯಾಲಯಕ್ಕೆ ಹಾಜರಾದ ವಿದ್ಯಾರ್ಥಿನಿಯರು, ಜಾಮೀನು ಕೋರಿ ಅರ್ಜಿ ಸಲ್ಲಿಸಿದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರು, 'ತನಿಖೆಗೆ ಸಹಕರಿಸಬೇಕು, ವಿಚಾರಣೆಗೆ ತಪ್ಪದೆ ಹಾಜರಾಗಬೇಕು ಹಾಗೂ ತಲಾ ₹20 ಸಾವಿರ ಮೌಲ್ಯದ ಬಾಂಡ್ ಸಲ್ಲಿಸಬೇಕು' ಎಂಬ ಷರತ್ತಿನೊಂದಿಗೆ ಜಾಮೀನು ಮಂಜೂರು ಮಾಡಿದರು.

ಕಾಲೇಜಿನ ಆಡಳಿತ ಮಂಡಳಿಗೂ ಜಿಲ್ಲಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಆಡಳಿತ ಮಂಡಳಿ ವಿರುದ್ಧ ಮಲ್ಪೆ ಠಾಣೆಯಲ್ಲಿ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿದ್ದರು. ಆಡಳಿತ ಮಂಡಳಿಯ ಪರವಾಗಿ ನಿರ್ದೇಶಕಿ ರಶ್ಮಿ ಕೃಷ್ಣಪ್ರಸಾದ್ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನು ಅರ್ಜಿ ಸಲ್ಲಿಸಿದರು.



ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ ನಡೆದಿದೆ ಎನ್ನಲಾದ ಪ್ರಕರಣದ ಸಮಗ್ರ ತನಿಖೆಗೆ ಒತ್ತಾಯಿಸಿ ಉಡುಪಿಯಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿತು

ಪ್ರತಿಭಟನೆ: ಪ್ರಕರಣದ ಸಮಗ್ರ ತನಿಖೆಗೆ ಒತ್ತಾಯಿಸಿ ನಗರದಲ್ಲಿ ಬಿಜೆಪಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಉಡುಪಿ ಶಾಸಕ ಯಶ್‌ಪಾಲ್ ಎ. ಸುವರ್ಣ, 'ವಿಡಿಯೊ ಚಿತ್ರೀಕರಣ ಮಾಡಿರುವ ಪ್ರಕರಣವನ್ನು ಗೃಹಸಚಿವರು ಮಕ್ಕಳಾಟ ಎಂದು ಕರೆದಿದ್ದಾರೆ. ಇದು ಮಕ್ಕಳಾಟವಲ್ಲ, ಹಿಂದೆ ಅವರ ಪುತ್ರ ಲಿಂಗ ಬದಲಾವಣೆ ಮಾಡಿಕೊಂಡಿದ್ದರಲ್ಲ, ಅದು ಮಕ್ಕಳಾಟ' ಎಂದು ವಾಗ್ದಾಳಿ ನಡೆಸಿದರು.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೆಳೆ ವಿಮೆ: ತೊಡಕಾದ 'ಫ್ರೂಟ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿನ ಮುಂಗಾರು ಹಂಗಾಮಿನ ವಿವಿಧ ಬೆಳೆಗಳಿಗೆ ವಿಮಾ ಕಂತು ಪಾವತಿಸಲು ರೈತ ಸಮುದಾಯಕ್ಕೆ 'ರೈತ ನೋಂದಣಿ ಮತ್ತು ಏಕೀಕೃತ ಫಲಾನುಭವಿಗಳ ಮಾಹಿತಿ ವ್ಯವಸ್ಥೆ' (FRUITS) ತೊಡಕಾಗಿದೆ.

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆ ಅಡಿ ವಿಮಾ ಕಂತು ಪಾವತಿಸುವ ಮೊದಲು ಆರ್‌ಟಿಸಿಯಲ್ಲಿ (ಪಹಣಿ) ಹೆಸರಿರುವ ಎಲ್ಲರ ದಾಖಲೆಗಳನ್ನು 'ಫ್ರೂಟ್ಸ್ ಐಡಿ'ಗೆ ಅಪ್‌ಲೋಡ್ ಮಾಡಬೇಕು. ಒಂದು ಆರ್‌ಟಿಸಿಯಲ್ಲಿ 10 ರೈತರ ಹೆಸರುಗಳು ಇದ್ದರೆ ಆ ಎಲ್ಲ ರೈತರ ಹೆಸರು, ಅವರ ಆಧಾರ್, ಕಂದಾಯ ರಶೀದಿ, ಬ್ಯಾಂಕ್ ಖಾತೆಯ ವಿವರ ಸೇರಿದಂತೆ ಕಂದಾಯ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕಿದೆ.

ಹೀಗೆ ಎಲ್ಲರ ದಾಖಲೆಗಳನ್ನು ಹೊಂದಿಸಿಕೊಂಡು ನೀಡಲು ಸಾಕಷ್ಟು ಸಮಯ ಬೇಕಾಗುತ್ತದೆ. ದಾಖಲೆ ಅಪ್‌ಲೋಡ್ ಮಾಡಿದ ನಂತರ ಬೆಂಗಳೂರಿನ ಕೇಂದ್ರ ಕಚೇರಿಯಿಂದ ಅನುಮೋದನೆಗೊಳ್ಳಲು ಒಂದೆರಡು ದಿನಗಳಾಗುತ್ತವೆ. ನಂತರವೇ ವಿಮಾಕಂತು ಪಾವತಿಸಬೇಕಾಗುತ್ತದೆ. ನೀರಾವರಿ ಹಾಗೂ ಮಳೆ ಆಶ್ರಿತ ಪ್ರದೇಶದ ಮೆಕ್ಕೆಜೋಳ ಸೇರಿದಂತೆ ಕೆಲ ಬೆಳೆಗಳಿಗೆ ವಿಮಾ ಕಂತು ಪಾವತಿಸಲು ಇದೇ ಜುಲೈ 31 ಕೊನೆಯ ದಿನ. ಹಾಗಾಗಿ, ಲಕ್ಷಾಂತರ ರೈತರಿಗೆ ಕಂತು ಪಾವತಿಸಲು ಸಾಧ್ಯವಾಗಿಲ್ಲ. ವಿಮಾ ಕಂತು ಪಾವತಿಸುವ ಅವಧಿಯನ್ನು ಕನಿಷ್ಠ 20 ದಿನಗಳು ವಿಸ್ತರಿಸಬೇಕು ಎಂದು ರಾಜ್ಯ ರೈತಸಂಘದ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ ಹಾಗೂ ಹಲವು ರೈತರು ಒತ್ತಾಯಿಸಿದ್ದಾರೆ.

ಬೆಳೆವಿಮೆ ಸೌಲಭ್ಯ ಅರ್ಹ ರೈತರಿಗೆ ದೊರಕಬೇಕು ಎನ್ನುವ ಆಶಯದಿಂದ ಫ್ರೂಟ್ಸ್ ಐಡಿಯಲ್ಲಿ ದಾಖಲೆ ಸಲ್ಲಿಕೆಗೆ ಸೂಚಿಸಲಾಗಿದೆ. ರೈತರಿಗೆ ಸಮಸ್ಯೆ ಇದ್ದರೆ ಸಕಾರಾತ್ಮಕವಾಗಿ ಸ್ಪಂದಿಸಲಾಗುವುದು

ವೈ.ಎಸ್.ಪಾಟೀಲ, ಆಯುಕ್ತ, ಕೃಷಿ ಇಲಾಖೆ

10ನೇ ಪುಟ ನೋಡಿ

ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೂ ಸೂಪರ್ ನ್ಯೂಮರರಿ ಹುದ್ದೆ ಸೃಜಿಸಲು ತೀರ್ಮಾನ

ಮೈತ್ರಿಗೆ ಎ.ಸಿ ಹುದ್ದೆ: ಡಿಪಿಎಆರ್‌ಗಿಲ್ಲ ಕಿಮ್ಮತ್ತು

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಗ್ರೂಪ್ 'ಎ' ವೃಂದದ ಕೆಎಎಸ್ ಹುದ್ದೆಗೆ ತಮ್ಮನ್ನು ನೇಮಿಸುವಂತೆ ಮೈತ್ರಿ ಎಚ್. ಪಿ.ಎಸ್. ಅವರು ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಅಭಿಪ್ರಾಯ ನೀಡಿದರೂ, ಅದನ್ನು ಬದಿಗಿಟ್ಟ ಸರ್ಕಾರ, ಅವರಿಗಾಗಿ ಸೂಪರ್ ನ್ಯೂಮರರಿ ಹುದ್ದೆ ಸೃಜಿಸಲು ನಿರ್ಧರಿಸಿದೆ.

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯಲ್ಲಿ ಪರಿಶಿಷ್ಟ ಪಂಗಡ ಮಹಿಳಾ ಮೀಸಲಾತಿಯಡಿ ಈ ಹುದ್ದೆಯನ್ನು ನೀಡಬೇಕೆಂದು ಮೈತ್ರಿ ಮನವಿ ಸಲ್ಲಿಸಿದ್ದರು. ಗುರುವಾರ ನಡೆದ ಸಚಿವ ಸಂಪುಟ ಸಭೆಗೆ ಡಿಪಿಎಆರ್ ಸಲ್ಲಿಸಿದ್ದ ಟಿಪ್ಪಣಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಆಗ ಆಯ್ಕೆಯಾದವರಿಗೆ 'ಕರ್ನಾಟಕ ನಾಗರಿಕ ಸೇವಾ (2011ನೇ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಹಾಗೂ ನೇಮಕಾತಿಯ ಸಿಂಧುಗೊಳಿಸುವಿಕೆ) ಕಾಯ್ದೆ– 2022' ರೂಪಿಸಿ ನೇಮಕಾತಿ ಆದೇಶ ನೀಡಲಾಗಿದೆ. ಕೆಪಿಎಸ್‌ಸಿ ಪ್ರಕಟಿಸಿದ ಆಯ್ಕೆ ಪಟ್ಟಿ ಪ್ರಕಾರ ನೇಮಕಾತಿ ಮಾಡಬೇಕೆಂದು ಕಾಯ್ದೆ ಹೇಳುತ್ತದೆ. ಹೀಗಾಗಿ, ಪಟ್ಟಿ ಬದಲಿಸಿ ಮೈತ್ರಿಗೆ ಕೆಎಎಸ್ ಹುದ್ದೆ ನೀಡಲು ಕಾನೂನಿನಲ್ಲಿ ಅವಕಾಶ ಇಲ್ಲ. ಒಂದೊಮ್ಮೆ ಹಾಗೆ ಮಾಡಿದರೆ, ಪಟ್ಟಿಯಲ್ಲಿರುವ ಎಲ್ಲ ಅಭ್ಯರ್ಥಿಗಳು ನ್ಯಾಯಾಲಯದ ಮೊರೆ ಹೋಗಬಹುದು, ಇದು ಅನಗತ್ಯ ದಾವೆಗಳಿಗೆ ಕಾರಣವಾಗುತ್ತದೆ ಎಂದು ಡಿಪಿಎಆರ್ ಹೇಳಿದೆ.

ಚಂದ್ರಕಾಂತ್, ಸಿದ್ದೇಶ್ವರ ಮತ್ತು ಆರ್. ಶಿಲ್ಪಾ ಎಂಬವರ ನೇಮಕಾತಿ ಪ್ರಕರಣ ಮತ್ತು ಪಟ್ನಾ ಹೈಕೋರ್ಟ್‌ನ ಆದೇಶವೊಂದನ್ನು ಉಲ್ಲೇಖಿಸಿ, ಮೈತ್ರಿಗೆ ಸೂಪರ್ ನ್ಯೂಮರರಿ ಹುದ್ದೆ ಸೃಷ್ಟಿಸಿ ಹುದ್ದೆ ನೀಡಬಹುದು ಎಂದು ಕಾನೂನು ಇಲಾಖೆ ಹೇಳಿತ್ತು.

7ನೇ ಪುಟ ನೋಡಿ

ಹಲವು ಸುತ್ತಿನ ಕಸರತ್ತು

2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಕೆಪಿಎಸ್‌ಸಿ ನಡೆಸಿದ್ದ ನೇಮಕಾತಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿ (ಗ್ರೂಪ್ 'ಎ') ಹುದ್ದೆಗೆ ಮೈತ್ರಿ ಆಯ್ಕೆಯಾಗಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ, ಇದೇ ಫೆ. 9ರಂದು ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿಯೂ ಡಿಪಿಎಆರ್ ಅಭಿಪ್ರಾಯವನ್ನು ತಿರಸ್ಕರಿಸಿ, ಹುದ್ದೆ ಸೃಜಿಸುವ ಬಗ್ಗೆ ಚರ್ಚೆ ನಡೆದಿತ್ತು. ಹೊಸ ಸರ್ಕಾರ ಬಂದ ಬಳಿಕ ಡಿಪಿಎಆರ್ ಮತ್ತೆ ಕಡತ ಮಂಡಿಸಿತ್ತು. ಆಗ ಸಚಿವ ಸಂಪುಟಕ್ಕೆ ಮಂಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದರು. ಜೂನ್ 14ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ, ಕಾನೂನು ಸಚಿವರ ಅಭಿಪ್ರಾಯ ಪಡೆದು ಮರು ಮಂಡಿಸುವಂತೆ ಸೂಚಿಸಲಾಗಿತ್ತು.

ಸಚಿವಾಲಯ ನೌಕರರ ಸಂಘ: ಗುರುಸ್ವಾಮಿ ಗುಂಪಿಗೆ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಚಿವಾಲಯ ನೌಕರರ ಸಂಘಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಸಂಘದ ಹಾಲಿ ಅಧ್ಯಕ್ಷ ಗುರುಸ್ವಾಮಿ ನೇತೃತ್ವದ ಗುಂಪು ಸೋಲು ಕಂಡಿದೆ.

ಕಾರ್ಯಕಾರಿ ಮಂಡಳಿಯ 23 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಬೆಂಬಲಿತ 20 ಅಭ್ಯರ್ಥಿಗಳು ಗೆಲುವು ಪಡೆದರೆ, ಗುರುಸ್ವಾಮಿ ಸೇರಿದಂತೆ ಅವರ ಗುಂಪಿನ ಮೂವರು ವಿಜಯಶಾಲಿಗಳಾಗಿದ್ದಾರೆ. ಸಂಘದ ಉಪಾಧ್ಯಕ್ಷ ಪಿ.ಎಸ್.ಹರ್ಷ, ರಾಜ್ಯ ಪರಿಷತ್ ಸದಸ್ಯ ಬಿ.ಎಸ್.ಲಕ್ಷ್ಮಣ್, ರಮೇಶ್ ಜಿ.ಸಂಗಾ ಆಯ್ಕೆಯಾಗಿದ್ದಾರೆ. ಸಚಿವಾಲಯ ನೌಕರರ ಸಂಘದ ಕಾರ್ಯಕಾರಿ ಮಂಡಳಿ ಸ್ಥಾನಕ್ಕೆ ಸ್ಪರ್ಧಿಸಿದ್ದ ರಾಜ್ಯ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ಶಾಂತಾರಾಮ್ ಸೋಲು ಕಂಡಿದ್ದಾರೆ. 2,200 ಮತದಾರರು ಇದ್ದು, 1900ಕ್ಕೂ ಹೆಚ್ಚು ಮತಗಳು ಚಲಾವಣೆಯಾಗಿದ್ದವು.

'ಕರ್ನಾಟಕ ಸಚಿವಾಲಯ ನೌಕರರ ಸಂಘ ಚುನಾವಣೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಬೆಂಬಲಿತ ಅಭ್ಯರ್ಥಿಗಳು ಗೆಲುವು ಪಡೆದಿದ್ದಾರೆ. ಆ ಮೂಲಕ ಎರಡೂ ಸಂಘಗಳ ಮಧ್ಯೆ ಇದ್ದ ಭಿನ್ನಮತ ಶಮನವಾಗಿದೆ. ಎಲ್ಲರೂ ಒಟ್ಟಿಗೆ ಸೇರಿ ನೌಕರರ ಹಿತಾಸಕ್ತಿಗಾಗಿ ಕೆಲಸ ಮಾಡುತ್ತೇವೆ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಿನಾಶದ ಅಂಚಿನಲ್ಲಿರುವ ವನ್ಯಜೀವಿಗಳ ಸಂರಕ್ಷಣೆಗೆ ರೂಪಿಸಿರುವ ಡಿಜಿಟಲ್ ವೇದಿಕೆಗೆ ಚಾಲನೆ: ಮುಖ್ಯ ಅತಿಥಿಗಳು: ಪ್ರಿಯಾಂಕ್ ಖರ್ಗೆ, ಈಶ್ವರ ಖಂಡ್ರೆ, ಎ.ಕೆ. ಸಿಕಂದ್ರನ್, ವಿಶ್ವಜಿತ್ ರಾಣೆ, ಗೋಪಾಲ ರೆಡ್ಡಿ, ಆಯೋಜನೆ: ಏಟ್ರಿಯಾ ವಿಶ್ವವಿದ್ಯಾಲಯ, ಸ್ವಿಕ್ಸ್, ಎಫ್‌ಕೆಸಿಸಿಐ, ಸ್ಥಳ: ರಾಡಿಸನ್ ಬ್ಲೂ ಏಟ್ರಿಯಾ, ಬೆಳಿಗ್ಗೆ 9.30


'ಪುರುಷೋತ್ತಮಾಯಣ' ಕಾದಂಬರಿ ಲೋಕಾರ್ಪಣೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಜಿ. ರಾಮಕೃಷ್ಣ, ಸಾನ್ನಿಧ್ಯ: ಸಿದ್ಧರಾಮಾನಂದಪುರಿ ಸ್ವಾಮೀಜಿ, ಮುಖ್ಯ ಅತಿಥಿಗಳು: ಸತೀಶ್ ಜಾರಕಿಹೊಳಿ, ಎಚ್.ಎಂ. ರೇವಣ್ಣ, ಎಸ್. ಸೆಲ್ವಕುಮಾರ್, ಸಿ. ಸತ್ಯನಾರಾಯಣ, ಕೃತಿ ಪರಿಚಯ: ಪುರುಷೋತ್ತಮ ಬಿಳಿಮಲೆ, ಉಪಸ್ಥಿತಿ: ಪುರುಷೋತ್ತಮ ದಾಸ್ ಹೆಗ್ಗಡೆ, ಆಯೋಜನೆ: ವಂಶಿ ಪ್ರಕಾಶನ, ಸ್ಥಳ: ಕೆ.ಆರ್.ಡಿ.ಸಿ.ಎಲ್. ಸಭಾಂಗಣ, (ಒರಾಯನ್ ಮಾಲ್ ಎದುರು), ಸಂಪರ್ಕ ಸೌಧ, ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಳಿಗ್ಗೆ 10

ಪ್ರಥಮ ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಪುಡಿಕೆ ಪಿ. ಕೃಷ್ಣ, ಮುಖ್ಯ ಅತಿಥಿಗಳು: ಸಿ.ಕೆ. ರಾಮೇಗೌಡ, ಕೃತಿ ಲೋಕಾರ್ಪಣೆ: ಎಸ್.ಜಿ. ಸಿದ್ದರಾಮಯ್ಯ, ವಾರ್ಷಿಕ ವರದಿ: ರೂಪಾ ಶಿವಾನಂದ, ಅಧ್ಯಕ್ಷತೆ: ಕೆ.ಎಂ. ರೇವಣ್ಣ, ಆಯೋಜನೆ: ಸಾಹಿತ್ಯ ಸರಸ್ವತಿ ಕಲಾ ವೇದಿಕೆ, ಸ್ಥಳ: ದತ್ತ ಸಭಾಂಗಣ, ಶೇಷಾದ್ರಿಪುರಂ ಕೇಂದ್ರ ಕಾಲೇಜು, ಬೆಳಿಗ್ಗೆ 10

'ಜಗೋಳ ದರ್ಶನ' ಕೃತಿ ಲೋಕಾರ್ಪಣೆ: ಎ.ಎಸ್. ಕಿರಣ್ ಕುಮಾರ್, ಮುಖ್ಯ ಅತಿಥಿ: ಎಂ.ಆರ್.ಎನ್. ಮೂರ್ತಿ, ಕೃತಿಯ ಸಂಪಾದಕರು: ಬಿ.ಎಸ್. ಶೈಲಜಾ, ಟಿ.ಆರ್. ಅನಂತರಾಮು, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ರಜತ ಮಹೋತ್ಸವ: ಮುಖ್ಯ ಅತಿಥಿ: ನ್ಯಾ.ಎಸ್. ಅಬ್ದುಲ್ ನಜೀರ್, ಅಧ್ಯಕ್ಷತೆ: ನ್ಯಾ.ಎ.ಎಸ್. ಬೋಪಣ್ಣ, ಗೌರವ ಅತಿಥಿಗಳು: ನ್ಯಾ.ಬಿ.ವಿ. ನಾಗರತ್ನ, ನ್ಯಾ. ಅರವಿಂದ್ ಕುಮಾರ್, ನ್ಯಾ. ಪ್ರಸನ್ನ ಬಿ. ವರಾಳೆ, ನ್ಯಾ.ಜಿ. ನಾಗೇಂದ್ರ, ಆಯೋಜನೆ: ರಾಮಯ್ಯ ಕಾನೂನು ವಿದ್ಯಾಲಯ, ಸ್ಥಳ: ಎಂ.ಎಸ್. ರಾಮಯ್ಯ ತಾಂತ್ರಿಕ ವಿದ್ಯಾಲಯದ ಆವರಣ, ಎಂ.ಎಸ್.ಆರ್. ನಗರ, ಬೆಳಿಗ್ಗೆ 10.30

ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಹಾಗೂ ಮಹಿಳಾ ಘಟಕದ ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಸಾನ್ನಿಧ್ಯ: ಶಿವಯೋಗಾನಂದಪುರಿ ಸ್ವಾಮೀಜಿ, ಮುಕ್ತಾನಂದ ಸ್ವಾಮೀಜಿ, ಬಸವಮಾಚಿದೇವ ಸ್ವಾಮೀಜಿ, ಅಧ್ಯಕ್ಷತೆ: ಸಿ. ನಂಜಪ್ಪ, ಆಯೋಜನೆ: ಕರ್ನಾಟಕ ರಾಜ್ಯ ಮಡಿವಾಳರ ಸಂಘ, ಸ್ಥಳ: ವೈ ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ, ಬೆಳಿಗ್ಗೆ 11



ದೊಡ್ಡ ರಂಗೇಗೌಡ

ದೊಡ್ಡ ರಂಗೇಗೌಡ ಅವರಿಗೆ 'ಇಂಡಿಯನ್ ಬುಕ್ ಆಫ್ ರೆಕಾರ್ಡ್' ದಾಖಲೆ ಪತ್ರ ಪ್ರದಾನ: ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅನುಮೋದಿಸಿ ದವರು: ಪುಡಿಕೆ ಪಿ. ಕೃಷ್ಣ, ಡಿ.ಎಸ್. ವೀರಯ್ಯ, ಸುಚೇಂದ್ರ ಪ್ರಸಾದ್, ಸಹನಾ, ಶಾಂತರಾಜು, ಆಯೋಜನೆ: ಕಾವ್ಯಸ್ಪಂದನ ಪಬ್ಲಿಕೇಷನ್ಸ್, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

'ಮೀಟ್ ಅಂಡ್ ಗ್ರೀಟ್ ವಿತ್ ಸೆಲಿಬ್ರಿಟಿ' ಕಾರ್ಯಕ್ರಮ: ಅತಿಥಿ: ರಮೇಶ್ ಪಂಡಿತ್, ಆಯೋಜನೆ ಹಾಗೂ ಸ್ಥಳ: ರಾಯಲ್ ಪಿಯು ಕಾಲೇಜ್, ಮತ್ತಿಕೆರೆ, ಬೆಳಿಗ್ಗೆ 11

ಚಿಂತನ ಸಂವಾದ: 'ಮಹಿಳೆ: ವರ್ತಮಾನದ ಶೋಷಣೆ ಮತ್ತು ಹಿಂಸೆ', ಭಾಗವಹಿಸುವವರು: ಕೆ.ವಿ. ನ್ಯಾನ್ಸಿ, ಮಾವಳ್ಳಿ ಶಂಕರ್, ರೂಪಾ ನಾಗೇನಹಳ್ಳಿ, ಆಯೋಜನೆ: ಬಯಲು ಬಳಗ, ಸ್ಥಳ: ಪ್ರೊ ಭೀಮ್ ಭವನ, ರವೀಂದ್ರ ಕಲಾಕ್ಷೇತ್ರ ಹಿಂಭಾಗ, ಮಧ್ಯಾಹ್ನ 3

ಅವೆಕ್ ಸಂಸ್ಥೆ ಸದಸ್ಯರ ಮಿಲನ, 40ನೇ ವಾರ್ಷಿಕೋತ್ಸವ: ಮುಖ್ಯ ಅತಿಥಿ: ರಾಮಲಿಂಗಾರೆಡ್ಡಿ, ಗೌರವ ಅತಿಥಿಗಳು: ಏಕ್‌ರೂಪ್ ಕೌರ್, ಎನ್.ವಿ. ಪ್ರಸಾದ್, ಯೋಗೇಶ್ ಎ.ಎಂ., ಮಹೇಶ್ ಎಂ., ಮಧುರ ಛತ್ರಪತಿ, ಅಧ್ಯಕ್ಷತೆ: ಪ್ರಿಯಕೃಷ್ಣ, ಆಯೋಜನೆ: ಅವೆಕ್–ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ, ಸ್ಥಳ: ಕಾಶಿಯಾ ಸಭಾಂಗಣ, ವಿಜಯನಗರ, ಮಧ್ಯಾಹ್ನ 3

'ಮೊಹಮ್ಮದ್ ರಫಿ' ಸ್ವರಾರ್ಪಣ ಸಂಗೀತ ಸಂಜೆ: ಗೌರವ ಅತಿಥಿ: ಮೊಹಮ್ಮದ್ ಅಸ್ಲಾಮ್, ಆಯೋಜನೆ: ಸ್ವಜನ ಲಲಿತಕಲಾ ವೇದಿಕೆ, ಸ್ಥಳ: ಶುಕ್ರ ಆಡಿಟೋರಿಯಂ, ಮಲ್ಲೇಶ್ವರ, ಸಂಜೆ 4

ಪ್ರೊ. ಪ್ರೇಮಶೇಖರ ಅವರೊಂದಿಗೆ ಮಾತುಕತೆ: ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ಕೆಂಪೇಗೌಡನಗರ, ಸಂಜೆ 4.30

ನಟ ಕಲ್ಯಾಣ್ ಕುಮಾರ್ ಅವರ ಜನ್ಮದಿನದ ಪ್ರಯುಕ್ತ 'ಚಲುವಾಂತ ಚೆನ್ನಿಗನೆ ನಲಿದಾಡು ಬಾ' ಗೀತಗಾಯನ: ಅತಿಥಿ: ಕೆ.ಆರ್. ರಘು, ಎಚ್.ಎಸ್. ಶ್ರೀನಿವಾಸಮೂರ್ತಿ, ಆರ್. ಶ್ರೀನಾಥ್, ಸಿ. ಶೈಲಜಾ, ಜ್ಯೋತಿ ರವಿಪ್ರಕಾಶ್, ಆಯೋಜನೆ ಹಾಗೂ ಸ್ಥಳ: ಹಿರಿಯ ನಾಗರಿಕರ ಸಂಘ, ಆರ್.ಬಿ.ಐ. ಬಡಾವಣೆ, ಸಂಜೆ 5



ಜಯಂತ ಕಾಯ್ಕಿಣಿ

'ಕಾವ್ಯ ಪ್ರೇರಣೆ' ವಿಶೇಷ ಉಪನ್ಯಾಸ: ಜಯಂತ ಕಾಯ್ಕಿಣಿ, ಆಯೋಜನೆ: ಸುಚಿತ್ರ, ಸ್ಥಳ: ಭಾನು ನೆನಪಿನ ನಾಣಿ ಅಂಗಳ, ಸುಚಿತ್ರ ಪೂರ್ಣಂಕರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 5.30

66ನೇ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಡಿ.ಕೆ. ಶಿವಕುಮಾರ್, 'ಜೀವಮಾನ ಸಾಧನೆ ಪ್ರಶಸ್ತಿ' ಪುರಸ್ಕೃತರು: ಎಸ್.ಎಂ. ಕೃಷ್ಣ, ಗೌರವ ಅತಿಥಿಗಳು: ಕೆ. ಉಲ್ಲಾಸ್ ಕಾಮತ್, ಕೆ.ಎಸ್. ನಾರಾಯಣಸ್ವಾಮಿ, ಆಯೋಜನೆ: ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್, ಸ್ಥಳ: ಚಾನ್ಸರಿ ಪೆವಿಲಿಯನ್, ರೆಸಿಡೆನ್ಸಿ ರಸ್ತೆ, ಸಂಜೆ 5.30

ರಂಗೋತ್ಸವ 2023: ಉದ್ಘಾಟನೆ: ಪುಡಿಕೆ ಪಿ. ಕೃಷ್ಣ, ಅಧ್ಯಕ್ಷತೆ: ವೇಮಗಲ್ ನಾರಾಯಣಸ್ವಾಮಿ, ನಾಟಕ: 'ವಿಕಟ ವಿಲಾಸ', ಆಯೋಜನೆ: ರಂಗಾಭರಣ ಕಲಾಕೇಂದ್ರ, ಸ್ಥಳ: ಚಂದ್ರಪ್ರಿಯ ರಂಗಮಂದಿರ, ರಂಗಾಭರಣ ಕಲಾಕೇಂದ್ರ, ಕೆಂಬಿ ಬಡಾವಣೆ, ಸಂಜಯನಗರ, ಸಂಜೆ 6

24ನೇ ವರ್ಷದ ಸಂಭ್ರಮಾಚರಣೆ: ಅಧ್ಯಕ್ಷತೆ: ಎಚ್.ಎಸ್. ವೆಂಕಟೇಶಮೂರ್ತಿ, ಉದ್ಘಾಟನೆ: ವಿ. ಲಕ್ಷ್ಮೀನಾರಾಯಣ್, ಭಾವಗೀತೆ ಲೋಕಾರ್ಪಣೆ: ಬಿ.ಆರ್. ಲಕ್ಷ್ಮಣರಾವ್, ಮುಖ್ಯ ಅತಿಥಿ: ತೇಜಸ್ವಿನಿ ಅನಂತಕುಮಾರ್, ಉಪಾಸನಾ ಪ್ರಶಸ್ತಿ: ಬಿ.ವಿ. ಪ್ರವೀಣ್, ನಾದೋಪಾಸನಾ ಪ್ರಶಸ್ತಿ: ಯಶೋಧರ, ಸಂಗೀತ ನಿರ್ಮಾಣ ಪ್ರಶಸ್ತಿ: ಪಿ. ನಾಗರಾಜು, ಆಯೋಜನೆ: ಉಪಾಸನಾ, ಸ್ಥಳ: ಪತ್ತಿ ಸಭಾಂಗಣ, ರಾಮಮಂದಿರ ಆವರಣ, ಎನ್.ಆರ್. ಕಾಲೊನಿ, ಸಂಜೆ 6

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ವೇಣು ವಾದನ: ಅಮಿತ್ ಎ. ನಾಡಿಗ, ಮೃದಂಗ: ತುಮಕೂರು ಬಿ. ರವಿಶಂಕರ್, ಘಟ: ತುಮಕೂರು ಬಿ. ಶಶಿಶಂಕರ್, ಆಯೋಜನೆ: ವಿದ್ವಾನ್ ಶ್ರೀ ಕೆ.ಎಸ್. ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಜಯಮಾರುತಿ ದೇವಸ್ಥಾನ, ಕಮಲಾನಗರ ಮುಖ್ಯರಸ್ತೆ, ಬಸವೇಶ್ವರ ನಗರ, ಸಂಜೆ 6

ಪ್ರವಚನ ಹಾಗೂ ಕಾರ್ಯಕ್ರಮ: ಭರತನಾಟ್ಯ: ನಯನಾ ಶ್ರೀನಿವಾಸ ಮೂರ್ತಿ, ನಟೇಶ ನೃತ್ಯಾಲಯದ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಹಾಸ್ಯೋತ್ಸವ: 'ನಿತ್ಯ ಜೀವನಕ್ಕೆ ಹಾಸ್ಯ ರಸಧಾರೆ', ಉಪನ್ಯಾಸಕ: ಬೇಲೂರು ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ವಿಶ್ವೇಶ್ವರ ದೇವಸ್ಥಾನ, 27ನೇ ಮುಖ್ಯ ರಸ್ತೆ, ಬಿಟಿಎಂ 2ನೇ ಹಂತ, ಸಂಜೆ 6.30

'ದಿ ಕಾನ್ಫರೆನ್ಸ್ ಆಫ್ ದಿ ಬರ್ಡ್ಸ್' ಸಂಗೀತ ಕಾರ್ಯಕ್ರಮ: ಅತಿಥಿಗಳು: ಸಂತೋಷ್ ಲಾಡ್, ಪ್ರಿಯಾಂಕಾ ಅರೋರಾ, ಸಿಮೋನ್ ಟೋಪ್ಪಾ, ಆಯೋಜನೆ: ಟೆಕ್ ಫಾರ್ ಇಂಡಿಯಾ, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಮಲ್ಲೇಶ್ವರ, ಸಂಜೆ 7

'ಎನ್ವೈರಿಂಗ್ ಸ್ಟೋರೀಸ್ ಆಫ್ ಗ್ಲೋಬಲ್ ವಾಕ್' ಉಪನ್ಯಾಸ: ಪುಷ್ಪನಾಥ್ ಕೃಷ್ಣಮೂರ್ತಿ, ಗೌರವ ಅತಿಥಿ: ವಾಸಂತಿ ಹರಿಪ್ರಕಾಶ್, ಆಯೋಜನೆ: ಫಾರ್ಗಾನಿಟ್ ಫುಡ್, ಸ್ಥಳ: ದಿ ಗ್ರೀನ್ ಪಾತ್ ಆರ್ಗನಿಕ್ ರೆಸ್ಟೋರೆಂಟ್, ಸಂಜೆ 7

'ಅಧಿಕ ಮಾಸದ ಮಹಾತ್ಮೆ' ಬಗ್ಗೆ ಧಾರ್ಮಿಕ ಪ್ರವಚನ: ವಿನಾಯಕಾಚಾರ್ಯ ನಾಮಣ್ಣವರ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

'ವಿದ್ದಿಂಗ್ ರಿಂಗ್' ನಾಟಕ ಪ್ರದರ್ಶನ: ರಚನೆ: ಅಭಿಷೇಕ್ ಅಯ್ಯಂಗಾರ್, ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7.15



'ಮಾನಸ ಪುತ್ರ' ನಾಟಕ

'ಮಾನಸ ಪುತ್ರ' ನಾಟಕ ಪ್ರದರ್ಶನ: ಬೀಚಿಯವರ ಆತ್ಮಚರಿತ್ರೆ 'ನನ್ನ ಭಯಾಗ್ರಫಿ' ಆಧಾರಿತ, ನಿರ್ದೇಶನ: ಬಸವರಾಜ ಎಮ್ಮಿಯವರ, ಸಂಗೀತ: ಸತ್ಯ ರಾಧಾಕೃಷ್ಣ, ನಿರ್ವಹಣೆ: ಸಿದ್ದರಾಮು, ವಸ್ತ್ರ ವಿನ್ಯಾಸ: ನಮಿತಾ ರಾಮು, ವಿನಯ್ ಎಲ್., ಆಯೋಜನೆ: ಕಲಾವಿಲಾಸ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ವ್ಯಾಸ ಜಯಂತಿ ಪ್ರಯುಕ್ತ 'ಸಾಹಿತಿಗಳೊಂದಿಗೆ ಸಂವಾದ' ಕಾರ್ಯಕ್ರಮ: ಸಾಹಿತಿ: ಎಂ.ಎಸ್. ನರಸಿಂಹಮೂರ್ತಿ, ಅಧ್ಯಕ್ಷತೆ: ಶಾಂತಾ ನಾಗಮಂಗಲ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ಲಿಟಲ್ ಸ್ಟಾರ್ಸ್ ಪ್ರೀಸ್ಕೂಲ್ ಮತ್ತು ಡೇ ಕೇರ್ ಸೆಂಟರ್, ಸಪ್ತಗಿರಿ ನಗರ 5ನೇ ಹಂತ, ಹೊಸಕೆರೆಹಳ್ಳಿ, ಸಂಜೆ 5

ನ್ಯಾಯಮಿತ್ರ ಸಹಕಾರಿ ಬ್ಯಾಂಕ್‌ಗೆ ಚುನಾವಣೆ ಇಂದು


ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತದ ನಿರ್ದೇಶಕರ ಸ್ಥಾನಗಳಿಗೆ ಶನಿವಾರ (ಜುಲೈ 29) ಚುನಾವಣೆ ನಡೆಯಲಿದೆ.

'ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್‌ನ ಸಂಕೀರ್ಣದಲ್ಲಿ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. ಸಾಮಾನ್ಯ ವರ್ಗದಿಂದ 11, ಕೆಟಗರಿ 'ಎ'ನಲ್ಲಿ (ಒಬಿಸಿ) 1, ಕೆಟಗರಿ 'ಬಿ'ಯಲ್ಲಿ 1, ಪರಿಶಿಷ್ಟ ಜಾತಿ (ಎಸ್‌ಸಿ) 1, ಪರಿಶಿಷ್ಟ ವರ್ಗದಿಂದ (ಎಸ್‌ಟಿ) 1 ಹಾಗೂ ಮಹಿಳಾ ವರ್ಗದಿಂದ 2 ಸ್ಥಾನಗಳಿಗೆ ಈ ಚುನಾವಣೆ ನಡೆಯಲಿದೆ' ಎಂದು ಬ್ಯಾಂಕ್‌ನ ಮಾಜಿ ಅಧ್ಯಕ್ಷರೂ ಆದ ಹೈಕೋರ್ಟ್ ವಕೀಲ ಎನ್.ಪಿ.ಅಮೃತೇಶ್ ತಿಳಿಸಿದ್ದಾರೆ.

ಒಟ್ಟು 8,153 ಷೇರುದಾರರು ಹಾಗೂ ವಾರ್ಷಿಕ ₹ 1,500 ಕೋಟಿ ವಹಿವಾಟು ಹೊಂದಿರುವ ಈ ಬ್ಯಾಂಕ್‌ಗೆ 2023ರಿಂದ 2028ರ ಅವಧಿಗೆ ನಿರ್ದೇಶಕರನ್ನು ಆಯ್ಕೆ ಮಾಡಲು ಈ ಚುನಾವಣೆ ನಡೆಯಲಿದೆ. ಹೈಕೋರ್ಟ್, ಸಿಟಿ ಸಿವಿಲ್ ಕೋರ್ಟ್, ಎಸಿಎಂಎಂ ಹಾಗೂ ಮೇಯೊ ಹಾಲ್ ಸೇರಿದಂತೆ ಬೆಂಗಳೂರಿನ ನಾಲ್ಕೂ ಘಟಕದ ಕೋರ್ಟ್‌ಗಳ ಶೇರುದಾರ ವಕೀಲರು, ಹೈಕೋರ್ಟ್ ಕಚೇರಿಯ 400ಕ್ಕೂ ಹೆಚ್ಚು ನೌಕರರು ಹಾಗೂ ವಕೀಲರ ಕಚೇರಿಯ 100ಕ್ಕೂ ಹೆಚ್ಚು ಸಹಾಯಕರು ಈ ಚುನಾವಣೆಯಲ್ಲಿ ಮತ ಚಲಾಯಿಸಲಿದ್ದಾರೆ ಎಂದು ಅಮೃತೇಶ್ ವಿವರಿಸಿದ್ದಾರೆ.

ಬ್ಯಾರಿಸ್ಟರ್ ಎಚ್.ಕೆ.ವಾಸುದೇವ ರೆಡ್ಡಿಯವರ ಅಧ್ಯಕ್ಷತೆಯಲ್ಲಿ 1994ರಲ್ಲಿ 'ವಕೀಲರ ಸಹಕಾರಿ ಬ್ಯಾಂಕ್' ಎಂದು ಸ್ಥಾಪನೆಯಾದ ಈ ಬ್ಯಾಂಕ್ 2000ನೇ ಇಸ್ವಿಯಲ್ಲಿ 'ನ್ಯಾಯಮಿತ್ರ ಸಹಕಾರಿ ಬ್ಯಾಂಕ್' ಎಂದು ಪರಿವರ್ತನೆ ಹೊಂದಿತು.


ಚೆಕ್ ಶರ್ಟ್
ಹೈ ಲೋ ಹೆಮ್ ಜೊತೆ
₹499
ಗೋಡೆಗಳನ್ನು ಸುಂದರವಾಗಿ ಮಾಡಿ
ಟ್ಯಾಂಕ್ ಟಾಪ್
₹199
ಬೂಟ್‌ಕಟ್ ಐದು ಬಟನ್ ಡೆನಿಮ್
₹799
ಚೆನ್ನಾಗಿ ಕಾಣಿಸಿಕೊಳ್ಳಿ
VISHAL MEGA MART
***** ಬಟ್ಟೆಗಳ ಅತ್ಯುತ್ತಮ ಗುಣಮಟ್ಟ ಅದು ನಿಮ್ಮನ್ನು ಆಶ್ಚರ್ಯ ಗೊಳಿಸುತ್ತದೆ *****
ಕುರ್ತಾ
₹899+
2 ಖರೀದಿಸಿ ಪಡೆಯಿರಿ
₹400 ರಿಯಾಯಿತಿ
ಶರ್ಟ್
₹499
2 ಖರೀದಿಸಿ ಪಡೆಯಿರಿ
₹100 ರಿಯಾಯಿತಿ
ಜೀನ್ಸ್
₹799
2 ಖರೀದಿಸಿ ಪಡೆಯಿರಿ
₹400 ರಿಯಾಯಿತಿ
ಪ್ರಿಂಟೆಡ್ ಟೀ–ಶರ್ಟ್
₹299
ಪ್ರಿಂಟೆಡ್ ಟೀ–ಶರ್ಟ್
₹199+
3 ಖರೀದಿಸಿ
1 ಉಚಿತವಾಗಿ ಪಡೆಯಿರಿ
ಜೀನ್ಸ್
₹799
1 ಖರೀದಿಸಿ
ಪಡೆಯಿರಿ
1 ಉಚಿತ
ಪ್ರಿಂಟೆಡ್ ಶರ್ಟ್
₹499
1 ಖರೀದಿಸಿ
ಪಡೆಯಿರಿ
1 ಉಚಿತ

10 ಜಂಕ್ಷನ್‌ಗಳಿಗೆ ಪರಿಹಾರ: ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ ಶಿಫಾರಸು

ಜಂಕ್ಷನ್ ದಟ್ಟಣೆ ನಿವಾರಣೆಗೆ ₹750 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 10 ಜಂಕ್ಷನ್‌ಗಳಲ್ಲಿ ಅತಿ ಹೆಚ್ಚು ವಾಹನ ದಟ್ಟಣೆ ಕಡಿಮೆ ಮಾಡಲು ಅಲ್ಪಾವಧಿ ಮತ್ತು ದೀರ್ಘಾವಧಿ ತಾಂತ್ರಿಕ ಪ್ರಸ್ತಾವಗಳ ಕರಡು ವರದಿಯನ್ನು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ (ಐಎಸ್‌ಇಸಿ) ನೀಡಿದೆ.

ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದದ ಐಎಸ್‌ಇಸಿ, 'ಪರಿಸರ ಸಮಸ್ಯೆಗಳು ಮತ್ತು ದಟ್ಟಣೆ: ಬೆಂಗಳೂರು ಅಭಿವೃದ್ಧಿಗೆ ಸುಸ್ಥಿರ ಪರಿಹಾರಗಳ ವಿಕಸನ' ಎಂಬ ಅಧ್ಯಯನ ನಡೆಸಿದೆ. ಇದರ ವರದಿಯನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಕಳುಹಿಸಿದ್ದಾರೆ.

ಈ ಶಿಫಾರಸುಗಳ ಕಾರ್ಯಸಾಧ್ಯತೆ ಮತ್ತು ಅನುಷ್ಠಾನದ ಬಗ್ಗೆ ಮುಖ್ಯ ಎಂಜಿನಿಯರ್ ಮೂಲಕ ಪರಿಶೀಲಿಸಿ ತ್ವರಿತವಾಗಿ ಅಭಿಪ್ರಾಯ ನೀಡುವಂತೆ ಸೂಚಿಸಿದ್ದಾರೆ.

ಸಿಲ್ಕ್ ಬೋರ್ಡ್, ಗೊರಗುಂಟೆಪಾಳ್ಯ, ಟಿನ್ ಫ್ಯಾಕ್ಟರಿ, ಹೆಬ್ಬಾಳ, ಸಾರಕ್ಕಿ, ಬನಶಂಕರಿ, ಕುಮಾರಸ್ವಾಮಿ ಲೇಔಟ್, ಇಬ್ಬಲೂರು, ಕಾಡುಬೀಸನಹಳ್ಳಿ, ಡೇರಿ ವೃತ್ತ ಜಂಕ್ಷನ್‌ಗಳಲ್ಲಿ ಪ್ರತ್ಯೇಕವಾಗಿ ಕೈಗೊಳ್ಳಬೇಕಿರುವ ತಾಂತ್ರಿಕ ಕ್ರಮ, ಸಿಗ್ನಲ್ ನಿರ್ವಹಣೆ, ಎಲಿವೇಟೆಡ್ ವಾಕ್‌ವೇ, ಎಲಿವೇಟೆಡ್ ರಸ್ತೆ, ಅಂಡರ್‌ಪಾಸ್‌ಗಳನ್ನು ನಿರ್ಮಿಸಲು ಶಿಫಾರಸು ಮಾಡಲಾಗಿದೆ.

ತಾಂತ್ರಿಕ ಪ್ರಸ್ತಾವಗಳು

- ಆರು ಜಂಕ್ಷನ್‌ಗಳಲ್ಲಿ ಸಿವಿಲ್ ಕಾಮಗಾರಿ ಸುಮಾರು ₹25 ಕೋಟಿ ವೆಚ್ಚ
- ನಾಲ್ಕು ಕಡೆ ಮೆಟ್ರೊ ಜೊತೆಗೆ 8.92 ಕಿ.ಮೀ (ಪ್ರತಿ ಕಿ.ಮೀಗೆ ₹72 ಲಕ್ಷ) ಪಾದಚಾರಿ ಸುಧಾರಣೆ
- ಸಾರಕ್ಕಿ, ಡೇರಿ ವೃತ್ತ, ಸಿಲ್ಕ್ ಬೋರ್ಡ್, ಕುಮಾರಸ್ವಾಮಿ ಲೇಔಟ್, ಇಬ್ಬಲೂರುಗಳಲ್ಲಿ ₹3.5 ಕೋಟಿ ವೆಚ್ಚದಲ್ಲಿ ಸ್ಕೈವಾಕ್ ಮತ್ತು ₹700 ಕೋಟಿ ವೆಚ್ಚದಲ್ಲಿ ಸಿಎಂಟಿಎ ಜಂಕ್ಷನ್‌ನಲ್ಲಿ ಸುರಂಗ ಮಾರ್ಗ.
- ಖಾಸಗಿ ಬಸ್‌ಗಳಿಗೆ ಎಚ್‌ಎಸ್‌ಆರ್ ರಸ್ತೆ ಸಮೀಪ ಹಾಗೂ ಬಿಎಂಟಿಸಿ ಬಸ್‌ಗಳಿಗೆ ಸಿಲ್ಕ್ ಬೋರ್ಡ್ ಸಮೀಪ ವಾಹನ ನಿಲ್ದಾಣಗಳ ಪ್ರತ್ಯೇಕ ನಿರ್ಮಾಣ
- ಕಾಡುಬೀಸನಹಳ್ಳಿ, ಗೊರಗುಂಟೆ ಪಾಳ್ಯದಲ್ಲಿ 'ಅಡಾಪ್ಟೀವ್ ಸಂಚಾರ ಸಿಗ್ನಲ್' ವ್ಯವಸ್ಥೆ.

ಎಲ್ಲೆಲ್ಲಿ ಪಾದಚಾರಿ ಮಾರ್ಗ ಅಭಿವೃದ್ಧಿ

ಜಂಕ್ಷನ್	ಎಲ್ಲಿಂದ ಎಲ್ಲಿಗೆ	ಉದ್ದ (ಕಿ.ಮೀ)
ಗೊರಗುಂಟೆ ಪಾಳ್ಯ	ಯಶವಂತಪುರ ರೈಲ್ವೆ ನಿಲ್ದಾಣದಿಂದ ಯಶವಂತಪುರ ಟಿಟಿಎಂಸಿ (ರೈಲ್ವೆ ಕ್ವಾಟ್ರಸ್ ರಸ್ತೆ ಮೂಲಕ)	1.34
	ಬಸವೇಶ್ವರ ನಗರ ಟರ್ಮಿನಸ್‌ನಿಂದ ಪೀಣ್ಯ ಮೆಟ್ರೊ ನಿಲ್ದಾಣ	1.1
	ಗೊರಗುಂಟೆ ಪಾಳ್ಯ ಮತ್ತು ಯಶವಂತಪುರ ಮೆಟ್ರೊ ನಿಲ್ದಾಣಗಳ ನಡುವಿನ ರಸ್ತೆಯ ಎರಡೂ ಬದಿ ಪಾದಚಾರಿ ಮಾರ್ಗ	1.92
ಸಿಲ್ಕ್ ಬೋರ್ಡ್	ಸಿಲ್ಕ್ ಬೋರ್ಡ್ ಮೆಟ್ರೊ ನಿಲ್ದಾಣದ ಮೂಲಕ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕುವೆಂಪು ಟಿಟಿಎಂಸಿವರೆಗೆ	0.71
	ಸಿಲ್ಕ್ ಬೋರ್ಡ್ ಮೆಟ್ರೊ ನಿಲ್ದಾಣದಿಂದ ಸಿಲ್ಕ್ ಬೋರ್ಡ್ ಜಂಕ್ಷನ್	0.25
	ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಅಗರದವರೆಗಿನ ಹೊರ ವರ್ತುಲ ರಸ್ತೆ ಮೂಲಕ ಹೊಸ ಬಸ್ ನಿಲ್ದಾಣ	0.11
ಟಿನ್ ಫ್ಯಾಕ್ಟರಿ	ಕೆ.ಆರ್. ಪುರ ರೈಲ್ವೆ ನಿಲ್ದಾಣದಿಂದ ಕೆ.ಆರ್. ಪುರ ಮೆಟ್ರೊ ನಿಲ್ದಾಣ	0.07
	ಬೆನ್ನಿಗಾನಹಳ್ಳಿ ಮೆಟ್ರೊ ನಿಲ್ದಾಣದಿಂದ ಟಿನ್ ಫ್ಯಾಕ್ಟರಿ ಹೊಸಕೋಟೆ ಬಸ್ ನಿಲ್ದಾಣ	0.55
ಹೆಬ್ಬಾಳ	ಹೆಬ್ಬಾಳ ರೈಲ್ವೆ ನಿಲ್ದಾಣದಿಂದ ಹೆಬ್ಬಾಳ ಬಸ್ ನಿಲ್ದಾಣ (ಹೊರವರ್ತುಲ ರಸ್ತೆಯಲ್ಲಿ)	0.44
	ಹೆಬ್ಬಾಳ ಬಸ್ ನಿಲ್ದಾಣದಿಂದ ಹೆಬ್ಬಾಳ ರೈಲ್ವೆ ನಿಲ್ದಾಣ	0.73
ಬನಶಂಕರಿ	ಬನಶಂಕರಿ ಮೆಟ್ರೊ ಸ್ಟೇಷನ್‌ವರಗೆ	0.46
ಸಾರಕ್ಕಿ ಜಂಕ್ಷನ್	ಬನಶಂಕರಿ ಕಡೆಯಿಂದ 9ನೇ ಅಡ್ಡರಸ್ತೆಯಿಂದ ಜೆ.ಪಿ. ನಗರ ಮೆಟ್ರೊ ಸ್ಟೇಷನ್‌ವರೆಗೆ	0.34
ಕೆ.ಎಸ್. ಲೇಔಟ್	100 ಅಡಿ ವರ್ತುಲ ರಸ್ತೆಯೊಂದಿಗೆ ಸಾರಕ್ಕಿ ಜಂಕ್ಷನ್‌ನಿಂದ ಕೆ.ಎಸ್. ಲೇಔಟ್ ಜಂಕ್ಷನ್	0.9

ಮೋದಿ ಕಾರ್ಯಕ್ರಮದಲ್ಲಿ ಶರದ್ ಪವಾರ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಲಿರುವ ಲೋಕಮಾನ್ಯ ತಿಲಕ್ ಪ್ರಶಸ್ತಿ ಪ್ರದಾನ ಸಮಾರಂಭ ಪುಣೆಯಲ್ಲಿ ಆಗಸ್ಟ್ 1ರಂದು ನಡೆಯಲಿದ್ದು, ಇದರಲ್ಲಿ ಎನ್‌ಸಿಪಿಯ ಮುಖ್ಯಸ್ಥ ಶರದ್ ಪವಾರ್ ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಿರುವುದಕ್ಕೆ 'ಇಂಡಿಯಾ' ಮೈತ್ರಿಕೂಟದ ಕೆಲವು ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆಡಳಿತಾರೂಢ ಬಿಜೆಪಿ ವಿರುದ್ಧ ಒಗ್ಗಟ್ಟಿನಿಂದ ಹೋರಾಡಲು ವಿರೋಧಪಕ್ಷಗಳು ಈಚೆಗಷ್ಟೇ 'ಇಂಡಿಯಾ' ಮೈತ್ರಿಕೂಟ ರಚಿಸಿಕೊಂಡಿವೆ. ಈಗ ಪ್ರಧಾನಿ ಅವರೊಂದಿಗೆ ಶರದ್ ಪವಾರ್ ವೇದಿಕೆ ಹಂಚಿಕೊಳ್ಳುವುದು ತಪ್ಪು ಸಂದೇಶ ನೀಡಬಹುದು ಎಂದು ಮೂಲಗಳು ತಿಳಿಸಿವೆ.

ಸಂಸತ್ ಭವನದಲ್ಲಿ 'ಇಂಡಿಯಾ'ದ ನಾಯಕರ ಸಭೆಯಲ್ಲಿ ಶರದ್ ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಿರುವುದಕ್ಕೆ ಕೆಲವು ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಬಗ್ಗೆ ಪವಾರ್ ಅವರೊಂದಿಗೆ ಮಾತನಾಡಿ, ಸಮಾರಂಭಕ್ಕೆ ಹೋಗದಂತೆ ಮನವೊಲಿಸಬಹುದು ಎಂದೂ ಮೂಲಗಳು ತಿಳಿಸಿವೆ.

ಅತಿ ವೇಗ ಪತ್ತೆಗೆ ಎಐ ಕ್ಯಾಮೆರಾ ಅಳವಡಿಕೆ; ಡಿಜಿಟಲ್ ಡಿಸ್‌ಪ್ಲೆ ವ್ಯವಸ್ಥೆ

ಎಕ್ಸ್‌ಪ್ರೆಸ್ ವೇ: ಸುರಕ್ಷತೆಗೆ ವಿಶೇಷ ತಂಡ

• ಓದೇಶ ಸಕಲೇಶಪುರ

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ (ರಾಷ್ಟ್ರೀಯ ಹೆದ್ದಾರಿ–275) ಹೆದ್ದಾರಿ ಸುರಕ್ಷತೆ ಕುರಿತು ನಿಗಾ ಹಾಗೂ ನಿರ್ವಹಣೆಗೆ ವಿಶೇಷ ತಂಡ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿದೆ.

ಹೆದ್ದಾರಿಯಲ್ಲಿ ಹೆಚ್ಚಿನ ಅಪಘಾತ ಹಾಗೂ ಸಾವು–ನೋವು ವರದಿಯಾಗಿದ್ದರಿಂದ ಅದರ ಸುರಕ್ಷತೆ ಮತ್ತು ಅಪಘಾತ ತಡೆಗೆ ಕೈಗೊಂಡಿರುವ ಕ್ರಮಗಳ ಕುರಿತು ವ್ಯಾಪಕ ಟೀಕೆಗಳು ಕೇಳಿ ಬಂದಿತ್ತು.

ಇದರ ಬೆನ್ನಲ್ಲೇ ಪ್ರಾಧಿಕಾರವು ಬೆಂಗಳೂರು, ರಾಮನಗರ, ಮಂಡ್ಯ ಹಾಗೂ ಮೈಸೂರುವರೆಗೂ ಹಾದು ಹೋಗಿರುವ 118 ಕಿ.ಮೀ. ಉದ್ದದ ಹೆದ್ದಾರಿ ಸುರಕ್ಷತೆ ಕುರಿತು ವಿಶೇಷ ಗಮನ ಹರಿಸುವ ದಿಸೆಯಲ್ಲಿ ಹೆಜ್ಜೆ ಇಟ್ಟಿದೆ.

ತಿಂಗಳೊಳಗೆ ನೇಮಕ: 'ಹೆದ್ದಾರಿ ಸುರಕ್ಷತೆಯು ಪ್ರಾಧಿಕಾರದ ಜವಾಬ್ದಾರಿ. ಆ ದಿಸೆಯಲ್ಲಿ ನಿಗಾ ವಹಿಸಲು ಶಾಶ್ವತ ಕನ್ಸಲ್ಟೆಂಟ್ ತಂಡವನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ' ಎಂದು ಎಕ್ಸ್‌ಪ್ರೆಸ್ ವೇ ಯೋಜನಾ ನಿರ್ದೇಶಕ ರಾಹುಲ್ ಗುಪ್ತಾ 'ಪ್ರಜಾವಾಣಿ'ಗೆ ತಿಳಿಸಿದರು.

'ತಂಡದ ನೇಮಕಕ್ಕೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಒಂದು ತಿಂಗಳೊಳಗೆ ತಂಡ ಕಾರ್ಯ ಆರಂಭಿಸಲಿದೆ. ಹೆದ್ದಾರಿ ಸುರಕ್ಷತೆಗೆ ಸಂಬಂಧಿಸಿದಂತೆ ಎಲ್ಲೆಲ್ಲಿ ಸಮಸ್ಯೆಗಳಿವೆ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಕೆಲಸ ಮಾಡಲಿದೆ' ಎಂದು ಮಾಹಿತಿ ನೀಡಿದರು.

'ರಸ್ತೆ ಸುರಕ್ಷತೆ ಸಮಿತಿ ಈಗಾಗಲೇ ಇದ್ದರೂ ಹೊಸದಾಗಿ ನೇಮಕವಾಗಲಿರುವ ತಂಡ ಎಕ್ಸ್‌ಪ್ರೆಸ್ ವೇಗೆ ಸೀಮಿತವಾಗಿ ಕಾರ್ಯ ನಿರ್ವಹಿಸಲಿದೆ. ಅಪಘಾತ ಸ್ಥಳಗಳಿಗೂ ಭೇಟಿ ನೀಡಿ ಅಧ್ಯಯನ ಮಾಡಲಿದೆ. ಹೆದ್ದಾರಿ ಸುರಕ್ಷತೆ ಕುರಿತ ಗೊಂದಲ ನಿವಾರಿಸಿ, ಉತ್ತಮ ಸೇವೆ ನೀಡುವುದು ನಮ್ಮ ಉದ್ದೇಶ' ಎಂದರು.

ತಜ್ಞರಿಂದ ಪರಿಶೀಲನೆ: ಎಕ್ಸ್‌ಪ್ರೆಸ್‌ವೇ ಅಪಘಾತ ಕುರಿತು, ಕೇಂದ್ರ ಭೂಸಾರಿಗೆ ಸಚಿವಾಲಯದ ಮಟ್ಟದಲ್ಲಿ ಚರ್ಚೆ ನಡೆದಿತ್ತು. ಸುರಕ್ಷತೆ ಕುರಿತು ಪರಿಶೀಲನೆ ನಡೆಸಲು ಮೂವರು ತಜ್ಞರ ಸಮಿತಿ ನೇಮಿಸಲಾಗಿತ್ತು. ಈಚೆಗೆ ಸಮಿತಿ ಹೆದ್ದಾರಿಗೆ ಭೇಟಿ ಪರಿಶೀಲನೆ ನಡೆಸಿತ್ತು.

ಅಪಘಾತಗಳ ಹೆಚ್ಚಳ ಕುರಿತು ರಾಮನಗರ ಜಿಲ್ಲಾ ಪೊಲೀಸರು ಕೂಡ ಎರಡು ತಿಂಗಳ ಹಿಂದೆ 53 ಅಂಶಗಳ ವರದಿಯನ್ನು ಪ್ರಾಧಿಕಾರಕ್ಕೆ ಕೊಟ್ಟಿದ್ದರು. ಅಪಘಾತ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಗಮನ ಸೆಳೆದಿದ್ದರು.

ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್, ಜೂನ್‌ನಲ್ಲಿ ಹೆದ್ದಾರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅಪಘಾತ ತಡೆಗೆ ಕೆಲ ಕ್ರಮಗಳನ್ನು ಕೈಗೊಳ್ಳುವಂತೆ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದ್ದರು. ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡಿದ್ದರು.

ವರದಿ ಸಲ್ಲಿಕೆ: ಹೆದ್ದಾರಿ ಸುರಕ್ಷತೆ ಕುರಿತು ಪೊಲೀಸ್ ಇಲಾಖೆ ನೇತೃತ್ವದಲ್ಲಿ ಲೋಕೋಪಯೋಗಿ, ಸಾರಿಗೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಒಟ್ಟಾಗಿ ಸಮೀಕ್ಷೆ ನಡೆಸಿದ್ದವು. ಆ ವರದಿಯನ್ನು ಈಚೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ರಾಮನಗರ ಜಿಲ್ಲೆಯ ಬಿಡದಿ ಬಳಿಯ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಅಳವಡಿಸಿರುವ ಎಐ ಕ್ಯಾಮೆರಾ ಹಾಗೂ ವೇಗ ಪ್ರದರ್ಶನ ಡಿಸ್‌ಪ್ಲೆ

ಪ್ರಜಾವಾಣಿ ಚಿತ್ರ: ಚಂದ್ರೇಗೌಡ

ಮುಖ್ಯಾಂಶಗಳು

- ಅಪಘಾತ ಸ್ಥಳಗಳಿಗೆ ತೆರಳಿ ಅಧ್ಯಯನ
- 30ಗಳೊಳಗೆ ಕಾರ್ಯ ಆರಂಭಿಸಲಿರುವ ತಂಡ
- ಸುರಕ್ಷತೆ ಪರಿಶೀಲನೆ ನಡೆಸಿದ್ದ ತಜ್ಞರ ಸಮಿತಿ

ಎಐ ಕ್ಯಾಮೆರಾ, ಸ್ಪೀಡ್ ಡಿಸ್‌ಪ್ಲೆ

ಹೆದ್ದಾರಿಯಲ್ಲಿ ಅತಿ ವೇಗ ನಿಯಂತ್ರಣಕ್ಕಾಗಿ ಪ್ರಾಧಿಕಾರವು ಎಐ (ಕೃತಕ ಬುದ್ಧಿಮತ್ತೆ) ಕ್ಯಾಮೆರಾ ಅಳವಡಿಸಿದೆ. ವಾಹನಗಳ ವೇಗ ಪ್ರದರ್ಶನ ಡಿಜಿಟಲ್ ಡಿಸ್‌ಪ್ಲೆ ವ್ಯವಸ್ಥೆ ಮಾಡಲಾಗಿದೆ.

'ಬಿಡದಿ ಬಳಿ ಪ್ರಾಯೋಗಿಕವಾಗಿ ಒಂದು ಎಐ ಕ್ಯಾಮೆರಾ ಅಳವಡಿಸಲಾಗಿದೆ. ವಾಹನಗಳ ವೇಗ ಹಾಗೂ ನೋಂದಣಿ ಸಂಖ್ಯೆಯನ್ನು ಕ್ಯಾಮೆರಾ ಸೆರೆ ಹಿಡಿಯಲಿದೆ. ವಾಹನ ಎಷ್ಟು ವೇಗದಲ್ಲಿ ಸಂಚರಿಸುತ್ತಿದೆ ಎಂಬುದು ಡಿಜಿಟಲ್ ಡಿಸ್‌ಪ್ಲೆಯಲ್ಲಿ ಪ್ರದರ್ಶನವಾಗುತ್ತದೆ. ಮುಂದೆ ಮತ್ತಷ್ಟು ಕ್ಯಾಮೆರಾ ಅಳವಡಿಸಲಾಗುವುದು' ಎಂದು ರಾಹುಲ್ ಗುಪ್ತಾ ತಿಳಿಸಿದರು.

ಸುದ್ದಿ 2 ನಿಮಿಷ

ಅಲೆಮಾರಿ ಆಯೋಗ ರಚನೆಗೆ ಬದ್ಧ: ಸಿದ್ದರಾಮಯ್ಯ

ಬೆಂಗಳೂರು: ಅಲೆಮಾರಿ ಸಮುದಾಯದ ಅಭಿವೃದ್ಧಿಗಾಗಿ ಆಯೋಗ ರಚನೆ ಮಾಡುವ ಸಂಬಂಧ ಕಾನೂನು ಸಲಹೆ ಪಡೆಯಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಅಲೆಮಾರಿ, ಅರೆ ಅಲೆಮಾರಿ, ವಿಮುಕ್ತ ಬುಡಕಟ್ಟು ಸಂಘಟನೆಗಳ ಸಮನ್ವಯ ಸಮಿತಿ ಮುಖಂಡರೊಂದಿಗೆ ಶುಕ್ರವಾರ ನಡೆದ ಸಭೆಯಲ್ಲಿ ಈ ವಿಷಯ ತಿಳಿಸಿದರು.

ಆಯೋಗ ರಚನೆಯ ಕುರಿತು ಸರ್ಕಾರ ಸಕಾರಾತ್ಮಕವಾಗಿದೆ. ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಿಗೆ ಅನುದಾನ ನೀಡುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು. ಅಲೆಮಾರಿ ಜನಾಂಗಗಳು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಮುಖ್ಯವಾಹಿನಿಗೆ ಬರಬೇಕು ಎಂದು ಹೇಳಿದರು.

ಅಲೆಮಾರಿಗಳ ಸಮಸ್ಯೆಗಳು ವಿಶಿಷ್ಟವಾಗಿದ್ದು, ಒಟ್ಟು 120 ಜಾತಿಗಳಿವೆ. ಈ ಪೈಕಿ ಎಸ್‌ಸಿ 51, ಎಸ್‌ಟಿ 23 ಹಾಗೂ ಹಿಂದುಳಿದ ವರ್ಗದ 46 ಜಾತಿಗಳಿವೆ. ವಿವಿಧ ರಾಜ್ಯ ಮಟ್ಟದ ಸಂಘಟನೆಗಳಿವೆ. ಅವುಗಳನ್ನು ಒಟ್ಟು ಸೇರಿಸಿ ಸಮನ್ವಯ ಸಮಿತಿ ರಚಿಸಲಾಗಿದೆ ಎಂದು ಸಮಿತಿಯ ಮುಖಂಡರು ತಿಳಿಸಿದರು.

ಸಭೆಯಲ್ಲಿ ಸಚಿವ ಬೈರತಿ ಸುರೇಶ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಶಾಸಕ ಕೊತ್ತೂರು ಮಂಜುನಾಥ್, ವಿಧಾನಪರಿಷತ್ ಸದಸ್ಯ ಅನಿಲ್ ಕುಮಾರ್, ಲೇಖಕ ಎಸ್.ಜಿ.ಸಿದ್ದರಾಮಯ್ಯ, ಪತ್ರಕರ್ತ ಇಂದೂಧರ ಹೊನ್ನಾಪುರ ಇದ್ದರು.

'ಯಾವುದೇ ಸಾಧನೆ ಮಾಡುವ ಸಾಮರ್ಥ್ಯ ವಿದ್ಯಾರ್ಥಿಗಳಲ್ಲಿದೆ'




ಬೆಂಗಳೂರು: ಯಾವುದೇ ಸಾಧನೆ ಮಾಡುವ ಅವಕಾಶ ಮತ್ತು ಸಾಮರ್ಥ್ಯ ವಿದ್ಯಾರ್ಥಿಗಳಿಗಿದೆ ಎಂದು ಐಎನ್‌ಎಸ್‌ಎ ವಿಜ್ಞಾನಿ ಜಿ. ಪಾರ್ಥಸಾರಥಿ ಹೇಳಿದರು.

ಬೆಂಗಳೂರು ಎಚ್.ಆರ್.ಬಿ.ಆರ್. ಬಡಾವಣೆಯಲ್ಲಿರುವ ಸಿಎಂಆರ್ ವಿಶ್ವವಿದ್ಯಾಲಯದ 2023ನೇ ಸಾಲಿನ ಶೈಕ್ಷಣಿಕ ವರ್ಷದ ಪದವಿ ತರಗತಿಗಳ ಉದ್ಘಾಟನೆ ಮತ್ತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

ಸಿಎಂಆರ್ ವಿಶ್ವವಿದ್ಯಾಲಯ ಮತ್ತು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ. ರಾಮಮೂರ್ತಿ ಮಾತನಾಡಿ, 'ಸ್ವಸಾಮರ್ಥ್ಯದ ಜೊತೆಗೆ ನಿರಂತರ ಪರಿಶ್ರಮ ಇದ್ದಾಗ ಗುರಿ ಮುಟ್ಟಲು ಸಾಧ್ಯ. ನಿರಂತರ ಕಲಿಕೆ, ಶೈಕ್ಷಣಿಕ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ ಮತ್ತು ಸೃಜನಾತ್ಮಕ ಕಲಿಕೆಯಿಂದ ಉದ್ಯೋಗ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಬಹುದು' ಎಂದು ತಿಳಿಸಿದರು.

ಕುಲಪತಿ ಎಚ್.ಬಿ. ರಾಘವೇಂದ್ರ, ಕುಲಸಚಿವ ಪ್ರವೀಣ್ ಆರ್., ಡೀನ್ ಸುಜಾ ಬೆನೆಟ್ ಇದ್ದರು.

ರಾಜ್ಯಪಾಲರನ್ನು ಬಿಟ್ಟು ಹಾರಿದ ವಿಮಾನ: ಕ್ಷಮೆ ಯಾಚಿಸಿದ ಏರ್‌ಏಷ್ಯಾ



ಥಾವರಚಂದ್ ಗೆಹಲೋತ್

ಬೆಂಗಳೂರು (ಪಿಟಿಐ): ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರನ್ನು ಬಿಟ್ಟು ವಿಮಾನ ಹಾರಿದ್ದ ಘಟನೆಗೆ ಸಂಬಂಧಿಸಿ ವಿಮಾನಯಾನ ಸಂಸ್ಥೆ ಏರ್‌ಏಷ್ಯಾ ಶುಕ್ರವಾರ ಕ್ಷಮೆ ಯಾಚಿಸಿದೆ.

'ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇವೆ. ಈ ಕುರಿತು ತನಿಖೆ ಕೈಗೊಂಡಿದ್ದು, ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಈ ವಿಚಾರವಾಗಿ ಹಿರಿಯ ಅಧಿಕಾರಿ ನೇತೃತ್ವದ ತಂಡ ರಾಜ್ಯಪಾಲರ ಕಚೇರಿಯೊಂದಿಗೆ ಸಂಪರ್ಕದಲ್ಲಿದೆ' ಎಂದು ಸಂಸ್ಥೆಯ ವಕ್ತಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕುರಿತು ರಾಜ್ಯಪಾಲರ ಶಿಷ್ಟಾಚಾರ ಅಧಿಕಾರಿ ಎಂ.ವೇಣುಗೋಪಾಲ್ ಅವರು ವಿಮಾನನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಘಟನೆ ವಿವರ: ಅಧಿಕೃತ ಭೇಟಿಗಾಗಿ ಹೈದರಾಬಾದ್‌ಗೆ ಹೋಗಲು ರಾಜ್ಯಪಾಲ ಗೆಹಲೋತ್ ಅವರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಗುರುವಾರ ತೆರಳಿದ್ದರು.

'ಮಧ್ಯಾಹ್ನ 1.10ಕ್ಕೆ ರಾಜಭವನದಿಂದ ಹೊರಟಿದ್ದ ರಾಜ್ಯಪಾಲರು ಟರ್ಮಿನಲ್–1 ವಿಐಪಿ ಲಾಂಜ್ ಅನ್ನು 1.35ಕ್ಕೆ ತಲುಪಿದ್ದರು. ಅಷ್ಟರಲ್ಲಾಗಲೇ ಅವರ ಲಗೇಜುಗಳನ್ನು ಟರ್ಮಿನಲ್–2ರಲ್ಲಿದ್ದ ವಿಮಾನದಲ್ಲಿ (ಐ5 972) ಇರಿಸಲಾಗಿತ್ತು. ಈ ವಿಮಾನ 2.05ಕ್ಕೆ ಹಾರಬೇಕಿತ್ತು'.

'ರಾಜ್ಯಪಾಲರು 2.06ಕ್ಕೆ ವಿಮಾನ ಏರಲು ಅಳವಡಿಸಿದ್ದ ಏಣಿ ತಲುಪಿದ್ದರು. ಆದರೆ, ತಡವಾಗಿ ಬಂದಿದ್ದೀರಿ ಎಂದು ಏರ್‌ಏಷ್ಯಾ ಸಿಬ್ಬಂದಿ ಆರೀಫ್, ವಿಮಾನ ಏರಲು ಅನುಮತಿ ನಿರಾಕರಿಸಿದರು' ಎಂದು ವೇಣುಗೋಪಾಲ್ ದೂರಿನಲ್ಲಿ ತಿಳಿಸಿದ್ದಾರೆ.

'ರಾಜ್ಯಪಾಲರು ಏಣಿ ಬಳಿ ಇದ್ದಾಗ ವಿಮಾನದ ಬಾಗಿಲು ತೆರೆದೇ ಇತ್ತು. ಆದಾಗ್ಯೂ, ರಾಜ್ಯಪಾಲರನ್ನು ವಿಮಾನ ಹತ್ತಲು ನಿರಾಕರಿಸಿ, ಅವಮಾನಿಸಲಾಗಿದೆ' ಎಂದು ಆರೋಪಿಸಿದ್ದಾರೆ.

'ವಿಐಪಿ ಲಾಂಜ್‌ಗೆ ಮರಳಿದ ಗೆಹಲೋತ್ ಅವರು, 90 ನಿಮಿಷಗಳ ನಂತರ ಮತ್ತೊಂದು ವಿಮಾನದ ಮೂಲಕ ಹೈದರಾಬಾದ್ ತಲುಪಿದರು' ಎಂದು ವಿವರಿಸಿದ್ದಾರೆ.

'ಕರ್ನಾಟಕದ ಪ್ರಥಮ ಪ್ರಜೆಯಾಗಿರುವ ರಾಜ್ಯಪಾಲರಿಗೆ ಈ ಘಟನೆಯಿಂದಾಗಿ ನೋವಾಗಿದೆ. ಶಿಷ್ಟಾಚಾರ ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಎಐಎಕ್ಸ್ ಕನೆಕ್ಟ್‌ನ ನಿಲ್ದಾಣ ವ್ಯವಸ್ಥಾಪಕ ಝಿಕೊ ಸೋರೇಸ್ ಹಾಗೂ ಏರ್‌ಏಷ್ಯಾ ಸಿಬ್ಬಂದಿ ಆರೀಫ್ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು' ವೇಣುಗೋಪಾಲ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

ಪ್ರತಿಭಾನ್ವೇಷಣೆಯಲ್ಲಿ 15 ಸಾವಿರ ವಿದ್ಯಾರ್ಥಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಟ್‌ಸೆಟ್ ಲರ್ನ್ ವತಿಯಿಂದ 'ಫ್ಯೂಚರ್ ಯೂನಿಕಾರ್ನ್ಸ್ ಲಾಂಚ್‌ಪ್ಯಾಡ್' ಹೆಸರಿನಲ್ಲಿ ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಬೆಳೆಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಉದಯೋನ್ಮುಖ 'ವಿದ್ಯಾರ್ಥಿ ಉದ್ಯಮಿ'ಗಳನ್ನಾಗಿ ಆಯ್ಕೆ ಮಾಡಿ ಪ್ರಶಸ್ತಿ ನೀಡುವ ಈ ಕಾರ್ಯಕ್ರಮ ದೇಶದಾದ್ಯಂತ ನಡೆಯುತ್ತಿದೆ. ಬೆಂಗಳೂರಿನಲ್ಲಿ ಆಗಸ್ಟ್ 22 ಮತ್ತು 23ರಂದು ಈ ಕಾರ್ಯಕ್ರಮ ನಡೆಯಲಿದೆ.

Future Unicorns Launchpad

ಫ್ಯೂಚರ್ ಯೂನಿಕಾರ್ನ್ಸ್ ಲಾಂಚ್‌ಪ್ಯಾಡ್

ನೂರಕ್ಕೂ ಅಧಿಕ ಶಾಲೆಗಳ 8ರಿಂದ ದ್ವಿತೀಯ ಪಿಯುವರೆಗಿನ 15,000ಕ್ಕೂ ಅಧಿಕ ವಿದ್ಯಾರ್ಥಿಗಳು ಸಾಮರ್ಥ್ಯ ಪರೀಕ್ಷೆಗೆ ಒಳಪಡಲಿದ್ದಾರೆ.

ಭಾರತದಲ್ಲಿ ಅಗ್ರ ಯುನಿಕಾರ್ನ್ ನವೋದ್ಯಮಗಳು ಮತ್ತು ಫಾರ್ಚೂನ್ 500 ಕಂಪನಿಗಳು ಈ ಉದ್ಯಮಶೀಲತಾ ಶಿಬಿರದಲ್ಲಿ ಭಾಗವಹಿಸಲಿವೆ. ಅತ್ಯುತ್ತಮ 25 ತಂಡಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಲಾಗುವುದು. ನಂತರ, ಅಂತಿಮ ಹಂತಕ್ಕೆ ಮೂರು ತಂಡಗಳನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೊದಲ ಮೂರು ವಿಜೇತ ತಂಡಗಳಿಗೆ ನಗದು ಬಹುಮಾನ, ಟ್ರೋಫಿ ಮತ್ತು ಪ್ರಮಾಣಪತ್ರ ದೊರೆಯಲಿದೆ. ಬೆಂಗಳೂರಿನ ಟಾಪ್ ಫಾರ್ಚೂನ್ 500 ಕಂಪನಿಗಳಿಗೆ ಭೇಟಿ ನೀಡಿ ಕ್ಷೇತ್ರಕಾರ್ಯ ಮಾಡುವ ಅವಕಾಶ ಸಿಗಲಿದೆ ಎಂದು ಗೆಟ್ ಸೆಟ್ ಲರ್ನ್ ಸಹಸಂಸ್ಥಾಪಕ ಮತ್ತು ಸಿಇಒ ಅಮಿತ್ ಝುವೇರಿ, ತಿಳಿಸಿದ್ದಾರೆ.

'ಫ್ಯೂಚರ್ ಯುನಿಕಾರ್ನ್ಸ್ ಲಾಂಚ್‌ಪ್ಯಾಡ್ 2023' ಕುರಿತು ಮಾಹಿತಿಗಾಗಿ, www.futureunicorns.in ಅಥವಾ 8792740014 ಸಂಪರ್ಕಿಸಬಹುದು.

ಪ್ರಸಕ್ತ ಆರ್ಥಿಕ ವರ್ಷದ ಅಂತ್ಯಕ್ಕೆ 921 ಎಲೆಕ್ಟ್ರಿಕ್ ಬಸ್‌ಗಳ ಸಂಚಾರ

ಎ.ಸಿ ರಹಿತ ಎಲೆಕ್ಟ್ರಿಕ್ ಬಸ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿಗೆ ಸೇರ್ಪಡೆಯಾದ ಮಾಲಿನ್ಯ ರಹಿತ, ಹವಾನಿಯಂತ್ರಣ ರಹಿತ ಮತ್ತು ಕಡಿಮೆ ವೆಚ್ಚದ ಎಲೆಕ್ಟ್ರಿಕ್ ಬಸ್‌ಗಳ ಸಂಚಾರಕ್ಕೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಶುಕ್ರವಾರ ಚಾಲನೆ ನೀಡಿದರು.

ಟಾಟಾ ಮೋಟರ್ಸ್ ಸ್ಮಾರ್ಟ್ ಮೊಬಿಲಿಟಿ ಸಿಟಿ ಲಿಮಿಟೆಡ್ ತಯಾರಿಸಿರುವ ಈ ಬಸ್‌ನಲ್ಲಿ ಚಾಲಕ ಟಾಟಾ ಮೋಟರ್ಸ್‌ನವರೇ ಇರುತ್ತಾರೆ. ನಿರ್ವಾಹಕ ಬಿಎಂಟಿಸಿ ನೌಕರರಾಗಿರುತ್ತಾರೆ. ಕೇಂದ್ರ ಸರ್ಕಾರ ಪ್ರತಿ ಬಸ್‌ಗೆ ₹ 39 ಲಕ್ಷ ಸಬ್ಸಿಡಿ ನೀಡುತ್ತಿದೆ. ಉಳಿದ ಮೊತ್ತವನ್ನು ಟಾಟಾದವರೇ ಭರಿಸುತ್ತಾರೆ. ಪ್ರತಿ ಕಿಲೋಮೀಟರ್‌ಗೆ ₹ 41ರಂತೆ ಟಾಟಾ ಮೋಟರ್ಸ್‌ಗೆ ಬಿಎಂಟಿಸಿ ನೀಡಬೇಕು. ಇದನ್ನು ಹೊರತುಪಡಿಸಿದರೆ ಯಾವುದೇ ಹೊರೆ ಬಿಎಂಟಿಸಿಗೆ ಇರುವುದಿಲ್ಲ. ಈಗ ಒಂದು ಬಸ್‌ಗೆ ಚಾಲನೆ ನೀಡಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ಒಳಗೆ ಒಟ್ಟು 921 ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸಲಿವೆ ಎಂದು ಸಚಿವರು ಭರವಸೆ ನೀಡಿದರು.

10 ವರ್ಷಗಳಿಂದ ಬಸ್ ಇದ್ದಷ್ಟೇ ಇವೆ. ಪ್ರಯಾಣಿಕರ ಸಂಖ್ಯೆ ಏರಿದೆ. ಅದಕ್ಕೆ ಅನುಗುಣವಾಗಿ ಬಸ್ ಖರೀದಿಸಲಾಗುವುದು. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯು-ಕೆಆರ್‌ಟಿಸಿ ಈ ನಾಲ್ಕು ನಿಗಮಗಳಲ್ಲಿ 4,000 ಬಸ್‌ಗಳನ್ನು ಖರೀದಿಸುವ ಉದ್ದೇಶ ಇದೆ. ಅವಶ್ಯಕತೆ ಇರುವಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲಾಗುವುದು. ಚಾಲಕ, ನಿರ್ವಾಹಕ, ಮೆಕ್ಯಾನಿಕಲ್ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆಯು ಅನುಮೋದನೆ ಹಂತದಲ್ಲಿದೆ ಎಂದು ತಿಳಿಸಿದರು.

ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ. ಪ್ರಸಾದ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ಟಿಎಂಎಲ್ ಸಿಇಒ ಅಸೀಮ್ ಮುಖ್ಯೋಪಾಧ್ಯಾಯ, ಉಪಾಧ್ಯಕ್ಷ ರೋಹಿತ್ ಶ್ರೀವಾಸ್ತವ, ಅರವಿಂದ್ ಮೋಟಾರ್ಸ್ ವ್ಯವಸ್ಥಾಪಕ ನಿರ್ದೇಶಕ ಕಿಶೋರ್ ರಾವ್ ಅವರೊಂದಿಗೆ ಸಚಿವರು ಎಲೆಕ್ಟ್ರಿಕ್ ಬಸ್‌ನಲ್ಲಿ ಶಾಂತಿನಗರದಿಂದ ವಿಧಾನಸೌಧದವರೆಗೆ ಪ್ರಾಯೋಗಿಕ ಸಂಚಾರ ನಡೆಸಿದರು.

ಪ್ರಾಯೋಗಿಕವಾಗಿ ಈ ಬಸ್‌ಗಳ ಕಾರ್ಯಾಚರಣೆಯು 96-ಎ ಮಾರ್ಗದಲ್ಲಿ ಅಂದರೆ ಕೆಂಪೇಗೌಡ ಬಸ್ ನಿಲ್ದಾಣ, ಸುಜಾತ ಟಾಕೀಸ್, ಇಂಡಸ್ಟ್ರಿಯಲ್ ಟೌನ್ ರಾಜಾಜಿನಗರ, ಹಾವನೂರು ವೃತ್ತ, ಮೋದಿ ಆಸ್ಪತ್ರೆ, ಹರಿಶ್ಚಂದ್ರ ಘಾಟ್, ಸೆಂಟ್ರಲ್, ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಸಂಚರಿಸಲಿದೆ.



ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಸಂಚಾರಕ್ಕೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಶುಕ್ರವಾರ ಚಾಲನೆ ನೀಡಿದರು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಜಿ., ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್.ವಿ. ಪ್ರಸಾದ್ ಇದ್ದರು – ಪ್ರಜಾವಾಣಿ ಚಿತ್ರ

ಭಾರತೀಯ ಕಲೆ, ಸಂಸ್ಕೃತಿ ಅನಾವರಣ



ಓಂತರ ಕಲಾ ಕುಟೀರದಲ್ಲಿ 'ನಾವು ನಮ್ಮವರು–2023' ಕಾರ್ಯಕ್ರಮಕ್ಕೆ ಮಾಜಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ನಟ ಶ್ರೀನಾಥ್, ಓಂತರ ಕಲಾ ಕುಟೀರದ ಸಹ ಸಂಸ್ಥಾಪಕಿ ಜಯಲಕ್ಷ್ಮೀ ಅನಂತರಾಮ್, ಕಲಾ ನಿರ್ದೇಶಕ ಸೈಯದ್ ಸಲ್ಲಾವುದ್ದೀನ್ ಪಾಷಾ, 'ನಾವು ನಮ್ಮವರು' ತಂಡದ ಬೃಂದಲಾ ಅನಂತರಾಮ್ ಮತ್ತು ಅಂಜಲಿ ಸಂತೋಷ್ ಚಾಲನೆ ನೀಡಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಂತರ ಕಲಾ ಕುಟೀರದಲ್ಲಿ ಇತ್ತೀಚೆಗೆ ನಡೆದ 'ನಾವು ನಮ್ಮವರು–2023' ಕಾರ್ಯಕ್ರಮದಲ್ಲಿ ಭಾರತೀಯ ಕಲೆ ಮತ್ತು ಸಂಸ್ಕೃತಿಗಳು ಅನಾವರಣಗೊಂಡವು.

ಸಾಂಪ್ರದಾಯಿಕ ವಾಚನ, ಭಾವಪೂರ್ಣ ಗಾಯನ, ಸಮ್ಮೋಹನಗೊಳಿಸುವ ನೃತ್ಯಗಳು 1,000ಕ್ಕೂ ಅಧಿಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದವು. 200ಕ್ಕೂ ಅಧಿಕ ಕಲಾವಿದರು ವಿವಿಧ ಕಲಾ ಪ್ರಕಾರಗಳನ್ನು ಬೆಳಿಗ್ಗಿನಿಂದ ಸಂಜೆವರೆಗೆ ಪ್ರದರ್ಶಿಸಿದರು.

ಭರತನಾಟ್ಯ, ಕಲರಿಪಯಟ್ಟು, ಕೂಚಿಪುಡಿ, ಕಥಕ್ ಮುಂತಾದ ಶಾಸ್ತ್ರೀಯ ನೃತ್ಯ ಪ್ರಕಾರಗಳು ಗಮನ ಸೆಳೆದವು. ಜಗ್ಲಿಂಗ್, ಫಿಲ್ಮಿ ಹಾಡುಗಳು, ಮೋನೋ-ಆಕ್ಟಿಂಗ್ ಮತ್ತು ಇತರ ಪ್ರದರ್ಶನಗಳು ಮನಸೂರೆಗೊಂಡವು. ಗ್ರ್ಯಾಂಡ್ ಫಿನಾಲೆಯಲ್ಲಿ ಫ್ಯಾಷನ್ ಶೋ, ರೋಮಾಂಚಕ ಬೆಲ್ಲಿ ಡ್ಯಾನ್ಸ್ ಸಾಂಸ್ಕೃತಿಕ ಹಬ್ಬಕ್ಕೆ ಮೆರುಗು ನೀಡಿದವು.

ತಾರಾ ಎಂಟರ್‌ಟೈನ್‌ಮೆಂಟ್‌ನ ಸಹಯೋಗದಲ್ಲಿ ಓಂತರ ಕಲಾ ಕುಟೀರ ಪ್ರಸ್ತುತಪಡಿಸಿದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಓಂತರ ಕಲಾ ಕುಟೀರದ ಸಹ ಸಂಸ್ಥಾಪಕಿ ಜಯಲಕ್ಷ್ಮೀ ಅನಂತರಾಮ್ ವಹಿಸಿದ್ದರು. ಮಾಜಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ನಟ ಶ್ರೀನಾಥ್ ಭಾಗವಹಿಸಿದ್ದರು. ಕಲಾ ನಿರ್ದೇಶಕ ಸೈಯದ್ ಸಲ್ಲಾವುದ್ದೀನ್ ಪಾಷಾ ಅವರನ್ನು ಸನ್ಮಾನಿಸಲಾಯಿತು. 'ನಾವು ನಮ್ಮವರು' ತಂಡದ ಬೃಂದಲಾ ಅನಂತರಾಮ್ ಮತ್ತು ಅಂಜಲಿ ಸಂತೋಷ್ ಕಾರ್ಯಕ್ರಮ ನಡೆಸಿಕೊಟ್ಟರು.

ಹೊಸ ವರ್ಷಕ್ಕೆ: 'ನಾವು ನಮ್ಮವರು–2024' ಡಿಸೆಂಬರ್31 ಮತ್ತು 2024ರ ಜನವರಿ 1ರಂದು ನಡೆಯಲಿದೆ. ಆಸಕ್ತರು ಟಿಕೆಟ್‌ಗಾಗಿ https://allevents.in/bangalore/naavu-nammavaru-2024/80003523917370?ref=smdl ಸಂಪರ್ಕಿಸ ಬಹುದು.

ಹರಿದಾಡಿದ ವಿಡಿಯೊ: ವಿದ್ಯಾರ್ಥಿನಿ ಆತ್ಮಹತ್ಯೆ

ದಾವಣಗೆರೆ: ನಗರದ ಪದವಿ ಕಾಲೇಜೊಂದರ ಕಟ್ಟಡದ ಚಾವಣಿಯ ಬಳಿ ಅದೇ ಕಾಲೇಜಿನ ವಿದ್ಯಾರ್ಥಿಗಳಿಬ್ಬರು ಕಳೆದಿದ್ದ ಖಾಸಗಿ ಕ್ಷಣಗಳ ವಿಡಿಯೊ ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ವಿಡಿಯೊದಲ್ಲಿದ್ದ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಪರಸ್ಪರ ಪ್ರೇಮಿಗಳಾಗಿದ್ದ ಯುವಕ-ಯುವತಿ ಕಾಲೇಜಿನ ಕಟ್ಟಡದ ಮೇಲೆ ಎರಡು ತಿಂಗಳ ಹಿಂದೆ ಖಾಸಗಿ ಕ್ಷಣ ಕಳೆಯುತ್ತಿರುವುದನ್ನು ಬೇರೆ ಕಟ್ಟಡದಲ್ಲಿ ಕುಳಿತು ನೋಡಿದ್ದ ಕೆಲವರು ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದರು. ಆ ವಿಡಿಯೊ ಶುಕ್ರವಾರ ಬೆಳಿಗ್ಗೆಯಿಂದ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಮಧ್ಯಾಹ್ನದ ನಂತರ ಕೆಲವು ಖಾಸಗಿ ಸುದ್ದಿ ವಾಹಿನಿಗಳ ಆನ್‌ಲೈನ್ ಆವೃತ್ತಿಯಲ್ಲಿ ಈ ವಿಡಿಯೊ ಕುರಿತ ಸುದ್ದಿ ಪ್ರಸಾರವಾಗಿತ್ತು.

'ವಿಡಿಯೊ ಹರಿದಾಡಿದ್ದರಿಂದ ನೊಂದ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ವಿಡಿಯೊ ಹರಿಬಿಟ್ಟವರು ಹಾಗೂ ಸುದ್ದಿ ಪ್ರಸಾರ ಮಾಡಿದ ಮಾಧ್ಯಮಗಳ ವಿರುದ್ಧ ಯಾರಾದರೂ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ. ಅರುಣ್ ತಿಳಿಸಿದರು.

ಕಾನ್‌ಸ್ಟೆಬಲ್ ₹ 500 ಲಂಚ ಪಡೆದಿದ್ದ ಬಗ್ಗೆ ದೂರು

'ಲೋಕಸ್ಪಂದನೆ ದೂರು ಬಂದಿದ್ದಕ್ಕೆ ಅಮಾನತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸರ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲು ಜಾರಿಗೆ ತಂದಿರುವ ಲೋಕಸ್ಪಂದನೆ ಕ್ಯೂಆರ್ ಕೋಡ್ ವ್ಯವಸ್ಥೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪಾಸ್‌ಪೋರ್ಟ್ ಪಡೆಯಲು ₹ 500 ಲಂಚ ಪಡೆದಿದ್ದ ಬಗ್ಗೆ ದೂರು ಬರುತ್ತಿದ್ದಂತೆ, ಕಾನ್‌ಸ್ಟೆಬಲ್‌ನನ್ನು ಅಮಾನತು ಮಾಡಲಾಗಿದೆ' ಎಂದು ಕಮಿಷನರ್ ಬಿ. ದಯಾನಂದ್ ಹೇಳಿದರು.

ಮೈಸೂರು ರಸ್ತೆಯಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸೇವಾ ಕವಾಯತ್‌ನಲ್ಲಿ ಪಾಲ್ಗೊಂಡು ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ಲೋಕಸ್ಪಂದನೆ ಮೂಲಕ ಬರುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಕರ್ತವ್ಯ ಲೋಪವೆಸಗುತ್ತಿರುವ ಸಿಬ್ಬಂದಿ ಬಗ್ಗೆ ದೂರುಗಳು ಬಂದಿದ್ದು, ಅವರೆಲ್ಲರಿಗೂ ಎಚ್ಚರಿಕೆ ನೀಡಲಾಗಿದೆ. ಡಿಸಿಪಿ ಹಾಗೂ ಎಸಿಪಿಗಳು ದೂರುಗಳ ವಿಚಾರಣೆ ಮಾಡುತ್ತಿದ್ದಾರೆ' ಎಂದರು.

'ಪೊಲೀಸರು ಸಾರ್ವಜನಿಕರ ಜೊತೆ ಸೌಜನ್ಯವಾಗಿ ವರ್ತಿಸಬೇಕು. ನೊಂದವರಿಗೆ ಕಾನೂನಿನಡಿ ನ್ಯಾಯ ದೊರಕಿಸಬೇಕು. ಜನರ ನಂಬಿಕೆ ಗಳಿಸಬೇಕು' ಎಂದು ಹೇಳಿದರು.

ಬಾಡಿವೋರ್ನ್ ಕ್ಯಾಮೆರಾ ಧರಿಸಿದ ಕಮಿಷನರ್: ಕರ್ತವ್ಯದ ಸಂದರ್ಭದಲ್ಲಿ ಎಲ್ಲ ಸಿಬ್ಬಂದಿ ಬಾಡಿವೋರ್ನ್ ಕ್ಯಾಮೆರಾ ಧರಿಸುವಂತೆ ತಿಳಿಸಿರುವ ಕಮಿಷನರ್ ಬಿ. ದಯಾನಂದ್, ತಾವು ಸಹ ಕ್ಯಾಮೆರಾ ಧರಿಸಿ ನಗರದಲ್ಲಿ ಸಂಚರಿಸಿದರು.

'ಕಾನ್‌ಸ್ಟೆಬಲ್, ಹೆಡ್ ಕಾನ್‌ಸ್ಟೆಬಲ್, ಎಎಸ್‌ಐ, ಪಿಎಸ್‌ಐ ಹಾಗೂ ಇನ್‌ಸ್ಪೆಕ್ಟರ್‌ಗಳಿಗೆ ಬಾಡಿವೋರ್ನ್ ಕ್ಯಾಮೆರಾ ಧರಿಸುವಂತೆ ಸೂಚಿಸಲಾಗಿದೆ. ಸಿಬ್ಬಂದಿಗೆ ಪ್ರೋತ್ಸಾಹ ನೀಡಲು ಕಮಿಷನರ್ ಸಹ ಬಾಡಿವೋರ್ನ್ ಕ್ಯಾಮೆರಾ ಧರಿಸುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ನಗರದ ಮೈಸೂರು ರಸ್ತೆಯಲ್ಲಿರುವ ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸೇವಾ ಕವಾಯತ್‌ನಲ್ಲಿ ಮಹಿಳಾ ಸಿಬ್ಬಂದಿ ಪಥಸಂಚಲನ ನಡೆಸಿದರು – ಪ್ರಜಾವಾಣಿ ಚಿತ್ರ

ವಿದ್ಯಾರ್ಥಿ ಕೊಲೆ: ರೌಡಿ ಸೇರಿ ಐವರು ಬಂಧನ


ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಯುವತಿಯೊಬ್ಬರಿಗೆ ಸಂದೇಶ ಕಳುಹಿಸಿದ್ದ ವಿಚಾರ ಸಂಬಂಧ ಜಗಳ ತೆಗೆದು ಬಿ.ಕಾಂ ವಿದ್ಯಾರ್ಥಿ ಮಾರ್ವೇಶ್ (19) ಅವರನ್ನು ಕೊಲೆ ಮಾಡಿದ್ದ ಆರೋಪದಡಿ ರೌಡಿ ಸೇರಿ ಐವರನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರೌಡಿ ಕಾರ್ತಿಕ್, ಅಭಿಷೇಕ್, ಯೊಹಾನ್ ಫ್ರಾಂಕ್ಲೆ, ಅಂಟೊನಿ ಡ್ಯಾನಿಯಲ್ ಹಾಗೂ ಶ್ರೀಕಾಂತ್ ಬಂಧಿತರು. ಇವರೆಲ್ಲರೂ ಸೇರಿ, ಮಾರ್ವೇಶ್ ಅವರನ್ನು ಜುಲೈ 26ರಂದು ಬೆಳಿಗ್ಗೆ ಕೊಲೆ ಮಾಡಿ ಪರಾರಿಯಾಗಿದ್ದರು. ಸೂಕ್ತ ಪುರಾವೆಗಳನ್ನು ಸಂಗ್ರಹಿಸಿ ಆರೋಪಿ ಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಐವರು ಆರೋಪಿಗಳು, ಅಪರಾಧ ಹಿನ್ನೆಲೆಯುಳ್ಳವರು. ರಾಮಮೂರ್ತಿ ನಗರ ಠಾಣೆಯ ರೌಡಿ ಪಟ್ಟಿಯಲ್ಲಿ ಕಾರ್ತಿಕ್ ಹೆಸರಿದೆ. ಅಭಿಷೇಕ್ ಹಾಗೂ ನೆಲ್ಸನ್ ವಿರುದ್ಧವೂ ಕೊಲೆ ಯತ್ನ


ಕಾರ್ತಿಕ್


ಅಭಿಷೇಕ್


ಶ್ರೀಕಾಂತ್


ಯೋಹಾನ್ ಫ್ರಾಂಕ್ಲೆ

ಪ್ರಕರಣಗಳು ದಾಖಲಾಗಿವೆ. ಇವರಿಬ್ಬರ ಹೆಸರನ್ನು ರೌಡಿ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಸ್ನೇಹಿತನಿಂದ ಗಲಾಟೆ: ‘ಮಾರ್ವೇಶ್ ಅವರ ಸ್ನೇಹಿತನೊಬ್ಬ, ಯುವತಿಯೊಬ್ಬರ ಹಿಂದೆ ಬಿದ್ದಿದ್ದ. ಸಂದೇಶ ಕಳುಹಿಸಿ ಕಿರುಕುಳ ನೀಡುತ್ತಿದ್ದ. ಬೇಸತ್ತಿದ್ದ ಯುವತಿ, ಸ್ನೇಹಿತನಾಗಿದ್ದ


ಅಂಟೋನಿ ಡ್ಯಾನಿಯಲ್

ಆರೋಪಿ ಶ್ರೀಕಾಂತ್‌ಗೆ ವಿಷಯ ತಿಳಿಸಿದ್ದರು. ಸ್ನೇಹಿತನಿಗೆ ಎಚ್ಚರಿಕೆ ನೀಡಲು ಮುಂದಾಗಿದ್ದ ಶ್ರೀಕಾಂತ್, ರೌಡಿ ಕಾರ್ತಿಕ್ ಸಹಾಯ ಕೋರಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಐವರು ಆರೋಪಿಗಳು, ಮಾರ್ವೇಶ್ ಮೂಲಕ ಸ್ನೇಹಿತನನ್ನು ಕರೆಸಿ ಹಲ್ಲೆ ಮಾಡಲು ಸಂಚು ರೂಪಿಸಿದ್ದರು. ಅದರಂತೆ ಬುಧವಾರ ಬೆಳಿಗ್ಗೆ ಕಾಲೇಜು ಬಳಿ ಬಂದಿದ್ದ ಆರೋಪಿಗಳು, ಮಾರ್ವೇಶ್ ಜೊತೆ ಜಗಳ ತೆಗೆದು ಹಲ್ಲೆ ಮಾಡಿದ್ದರು. ಪೈಪ್‌ನಿಂದ ಹೊಡೆದಿದ್ದರು. ಸ್ನೇಹಿತನಿಗೆ ಕರೆ ಮಾಡಿ ಸ್ಥಳಕ್ಕೆ ಕರೆಸುವಂತೆ ಪೀಡಿಸಿದ್ದರು. ಆದರೆ, ಸ್ನೇಹಿತ ಕರೆ ಸ್ವೀಕರಿಸಿರಲಿಲ್ಲ. ಆರೋಪಿಗಳು ಸ್ಥಳದಿಂದ ಹೊರಟು ಹೋಗಿದ್ದರು.’ ‘ತೀವ್ರ ಹಲ್ಲೆಯಿಂದಾಗಿ ಮಾರ್ವೇಶ್ ಸ್ಥಳದಲ್ಲಿಯೇ ಕುಸಿದು ಬಿದ್ದಿದ್ದರು. ಸಹಪಾಠಿಗಳೇ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದ್ದರು’ ಎಂದು ಮೂಲಗಳು ವಿವರಿಸಿವೆ.

ನಾಪತ್ತೆಯಾಗಿದ್ದ ಮಕ್ಕಳು: ಮೊಬೈಲ್ ಕರೆ ಸುಳಿವಿನಿಂದ ಪತ್ತೆ

ಬೆಂಗಳೂರು: ಶಾಲೆಯಿಂದ ಮನೆಗೆ ಹೋಗುವ ಸಂದರ್ಭದಲ್ಲಿ ನಾಪತ್ತೆಯಾಗಿದ್ದ ಇಬ್ಬರು ಮಕ್ಕಳನ್ನು ವಿ.ವಿ.ಪುರ ಠಾಣೆ ಪೊಲೀಸರು ಪತ್ತೆ ಮಾಡಿ, ಪೋಷಕರ ಸುಪರ್ದಿಗೆ ಒಪ್ಪಿಸಿದ್ದಾರೆ.

ಠಾಣೆ ವ್ಯಾಪ್ತಿಯ ಶಾಲೆಯೊಂದರ ಮಕ್ಕಳು ನಾಪತ್ತೆಯಾದ ಬಗ್ಗೆ ದೂರು ಬರುತ್ತಿದ್ದಂತೆ ತ್ವರಿತ ಕಾರ್ಯಾಚರಣೆ ನಡೆಸಿದ್ದ 20 ಪೊಲೀಸರ ತಂಡ, ಮೂರು ಗಂಟೆಗಳಲ್ಲಿ ಮಕ್ಕಳನ್ನು ಹುಡುಕಿ ಕೊಟ್ಟಿದ್ದಾರೆ.

‘ಇಬ್ಬರು ಮಕ್ಕಳು ಶಾಲೆಯಿಂದ ಮನೆಗೆ ಆಟೊದಲ್ಲಿ ಹೊರಟಿದ್ದರು. ಮಾರ್ಗ ಮಧ್ಯೆ ಆಟೊ ನಿಲ್ಲಿಸಿದ್ದ ಚಾಲಕ, ಅಂಗಡಿಯೊಂದಕ್ಕೆ ಹೋಗಿದ್ದರು. ಅವರು ವಾಪಸ್ ಬರುವಷ್ಟರಲ್ಲಿ ಇಬ್ಬರು ಮಕ್ಕಳು ಆಟೊದಿಂದ ಇಳಿದು ಸ್ಥಳದಿಂದ ಹೊರಟು ಹೋಗಿದ್ದರು. ಚಾಲಕ ಎಷ್ಟೇ ಹುಡುಕಾಡಿದರೂ ಸುಳಿವು ಸಿಕ್ಕಿರಲಿಲ್ಲ. ಮಕ್ಕಳು ನಾಪತ್ತೆಯಾದ ಸುದ್ದಿ ತಿಳಿದು ಪೋಷಕರು ಗಾಬರಿಗೊಂಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬಳಿ ನಡೆದುಕೊಂಡು ಹೋಗಿದ್ದ ಮಕ್ಕಳು, ರಸ್ತೆಯಲ್ಲಿ ಯುವತಿಯೊಬ್ಬರನ್ನು ಮಾತನಾಡಿಸಿದ್ದರು. ‘ನಮ್ಮ ಮನೆ ಎಲ್ಲಿದೆ ಎಂಬುದು ಗೊತ್ತಾಗುತ್ತಿಲ್ಲ. ಭಯವಾಗುತ್ತಿದೆ’ ಎಂದು ಯುವತಿ ಬಳಿ ಅಳಲು ತೋಡಿಕೊಂಡು ಕಣ್ಣೀರು ಹಾಕಿದ್ದರು.’

‘ರಸ್ತೆಯಲ್ಲಿ ತೆರಳುತ್ತಿದ್ದ ವ್ಯಕ್ತಿಯೊಬ್ಬರ ಬಳಿ ಸಹಾಯ ಕೋರಿದ್ದ ಯುವತಿ, ಮಕ್ಕಳ ತಂದೆಗೆ ಕರೆ ಮಾಡುವಂತೆ ಕೇಳಿದ್ದರು. ಅದೇ ವ್ಯಕ್ತಿ, ಮಕ್ಕಳ ತಂದೆಗೆ ಕರೆ ಮಾಡಿದ್ದರು. ‘ನಿಮ್ಮ ಮಕ್ಕಳು ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬಳಿ ಇದ್ದಾರೆ. ಬನ್ನಿ.’ ಎಂದು ಹೇಳಿ ಕರೆ ಕಡಿತಗೊಳಿಸಿ ಸ್ಥಳದಿಂದ ಹೊರಟು ಹೋಗಿದ್ದರು. ಇದಾದ ನಂತರ ಕರೆ ಸ್ವೀಕರಿಸಿರಲಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಮೊಬೈಲ್ ಕರೆ ಸುಳಿವು ಆಧರಿಸಿ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬಳಿ ಹೋದಾಗ ಮಕ್ಕಳು ಇರಲಿಲ್ಲ. ನಿಲ್ದಾಣ ಸುತ್ತಮುತ್ತಲಿನ ಪ್ರದೇಶಗಳಲ್ಲಿ 20 ಸಿಬ್ಬಂದಿ ಹುಡುಕಾಟ ನಡೆಸಿದ್ದರು. ನಿಲ್ದಾಣದಿಂದ 1 ಕಿ.ಮೀ ದೂರದಲ್ಲಿದ್ದ ಸ್ಥಳದಲ್ಲಿ ಮಕ್ಕಳು ಪತ್ತೆಯಾದರು’ ಎಂದು ಮೂಲಗಳು ಹೇಳಿವೆ.

ಸ್ಫೋಟಕ್ಕೆ ಸಂಚು: ಗ್ರೆನೇಡ್ ನೀಡಿದ್ದವ ದುಬೈಗೆ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸಿದ್ದ ಶಂಕಿತ ಉಗ್ರ ಜಾಹಿದ್ ತಬ್ರೇಜ್‌ಗೆ 4 ಗ್ರೆನೇಡ್ ಕೊಟ್ಟಿದ್ದ ವ್ಯಕ್ತಿಯನ್ನು ಸಿಸಿಬಿ ಪೊಲೀಸರು ಪತ್ತೆ ಮಾಡಿದ್ದು, ಆತ ದುಬೈನಲ್ಲಿರುವ ಮಾಹಿತಿ ಕಲೆಹಾಕಿದ್ದಾರೆ.

‘ಸರಣಿ ಬಾಂಬ್ ಸ್ಫೋಟದ ಆರೋಪಿ ಟಿ. ನಾಸೀರ್ ಹಾಗೂ ಆರ್.ಟಿ.ನಗರ ಕೊಲೆ ಪ್ರಕರಣದ ಆರೋಪಿ ಜುನೈದ್ ಅಹಮ್ಮದ್ ಜೊತೆ ಒಡನಾಟ ಹೊಂದಿದ್ದ ಸಲ್ಮಾನ್ ಎಂಬಾತನೇ ಗ್ರೆನೇಡ್ ತಂದುಕೊಟ್ಟಿದ್ದನೆಂಬ ಮಾಹಿತಿ ಲಭ್ಯವಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪೋಕ್ಸೊ ಕಾಯ್ದೆಯಡಿ ದಾಖಲಾಗಿದ್ದ ಪ್ರಕರಣದಲ್ಲಿ ಸಲ್ಮಾನ್, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದ. ಅಲ್ಲಿಯೇ ಈತನಿಗೆ ಟಿ. ನಾಸೀರ್ ಹಾಗೂ ಜುನೈದ್ ಪರಿಚಯವಾಗಿತ್ತು. ಬಳಿಕ, ಬಾಂಬ್ ಸ್ಫೋಟಗಳು ಸಹಾಯ ಮಾಡುವುದಾಗಿ ಸಲ್ಮಾನ್ ಹೇಳಿದ್ದ. ಜಾಮೀನು ಮೇಲೆ ಹೊರಬಂದಿದ್ದ ಸಲ್ಮಾನ್, ನಾಸೀರ್ ಜೊತೆ ಸಂಪರ್ಕದಲ್ಲಿದ್ದ. ಆತ ಹೇಳಿದ್ದ ಉತ್ತರ ಪ್ರದೇಶದ ವ್ಯಕ್ತಿ ಕಡೆಯಿಂದ ಗ್ರೆನೇಡ್ ಪಡೆದಿದ್ದ ಸಲ್ಮಾನ್, ಬಂಗಳೂರಿನ ಕೊಡಿಗೇಹಳ್ಳಿಯ ಜಾಹಿದ್ ತಬ್ರೇಜ್‌ಗೆ ನೀಡಿದ್ದ. ಅದೇ ಗ್ರೆನೇಡ್‌ಗಳನ್ನು ಈಗಾಗಲೇ ಜಪ್ತಿ ಮಾಡಲಾಗಿದೆ. ಸಲ್ಮಾನ್, ದೇಶದಿಂದ ಪರಾರಿಯಾಗಿ ದುಬೈಗೆ ಹೋಗಿದ್ದಾನೆ. ಈತನನ್ನು ಬಂಧಿಸಿ ನಗರಕ್ಕೆ ಕರೆತರಲು ಎನ್‌ಐಎ ಅಧಿಕಾರಿಗಳ ಜೊತೆ ಸೇರಿ ಕಾರ್ಯಾಚರಣೆ ಆರಂಭಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಜೈಲು ಸಿಬ್ಬಂದಿ ಒಳ ಉಡುಪಿನಲ್ಲಿ ಮೊಬೈಲ್ ಪತ್ತೆ

ಬೆಂಗಳೂರು: ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದ ಪ್ರಮುಖ ಆರೋಪಿ ಟಿ. ನಾಸೀರ್ ಜೈಲಿನಿಂದಲೇ ಇತರೆ ಶಂಕಿತ ಉಗ್ರರಿಗೆ ಕರೆ ಮಾಡುತ್ತಿದ್ದ ಸಂಗತಿ ಹೊರಬೀಳುತ್ತಿದ್ದಂತೆ, ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ತಪಾಸಣೆ ಚುರುಕುಗೊಳಿಸಲಾಗಿದೆ.

‘ಇದರ ಬೆನ್ನಲ್ಲೇ, ಜೈಲಿನೊಳಗೆ ಅಕ್ರಮವಾಗಿ ಮೊಬೈಲ್ ಸಾಗಿಸುತ್ತಿದ್ದ ಸಿಬ್ಬಂದಿಯೊಬ್ಬರು ಪ್ರವೇಶ ದ್ವಾರದಲ್ಲಿ ಸಿಕ್ಕಿಬಿದ್ದಿದ್ದಾರೆ.

‘ಜೈಲಿನ ವಾಹನಗಳ ಸ್ವಚ್ಛತೆ ಕೆಲಸ ಮಾಡುತ್ತಿದ್ದ ಭಾನುಪ್ರಕಾಶ್ ಎಚ್.ಆರ್. ಅವರು ಜುಲೈ 25ರಂದು ಮಧ್ಯಾಹ್ನ ಎಂದಿನಂತೆ ಕರ್ತವ್ಯಕ್ಕೆ ಬಂದಿದ್ದರು. ಜೈಲಿನ ಪ್ರವೇಶ ದ್ವಾರದಲ್ಲಿ ಅವರನ್ನು ತಡೆದಿದ್ದ ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿದ್ದರು. ಇದೇ ಸಂದರ್ಭದಲ್ಲಿಯೇ ಅವರ ಒಳ ಉಡುಪಿನಲ್ಲಿ ಬೇಸಿಕ್ ಮೊಬೈಲ್ ಪತ್ತೆಯಾಗಿದೆ’ ಎಂದು ಜೈಲಿನ ಅಧೀಕ್ಷಕ ಮಲ್ಲಿಕಾರ್ಜುನ್ ಅವರು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ಆರೋಪಿ ಭಾನುಪ್ರಕಾಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ‘ಆರೋಪಿ ಬಳಿಯ ಮೊಬೈಲ್ ಜಪ್ತಿ ಮಾಡಲಾಗಿದೆ. ಭಾನುಪ್ರಕಾಶ್ ನನ್ನು ವಿಚಾರಣೆ ನಡೆಸಲಾಗುತ್ತಿದೆ. ಹಣದ ಆಸೆಗಾಗಿ ಜೈಲಿನಲ್ಲಿರುವ ಕೈದಿಗಳಿಗೆ ಈತ ಮೊಬೈಲ್ ತೆಗೆದುಕೊಂಡು ಹೋಗುತ್ತಿದ್ದನೆಂಬ ಮಾಹಿತಿ ಇದ್ದು ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಗ್ರಾಹಕನ ಸೋಗು: ರ‍್ಯಾಪಿಡೊ ಬೈಕ್ ಸವಾರನಿಗೆ ವಂಚನೆ

ಬೆಂಗಳೂರು: ‘ಗ್ರಾಹಕನ ಸೋಗಿನಲ್ಲಿ ರ‍್ಯಾಪಿಡೊ ಬೈಕ್ ಕಾಯ್ದಿರಿಸಿದ್ದ ವ್ಯಕ್ತಿಯೊಬ್ಬ ಹಣ ಪಡೆದು ವಂಚಿಸಿದ್ದಾನೆ’ ಎಂದು ಆರೋಪಿಸಿ ಸವಾರ ಮಣಿಕಂಠ, ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

‘ಗ್ರಾಹಕ ರಣವೀರ್ ಎಂಬಾತ ವಂಚನೆ ಮಾಡಿರುವುದಾಗಿ ಮಣಿಕಂಠ ದೂರಿದ್ದಾರೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಂ.ಟೆಕ್ ಪದವೀಧರ ಮಣಿಕಂಠ, ಕೆಲಸಕ್ಕಾಗಿ ನಗರಕ್ಕೆ ಬಂದಿದ್ದರು. ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಹೀಗಾಗಿ, ರ‍್ಯಾಪಿಡೊ ಬೈಕ್ ಟ್ಯಾಕ್ಸಿ ಸವಾರರಾಗಿ ಕೆಲಸ ಮಾಡುತ್ತಿದ್ದರು. ಜುಲೈ 27ರಂದು ರಾತ್ರಿ ಅರಕೆರೆ ಬಳಿ ಮಣಿಕಂಠ ಹೊರಟಿದ್ದರು. ಗ್ರಾಹಕ ರಣವೀರ್, ಬೈಕ್ ಟ್ಯಾಕ್ಸಿ ಕಾಯ್ದಿರಿಸಿದ್ದ. ಸ್ಥಳಕ್ಕೆ ಹೋಗಿದ್ದ ಮಣಿಕಂಠ ಅವರಿಗೆ ಕರೆ ಮಾಡಿದ್ದ ಆರೋಪಿ, ‘ನನ್ನ ಪತ್ನಿಗೆ ಹುಷಾರಿಲ್ಲ. ಚಿಕಿತ್ಸೆ ವೆಚ್ಚ ಭರಿಸಬೇಕು. ನನ್ನ ಬಳಿ ಫೋನ್ ಪೇ ಇಲ್ಲ. ವೈದ್ಯರ ಮೊಬೈಲ್ ನಂಬರ್‌ಗೆ ₹ 4 ಸಾವಿರ ಹಣ ಕಳುಹಿಸಿ. ನಾನು ನಿಮಗೆ ಹಣ ಕೊಡುತ್ತೇನೆ’ ಎಂದಿದ್ದ. ಅದನ್ನು ನಂಬಿದ್ದ ಮಣಿಕಂಠ, ಹಣ ಕಳುಹಿಸಿದ್ದರು. ನಂತರ ಆರೋಪಿ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಜೆಪಿ ಕಾರ್ಯಕರ್ತರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಸಚಿವ ಜಿ. ಪರಮೇಶ್ವರ ಮನೆ ಎದುರು ಪ್ರತಿಭಟನೆ ನಡೆಸಿ ಮುತ್ತಿಗೆ ಯತ್ನಿಸಿದ್ದ ಆರೋಪದಡಿ ಬಿಜೆಪಿ ಯುವಮೋರ್ಚಾ ಕಾರ್ಯಕರ್ತರ ವಿರುದ್ಧ ಸದಾಶಿವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸದಾಶಿವನಗರ ಠಾಣೆ ವ್ಯಾಪ್ತಿಯಲ್ಲಿರುವ ಗೃಹ ಸಚಿವರ ಮನೆ ಎದುರು ಅಕ್ರಮವಾಗಿ ಸೇರಿದ್ದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದಿದ್ದರು. ಹೀಗಾಗಿ, ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರಗತಿಪರ ಸಂಘಟನೆಗಳ ಹೋರಾಟ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ವಿಜಯಾ, ಸಿ.ಎಸ್. ದ್ವಾರಕಾನಾಥ್, ಸಬಿಹಾ ಭೂಮಿಗೌಡ, ಸೌಜನ್ಯ ತಾಯಿ ಕುಸುಮಾವತಿ, ಲಕ್ಷ್ಮಿ ಮೊದಲ ಸಾಲಿನಲ್ಲಿದ್ದಾರೆ – ಪ್ರಜಾವಾಣಿ ಚಿತ್ರ

ಸೌಜನ್ಯ ಪ್ರಕರಣ: ಎಸ್‌ಐಟಿ ತನಿಖೆಗೆ ಪ್ರಗತಿಪರರ ಆಗ್ರಹ

ಬೆಂಗಳೂರು: ‘ಧರ್ಮಸ್ಥಳದ ಸೌಜನ್ಯ ಪ್ರಕರಣದ ಬಗ್ಗೆ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ತನಿಖೆ ನಡೆಸಬೇಕು’ ಎಂದು ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಹೋರಾಟ ಸಮಿತಿ ಪದಾಧಿಕಾರಿಗಳು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ‘ಸೌಜನ್ಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಆರೋಪಿಗಳಿಗೆ ಶಿಕ್ಷೆಯಾಗಬೇಕು’ ಎಂದು ಘೋಷಣಾ ಫಲಕ ಪ್ರದರ್ಶಿಸಿದರು. ಸೌಜನ್ಯ ತಾಯಿ ಕುಸುಮಾವತಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

‘ಪ್ರಕರಣದ ಆರೋಪಿಗಳು ಧರ್ಮಸ್ಥಳದಲ್ಲಿ ರಾಜಾರೋಷವಾಗಿ ಸುತ್ತಾಡುತ್ತಿದ್ದಾರೆ. ಪ್ರಕರಣದ ಮರುತನಿಖೆ ನಡೆಸಿ, ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಬೇಕು. ಪ್ರಕರಣದಲ್ಲಿ ಸೂಕ್ತ ತನಿಖೆ ನಡೆಸದ ಪೊಲೀಸ್ ಅಧಿಕಾರಿಗಳು ಹಾಗೂ ನ್ಯಾಯಾಧೀಶರು ವೈದ್ಯಕೀಯ ವರದಿ ನೀಡದ ವೈದ್ಯರ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ, ‘ಸೌಜನ್ಯ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿರುವ ಪ್ರಕರಣವನ್ನು ಮುಚ್ಚಿಹಾಕಲು ಸರ್ಕಾರ ಪ್ರಯತ್ನಿಸುತ್ತಿದೆ. ಅಪರಾಧಿಗಳನ್ನು ರಕ್ಷಿಸುತ್ತಿರುವವರಿಗೆ ಶಾಪ ತಟ್ಟುತ್ತದೆ’ ಎಂದರು.

ಮನವಿ: ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಗತಿಪರ ಸಂಘಟನೆಗಳ ಸದಸ್ಯರು ಭೇಟಿಯಾಗಿ ಮನವಿ ಸಲ್ಲಿಸಿದರು.

ಕೆ.ಎಸ್. ವಿಮಲಾ, ಗೌರಮ್ಮ, ಲಕ್ಷ್ಮಿ, ಪ್ರಭಾ ಬೆಳವಂಗಲ, ಲೀಲಾ ಸಂಪಿಗೆ, ದೇವಿ, ರೂಪ್ ಮನೋರಮಾ, ಅಕ್ಕೈ ಪದ್ಮಸಾಲಿ, ಅಖಿಲಾ, ಬಿ.ಎಂ. ಭಟ್, ಭೀಮನಗೌಡ, ಬಸಮ್ಮ ಸುಮತಿ ಹಾಗೂ ಲಹರಿ ಇದ್ದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಆಯುಕ್ತರ ಕಚೇರಿ, ಗ್ರಾ.ಕು.ನೀ.ನೈ.ಇ, 1ನೇ ಮಹಡಿ, "ಇ" ಬ್ಲಾಕ್, ಕೆ.ಹೆಚ್.ಬಿ. ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

ದೂ: 080-22433700, 22240508, ಫ್ಯಾಕ್ಸ್: 22240509 ಇ-ಮೇಲ್: krwssd@gmail.com

ಸಂ: ಗ್ರಾಕುನೀನೈಇ/ಆಡಳಿತ/ನೇ-1/24/ಕಾ.ಸ/2023 ದಿನಾಂಕ: 24.07.2023

ನೇಮಕಾತಿ ಪ್ರಕಟಣೆ

ಹುದ್ದೆಯ ಹೆಸರು	ವಿದ್ಯಾರ್ಹತೆ ಮತ್ತು ಅನುಭವ	ಮಾಸಿಕ ಸಂಭಾವನೆ
ಕಾನೂನು ಸಲಹೆಗಾರರು (ಹೊರಗುತ್ತಿಗೆ ಆಧಾರದ ಮೇಲೆ)	ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು	ರೂ. 50,000/-

1. ಹೊರಗುತ್ತಿಗೆ ಅವಧಿ: ಮೇಲಿನ ಹುದ್ದೆಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಒಂದು ವರ್ಷದ ಅವಧಿಗೆ ಹೊರಗುತ್ತಿಗೆಯ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು ನಂತರ ಕಾಲಕಾಲಕ್ಕೆ ಅವರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ಅವಶ್ಯಕತೆಯಿದ್ದಲ್ಲಿ ಮುಂದುವರೆಸಲಾಗುವುದು.
2. ವಯೋಮಾನ: ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 65 ವರ್ಷಗಳು ಮೀರಿರಬಾರದು.
3. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪರಿಣಿತಿಯನ್ನು ಹೊಂದಿರಬೇಕು.
4. ಇಲಾಖೆಯ ವಿರುದ್ಧ ದಾಖಲಾಗಿರುವ ಎಲ್ಲಾ ವಿಧವಾದ ಪ್ರಕರಣಗಳಲ್ಲಿ (ರಿಟ್ ಅರ್ಜಿ, ರಿಂದನಾ ಅರ್ಜಿ, ಮೇಲ್ಮನವಿ, ಸಿವಿಲ್ ಪ್ರಕರಣ, ಕ್ರಿಮಿನಲ್ ಪ್ರಕರಣ ಇತ್ಯಾದಿ) ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯಗಳಲ್ಲಿ ಸಲ್ಲಿಸಬೇಕಾದ ಕಂಡಿಕೆವಾರು ಉತ್ತರಗಳು, ಆಕ್ಷೇಪಣಾ ಹೇಳಿಕೆಗಳು, ತಕರಾರು ಅರ್ಜಿಗಳನ್ನು ಸಿದ್ಧಪಡಿಸುವುದು.
5. ನ್ಯಾಯಾಲಯ ಪ್ರಕರಣಗಳನ್ನು ಕಾಲಕಾಲಕ್ಕೆ ಹಿಂಬಾಲಿಸಿ, ತ್ವರಿತವಾಗಿ ಇತ್ಯರ್ಥಪಡಿಸುವುದು.
6. ನ್ಯಾಯಾಲಯ ಪ್ರಕರಣಗಳಲ್ಲಿ ಇಲಾಖೆಗೆ ಕಾನೂನು ಅಭಿಪ್ರಾಯ ನೀಡುವುದು.
7. ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳು ಮಾನ್ಯ ಉಚ್ಚ ನ್ಯಾಯಾಲಯ/ಕರ್ನಾಟಕ ಆಡಳಿತ ನ್ಯಾಯ ಮಂಡಳಿಗಳಲ್ಲಿ ದಾಖಲಿಸಿರುವ ಸೇವಾ ಪ್ರಕರಣಗಳಲ್ಲಿ ಇಲಾಖೆಯ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗುವುದು.
8. ಅಧೀನ ಕಛೇರಿಗಳಲ್ಲಿನ ನ್ಯಾಯಾಲಯ ಪ್ರಕರಣಗಳಲ್ಲಿ ಕಾನೂನು ಅಭಿಪ್ರಾಯ ನೀಡುವುದು.
9. ವಿದ್ಯಾರ್ಹತೆ, ಅನುಭವ ಮತ್ತು ವಯಸ್ಸಿನ ದೃಢೀಕರಣದೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ, ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-09 ಇವರಿಗೆ ದಿನಾಂಕ: 11.08.2023ರ ಸಾಯಂಕಾಲ 5.30 ಗಂಟೆಯೊಳಗೆ ಸಲ್ಲಿಸತಕ್ಕದ್ದು. ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. (ಅರ್ಜಿಯ ನಮೂನೆಯು https://swachhamevajayate.org ಜಾಲತಾಣದಲ್ಲಿ ಲಭ್ಯವಿರುತ್ತದೆ)

ಸಹಿ/– ಆಯುಕ್ತರು
ಗ್ರಾ.ಕು.ನೀ.&ನೈ. ಇಲಾಖೆ
ಬೆಂಗಳೂರು

DIPR/CP/BCPL/719/2023-24

ಪ್ರಜಾವಾಣಿ ಶನಿವಾರ, 29 ಜುಲೈ 2023

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಸೋಲೇ ಸನ್ಮಾನಕ್ಕೆ ಮೆಟ್ಟಿಲು



ಸೂಕ್ಷ್ಮ ಮನಸ್ಸು, ಅಂಜಿಕೆ ಮತ್ತು ಹಠದ ಸ್ವಭಾವದ ಮಕ್ಕಳು ಸಣ್ಣ ಸಣ್ಣ ವಿಚಾರಗಳಿಗಾಗಿ ಆತ್ಮಹತ್ಯೆಯ ಹಾದಿ ತುಳಿಯುತ್ತಿದ್ದಾರೆ. ಇಂಥವರಿಗೆ ಸಮಾಜವನ್ನು ಎದುರಿಸುವ ಪಾಠ ಕಲಿಸಬೇಕಿದೆ. ಜೀವನದ ಹಾದಿಯಲ್ಲಿ ಎದುರಾಗುವ ಅವಮಾನ, ಸೋಲು ಅಂತಿಮವಲ್ಲ. ಅವೆಲ್ಲ ಬದುಕು ಕೊಡುವ ದೊಡ್ಡ ಕಾಣ್ಕೆಗಳು ಎಂಬುದನ್ನು ಪದೇ ಪದೇ ಮನವರಿಕೆ ಮಾಡಬೇಕಿದೆ.

ನಡಹಳ್ಳಿ ವಸಂತ್

ಪರೀಕ್ಷೆಯಲ್ಲಿ ನಕಲು ಮಾಡುತ್ತಿದ್ದ ಎನ್ನುವ ಆರೋಪ ಎದುರಿಸಿದ ವಿದ್ಯಾರ್ಥಿಯೊಬ್ಬ ಕಾಲೇಜಿನ ಕಟ್ಟಡದಿಂದ ಬಿದ್ದು ಜೀವ ಕಳೆದುಕೊಂಡ. ಕೆಲಸ ಹಾಗೂ ವಿದ್ಯಾಭ್ಯಾಸದ ಒತ್ತಡ ನಿಭಾಯಿಸಲಾಗದೆ ವೈದ್ಯ ವಿದ್ಯಾರ್ಥಿನಿಯೊಬ್ಬಳು ಒತ್ತಾಯಪೂರ್ವಕವಾಗಿ ಉಸಿರು ನಿಲ್ಲಿಸಿದಳು. ಅಂಕಗಳು ಕಡಿಮೆ ಬಂದಿರುವುದಕ್ಕೆ, ಬೈದರು ಅಥವಾ ಕೇಳಿದ್ದು ಸಿಗಲಿಲ್ಲ ಎಂಬ ಕಾರಣಕ್ಕೆ ಮಕ್ಕಳು ಆತ್ಮಹತ್ಯೆ ಮಾಡಿಕೊಂಡ ವರದಿಗಳು ಆಗುತ್ತಲೇ ಇವೆ.

ಆತ್ಮಹತ್ಯೆ ಮನುಷ್ಯನ ಬಹುದೊಡ್ಡ ದುರ್ಬಲಗಳಿಗೆಯಲ್ಲಿ ಸಂಭವಿಸುವಂಥದ್ದು. ಒಂದು ಆತ್ಮಹತ್ಯೆಯ ಹಿಂದೆ ಹಲವಾರು ಕಾರಣಗಳಿದ್ದರೂ ಅದರತ್ತ ಸೆಳೆತ ಶುರುವಾಗುವುದು ಮಾತ್ರ ಮನಸ್ಸು ಸೂಕ್ಷ್ಮವಾಗಿದ್ದಾಗ.

ನೋಡಲು ಬಹಳ ದೃಢಮನಸ್ಸಿನವರಂತೆ, ಎಲ್ಲವನ್ನೂ ಎದುರಿಸುವವರಂತೆ ಕಾಣುವ ಮಕ್ಕಳು ಕೆಲವೊಮ್ಮೆ ಆತ್ಮಹತ್ಯೆಯ ದಾರಿ ಹಿಡಿಯುತ್ತಾರೆ. ಬಹುಸೂಕ್ಷ್ಮ ಮನಸ್ಸಿನ ಮಕ್ಕಳಲ್ಲಿ ಈ ಪ್ರವೃತ್ತಿ ತುಸು ಹೆಚ್ಚೇ ಇರುತ್ತದೆ.

ಆತ್ಮಹತ್ಯೆಗೆ ಕಾರಣಗಳು ಹಲವು. ಮನಸ್ಸು ಒಂದು ಓಘದಲ್ಲಿದ್ದು, ಅದು ಬದುಕಿನ ಎಲ್ಲ ಒತ್ತಡ, ಆತಂಕ, ದುಗುಡಗಳನ್ನು ಅರಗಿಸಿಕೊಂಡು ಅರಳುವುದಕ್ಕೆ ಬಿಡದಿರುವುದರಲ್ಲಿಯೇ ಸಮಸ್ಯೆ ಇದೆ ಎಂದು ಕಾಣುತ್ತದೆ. ಮನಸ್ಸು ವ್ಯಗ್ರಗೊಂಡು, ತಾ ಹೇಳಿದ್ದೇ ಆಗಬೇಕು ಎಂದು ಇಚ್ಛಿಸಿ, ಅದು ಈಡೇರದೆ ಇದ್ದಾಗ ಪ್ರಾಣ ಕಳೆದುಕೊಂಡ ಮಕ್ಕಳೂ ಇದ್ದಾರೆ. ಹಾಗಾಗಿ ಆತ್ಮಹತ್ಯೆಯನ್ನು ವಿಶ್ಲೇಷಿಸುವಾಗ ಇವೆಲ್ಲವನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಸಾಮಾಜಿಕ ಒತ್ತಡ

ಪರೀಕ್ಷೆ, ಅಂಕ, ಉತ್ತಮ ಸಂಬಳ, ಒಳ್ಳೆಯ ಹುದ್ದೆ, ವೃತ್ತಿ ಹಾಗೂ ಮದುವೆಯ ಯಶಸ್ಸು, ಮಕ್ಕಳ ಓದು ಹೀಗೆ ಇವೆಲ್ಲವೂ ಯಶಸ್ಸಿನ ಮಾನದಂಡಗಳಾಗುತ್ತಿದ್ದಂತೆ ಸಾಮಾಜಿಕ ಒತ್ತಡವೂ ಹೆಚ್ಚಿದೆ. ಅದರಲ್ಲಿಯೂ ಶಾಲೆ ಹಾಗೂ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ಸ್ಪರ್ಧಾ ಜಗತ್ತಿನಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ದೊಡ್ಡ ಹೋರಾಟ ನಡೆಸುತ್ತಿರುತ್ತಾರೆ. ಇವೆಲ್ಲವನ್ನು ಗಮನಿಸಿ, ಆಯಾ ಕಾಲಕ್ಕೆ ಮನಸ್ಸಿಗೆ ಸಾಂತ್ವನ ಹೇಳುವವರು ಇಲ್ಲದೇ ಹೋದರೆ ಮನಸ್ಸು ಮತ್ತಷ್ಟು ಕುಗ್ಗುತ್ತದೆ.

ಮಿದುಳಿನ ಸಮಗ್ರ ಬೆಳವಣಿಗೆಗೆ ಅಗತ್ಯವಾಗಿರುವ ದೈಹಿಕ ಆಟಗಳಿಗಾಗಿ ಮಕ್ಕಳಿಗೆ ಸಮಯ ಮತ್ತು ಅವಕಾಶಗಳಿಲ್ಲ. ಭಾವನಾತ್ಮಕ ಏರುಪೇರುಗಳನ್ನು ನಿಭಾಯಿಸಲು ಅನಿವಾರ್ಯವಾದ ಮನುಷ್ಯ ಸಂಪರ್ಕಕ್ಕಿಂತ ಮೊಬೈಲ್ ಕಂಪ್ಯೂಟರ್‌ಗಳೊಡನೆ ಮಕ್ಕಳ ಒಡನಾಟ ಹೆಚ್ಚಾಗಿದೆ. ಎಲ್ಲರನ್ನೂ ಮೆಚ್ಚಿಸುವ ಉದ್ದೇಶ ಮಾತ್ರ ಹೊಂದಿರುವ ಸಾಮಾಜಿಕ ಮಾಧ್ಯಮಗಳ ಬಳಕೆ ಮನುಷ್ಯ ಸಂಪರ್ಕದ ಭಾವನಾತ್ಮಕ ಹಸಿವನ್ನು ನೀಗಿಸುತ್ತಿಲ್ಲ. ಇವೆಲ್ಲವುಗಳಿಂದಾಗಿ ಮಕ್ಕಳ ಮಿದುಳಿನ ಸಮತೋಲನ ಬೆಳವಣಿಗೆ ಆಗುತ್ತಿಲ್ಲ ಎನ್ನುವುದು ನರವಿಜ್ಞಾನಿಗಳ ಅಭಿಪ್ರಾಯ.

ಪೋಷಕರ ಜವಾಬ್ದಾರಿ ಏನು?



1 ಎಲ್ಲಾ ವಯಸ್ಸಿನ ಮಕ್ಕಳ ಜೊತೆ ಆತ್ಮೀಯ ಬಾಂಧವ್ಯವನ್ನು ಇಟ್ಟುಕೊಳ್ಳುವುದು ಪೋಷಕರ ಮೊದಲ ಗುರಿಯಾಗಬೇಕು. 'ನಿನ್ನ ಅಂಕಗಳು ಕಡಿಮೆಯಾಗುವುದು ನಮ್ಮಿಬ್ಬರ ಪ್ರೀತಿಗೆ ಅಡ್ಡಿಯಾಗುವುದಿಲ್ಲ' ಎನ್ನುವ ಸಂದೇಶ ಮಕ್ಕಳಿಗೆ ತಲುಪಬೇಕು.

2 ತಮ್ಮ ಭಾವನಾತ್ಮಕ ಏರಿಳಿತಗಳನ್ನು ನಿಭಾಯಿಸಲಾಗದ ಪೋಷಕರು ಮಕ್ಕಳಿಗೆ ಕೆಟ್ಟ ಮಾದರಿಯನ್ನು ಒದಗಿಸುತ್ತಾರೆ. ಹಾಗಾಗಿ ಪೋಷಕರು ತಮ್ಮ ಆತಂಕ ಒತ್ತಡಗಳನ್ನು ನಿಭಾಯಿಸಲು ಕಲಿಯಬೇಕು. ಅಗತ್ಯವಿದ್ದರೆ ತಜ್ಞರ ಸಹಾಯ ಪಡೆಯಬೇಕು.

3 ಮಕ್ಕಳ ಸೋಲುಗಳನ್ನು ದೊಡ್ಡ ಅಪರಾಧವೆಂಬಂತೆ ಬಿಂಬಿಸಬಾರದು. ಅವರ ಸೋಲುಗಳಿಗೆ ಸಿಟ್ಟು ಉಪದೇಶ, ಹೋಲಿಕೆ ಮುಂತಾದವುಗಳಿಂದ ಪ್ರತಿಕ್ರಿಯೆ ತೋರಿಸುವುದು ಪೋಷಕರೇ ಆತಂಕಕ್ಕೆ ಒಳಗಾಗಿರುವ ಸೂಚನೆಗಳು. 'ಪ್ರಯತ್ನವನ್ನು ಮುಂದುವರೆಸು, ನಿನ್ನ ಬೆಂಬಲಕ್ಕೆ ನಾವಿದ್ದೇವೆ' ಎನ್ನುವ ಭರವಸೆ ಮಾತ್ರ ಅತ್ಯಗತ್ಯ.

4 ಶಾಲಾ ಪರಿಸರ, ಪರೀಕ್ಷೆಗಳು ಸ್ಪರ್ಧಾತ್ಮಕ ವಾತಾವರಣ ಮುಂತಾದವು ಮಕ್ಕಳ ಮೇಲೆ ಎಂತಹ ಪ್ರಭಾವ ಬೀರುತ್ತಿವೆ ಎನ್ನುವುದು ಪೋಷಕರಿಗೆ ತಿಳಿದಿರಬೇಕು. ಮಕ್ಕಳ ಮಾತು ವರ್ತನೆ, ಆಹಾರದ ಅಭ್ಯಾಸಗಳು, ನಿದ್ದೆ, ಸ್ನೇಹಿತರ ಒಡನಾಟ, ಮೊಬೈಲ್ ಬಳಕೆ ಇವೆಲ್ಲವುಗಳಲ್ಲಿ ಮಕ್ಕಳ ಮಾನಸಿಕ ಸ್ಥಿತಿಯ ಸೂಚನೆಯಿರುತ್ತದೆ. ಇವೆಲ್ಲವುಗಳು ಸಹಜವಾಗಿಲ್ಲ ಎನ್ನಿಸಿದಾಗ ತಜ್ಞರ ಸಹಾಯ ಪಡೆಯಬೇಕು.

5 ಎಲ್ಲಕ್ಕಿಂತ ಪ್ರಮುಖವಾಗಿ ಪೋಷಕರು ತಮ್ಮದೇ ಮೊಬೈಲ್ ಮತ್ತು ಸಾಮಾಜಿಕ ಮಾಧ್ಯಮಗಳ ಬಳಕೆಯ ಕುರಿತು ಎಚ್ಚರವಹಿಸಬೇಕು. ಪೋಷಕರು ಒದಗಿಸುವ ಕೆಟ್ಟ ಮಾದರಿಗಳು ಅವರು ಕೊಡುವ ಸೌಲಭ್ಯಗಳು, ಶಿಸ್ತಿನ ತರಬೇತಿ, ಬುದ್ಧಿವಾದಗಳಿಂತ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ.

ಮಕ್ಕಳ ಪ್ರಾಥಮಿಕ ಅಗತ್ಯಗಳೇನು?

ಮಗು ಜನಿಸುವಾಗ ಮಿದುಳಿನ ಬೆಳವಣಿಗೆ ಪ್ರಾಥಮಿಕ ಹಂತದಲ್ಲಿದ್ದು ಇದರ ಸಂಪೂರ್ಣ ಬೆಳವಣಿಗೆಯಾಗುವುದು ಸುಮಾರು 25ನೆಯ ವಯಸ್ಸಿಗೆ ಎನ್ನುವುದು ವೈಜ್ಞಾನಿಕವಾಗಿ ಸಿದ್ಧವಾಗಿರುವ ಸತ್ಯ.

ಕೇವಲ ಮಿದುಳಿನ ಅಂಗಾಂಗಗಳ ಬೆಳವಣಿಗೆಯಾದರೆ ಮಿದುಳು ಸಮರ್ಥವಾಗಿ ಕಾರ್ಯನಿರ್ವಹಿಸುವುದಿಲ್ಲ. ಮಿದುಳಿನ ಸಮರ್ಥವಾದ ಬಳಕೆಗೆ ನ್ಯೂರಾನ್‌ಗಳ (ಮಿದುಳಿನ ಜೀವಕೋಶಗಳು) ಸಂಪರ್ಕಜಾಲ ಸೃಷ್ಟಿಯಾಗುವ ಅಗತ್ಯವಿದೆ. ಇಂತಹ ಎಲ್ಲಾ ಸಂಪರ್ಕಜಾಲಗಳ ಸರಿಯಾದ ಬೆಳವಣಿಗೆ ಬಾಲ್ಯದ 8 ರಿಂದ 10 ವರ್ಷಗಳಲ್ಲಿ ಕೌಟುಂಬಿಕ ಪರಿಸರದಲ್ಲಿ ದೊರೆಯುವ ಅನುಭಗಳ ಮೇಲೆ ಆಗುತ್ತದೆ. ಕೌಟುಂಬಿಕ ಪರಿಸರದಲ್ಲಿ ದೊರೆಯುವ ಅನುಭವದ ಆಧಾರದ ಮೇಲೆ ಮಕ್ಕಳು ಜಗತ್ತನ್ನು ನೋಡುವ ದೃಷ್ಟಿಕೋನ, ಸಂಬಂಧಗಳನ್ನು ರೂಪಿಸಿಕೊಳ್ಳುವ ಕೌಶಲ, ಒತ್ತಡವನ್ನು ನಿಭಾಯಿಸುವ ಕ್ಷಮತೆಯನ್ನು ಪಡೆದುಕೊಳ್ಳುತ್ತಾರೆ.

ಬಾಲ್ಯದಲ್ಲಿ ಸಂಪರ್ಕಜಾಲಗಳ ಬೆಳವಣಿಗೆಗೆ ಅಗತ್ಯವಿರುವ ವಾತಾವರಣ ದೊರಕದಿದ್ದರೆ ಅದರ ದುಷ್ಪರಿಣಾಮಗಳು ಜೀವನಪರ್ಯಂತ ಉಳಿಯುವ ಸಾಧ್ಯತೆಗಳಿರುತ್ತವೆ. ಆತ್ಮಹತ್ಯೆಗೆ ಶರಣಾಗುವ ಮಕ್ಕಳಲ್ಲಿ ಒತ್ತಡವನ್ನು ನಿಭಾಯಿಸುವ, ಸೋಲನ್ನು ಸಹಿಸಿಕೊಂಡು ಮುನ್ನಡೆಯುವ ಕ್ಷಮತೆಯ ಕೊರತೆಯಿರುತ್ತದೆ.

ಪೋಷಕರು ಮಾತ್ರ ದೋಷಿಗಳಲ್ಲ

ಮಕ್ಕಳ ಬೆಳವಣಿಗೆಗೆ ಸೂಕ್ತ ಕೌಟುಂಬಿಕ ಪರಿಸರ ದೊರಕದಿರುವುದಕ್ಕೆ ಪೋಷಕರು ಮಾತ್ರ ದೋಷಿಗಳಲ್ಲ. ಕಳೆದ 50-60 ವರ್ಷಗಳಲ್ಲಿ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಗಳ ವೇಗವನ್ನು ನಿಭಾಯಿಸಲು ಅವರೂ ಕಷ್ಟಪಡುತ್ತಿದ್ದಾರೆ.


ದುಡಿಯುವ, ಕುಟುಂಬವನ್ನು ನಿಭಾಯಿಸುವ ಒತ್ತಡಗಳಲ್ಲಿ ಇರುವ ಪೋಷಕರಿಗೆ ಮಕ್ಕಳಿಗೆ ಅಗತ್ಯವಾದ ಸಮಯ, ಮಾನಸಿಕ ಬೆಂಬಲ ಕೊಡಲಾಗುತ್ತಿಲ್ಲ. ಅವರಿಗೆ ಸೂಕ್ತ ಮಾರ್ಗದರ್ಶನವೂ ದೊರಕುತ್ತಿಲ್ಲ. ಶೈಕ್ಷಣಿಕ ವ್ಯವಸ್ಥೆ ಅಂಕಗಳು, ರ‍್ಯಾಂಕ್‌ಗಳು, ಉನ್ನತ ಉದ್ಯೋಗಗಳು ಮುಂತಾದ ಉದ್ದೇಶಗಳಿಗಾಗಿ ಮಾತ್ರ ಮೀಸಲಾಗಿದೆ. ಇವೆಲ್ಲದರ ಪರಿಣಾಮವಾಗಿ ಮಕ್ಕಳು ಬಲಿಪಶುಗಳಾಗುತ್ತಿದ್ದಾರೆ. ಆದರೆ, ಇದೆಲ್ಲದಕ್ಕೂ ನಮ್ಮೊಳಗೆ ಪರಿಹಾರವಿದೆ, ಅದನ್ನು ಹುಡುಕುವ ಪ್ರಯತ್ನ ಮಾಡಬೇಕಿದೆ.

(ಲೇಖಕರು ಶಿವಮೊಗ್ಗದಲ್ಲಿ ಮನೋಚಿಕಿತ್ಸಕರು)

ಇದಕ್ಕೆಲ್ಲ ಪರಿಹಾರ ಏನು ?

ಅಂಜುಬುರುಕತನ ಇರುವ, ಬಹುಬೇಗ ಅವಮಾನಕ್ಕೆ ಒಳಗಾಗುವ ಸೂಕ್ಷ್ಮ ಮಕ್ಕಳು ಆತ್ಮಹತ್ಯೆಯಂತಹ ಕೃತ್ಯದತ್ತ ಯೋಚಿಸುತ್ತಾರೆ. ಒತ್ತಡ ತಡೆಯುವ ಶಕ್ತಿಯಿಲ್ಲದ ಹಾಗೂ ಹಠ ಪವೃತ್ತಿಯಿರುವ, ಹೇಗಾದರೂ ಪೋಷಕರ ಗಮನ ಸೆಳೆಯಬೇಕೆಂದು ಹಪಾಹಪಿಸುವ ಮಕ್ಕಳು ಇಂಥ 'ನಕಾರಾತ್ಮಕ' ಚಿಂತನೆ ಮಾಡುತ್ತಾರೆ. ಹಾಗಾದರೆ ಇಂಥ ಸಮಸ್ಯೆಗಳಿಗೆ ಪರಿಹಾರವೇನು? ಇಲ್ಲಿವೆ ಒಂದಿಷ್ಟು ಪರಿಹಾರ, ಗಮನಿಸಿ.

- ಸೂಕ್ಷ್ಮ ಮನಸ್ಸು, ಅಂಜಿಕೆ ಮತ್ತು ಹಠದ ಪ್ರವೃತ್ತಿಯಿರುವ ಮಕ್ಕಳನ್ನು ನಿಭಾಯಿಸಿ, ಅವರ ಆಲೋಚನೆಯನ್ನು ಸರಿಪಡಿಸಬೇಕು. ಇದರಲ್ಲಿ ಪೋಷಕರಷ್ಟೆ ಶಾಲೆ ಹಾಗೂ ಕಾಲೇಜು ಪ್ರಾಧ್ಯಾಪಕರು ಹಾಗೂ ಸ್ನೇಹಿತರ ಪಾತ್ರ ದೊಡ್ಡದಿದೆ. ತರಗತಿ, ಸಿಲಬಸ್ ಮುಗಿಸುವ ಧಾವಂತದ ನಡುವೆಯೂ ವಿದ್ಯಾರ್ಥಿಗಳಿಗೆ ಸ್ವಲ್ಪ ಸಮಯ ಮೀಸಲಿಡಿ. ಸ್ನೇಹಿತರ ವಲಯದಲ್ಲಿ ಇಂಥ ಮನಸ್ಥಿತಿಯವರು ಇದ್ದರೆ, ಅವರನ್ನು ಆ ಸಮಸ್ಯೆಯ ಸುಳಿಯಿಂದ ಹೊರಗೆ ತರುವುದು ಹೇಗೆ ಎಂದು ಚಿಂತಿಸಿ.
- ಆತ್ಮಹತ್ಯೆ ಆ ಕ್ಷಣಕ್ಕೆ ತೆಗೆದುಕೊಂಡ ನಿರ್ಧಾರವಾಗಿದ್ದರೂ ಈ ಮೊದಲು 'ಸತ್ತು ಹೋಗಿಬಿಡಬೇಕು' ಎಂದೊ, 'ಸಾಯಬೇಕು' ಎಂದೊ ಯಾರ ಬಳಿಯಾದರೂ ಮಕ್ಕಳು ಹೇಳಿಕೊಂಡಿರುತ್ತಾರೆ. ಪದೇ ಪದೇ ಸಾಯುತ್ತೇನೆ ಎಂದು ಹೆದರಿಸುವ ಮಕ್ಕಳಿರುತ್ತಾರೆ. ಇವೆಲ್ಲ ಸುಳ್ಳು ನೆಪ ಎಂದು ನಿರ್ಲಕ್ಷ್ಯ ಮಾಡಬೇಡಿ.
- ಮನೆಯಲ್ಲಿ ಯಾವುದೇ ಬಗೆಯ ಸ್ವಾತಂತ್ರ್ಯವಿಲ್ಲದ, ನಾಲ್ಕಾರು ಜನರೊಂದಿಗೆ ಬೆರೆಯದ ಅಂಜುಬುರುಕತನ ಇರುವ ಮಕ್ಕಳಲ್ಲಿ ಮೊದಲಿಗೆ ವಿಶ್ವಾಸ ತುಂಬಿ. ಸ್ವಪ್ರೀತಿಯನ್ನು ಬೆಳೆಸಿಕೊಳ್ಳುವಲ್ಲಿ ನೆರವಾಗಿ. ಮಕ್ಕಳು ಎಂಥ ಹಠಮಾರಿಗಳೇ ಆಗಿರಲಿ; ಅಂಜುಬುರುಕರೇ ಆಗಿರಲಿ. ಅವರ ಮೃದು ಮನಸ್ಸಿಗೆ ಬೇಕಿರುವುದು ಪ್ರೀತಿಯೆಂಬ ದಿವ್ಯೌಷಧ. ಎಂಥ ಪರಿಸ್ಥಿತಿಯಲ್ಲಿಯೂ ಈ ಔಷಧ ಕಡಿಮೆಯಾಗದಂತೆ ನೋಡಿಕೊಳ್ಳಿ.
- 'ಊಟ ಮಾಡದಿದ್ದರೆ ಹೊರಗೆ ಸುತ್ತಾಡಲು ಕರೆದುಕೊಂಡು ಹೋಗುವುದಿಲ್ಲ. ಓದದಿದ್ದರೆ ಈ ಸಲ ಪಿಕ್ನಿಕ್ ಕ್ಯಾನ್ಸಲ್' – ಇಂಥ ಬ್ಲ್ಯಾಕ್ ಮೇಲ್ ತಂತ್ರವನ್ನು ಬಿಟ್ಟು ಬಿಡಿ. ಮಕ್ಕಳು ದೊಡ್ಡವರಾದ ಮೇಲೆ ಇದೇ ಬ್ಲ್ಯಾಕ್ ಮೇಲ್ ತಂತ್ರವನ್ನು ಪ್ರಯೋಗಿಸುವ ಸಾಧ್ಯತೆ ಇರುತ್ತದೆ.
- ಅಪ್ಪ ಅಮ್ಮಂದಿರು ಗತಕಾಲದ ಹಳಹಳಿಕೆ ಮಾಡುವಾಗ ಚೆನ್ನಾಗಿರುವುದನ್ನು ಮಾತ್ರ ಹೇಳಿರುತ್ತಾರೆ. 'ನಮ್ಮ ಕಾಲದಲ್ಲಿ ಹೀಗೆ ಇರಲಿಲ್ಲ' ಎನ್ನುತ್ತಿರುತ್ತಾರೆ. ಅದರ ಜತೆಗೆ 'ಎಷ್ಟೆಲ್ಲ ಅವಮಾನ ಅನುಭವಿಸಿದೆ, ಎಷ್ಟೆಲ್ಲ ನೋವು ಅನುಭವಿಸಿದೆ'. ಏನೆಲ್ಲ ತಪ್ಪು ಮಾಡಿದೆ' ಅವೆಲ್ಲವೂ ಹೇಗೆ ಪಾಠವಾಯಿತು ಮತ್ತು ಬದುಕು ಕಟ್ಟಿಕೊಳ್ಳಲು ನೆರವಾಯಿತು ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡಿ. ತಪ್ಪಾಗುವುದು ಸಹಜ. ಎಡವುತ್ತಲೆ ಕಲಿಯುವುದೇ ಬದುಕು. ಅವಮಾನ, ಸೋಲು ಅಂತಿಮವಲ್ಲ ಅವೆಲ್ಲ ಬದುಕು ನೀಡುವ ದೊಡ್ಡ ಕಾಣ್ಕೆಗಳು ಎಂಬುದನ್ನು ತಿಳಿಸಿ.



ಗರ್ಭಪಾತ ಮಾತ್ರೆ ಎಚ್ಚರಿಕೆ ಅಗತ್ಯ

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನಗೆ 28 ವರ್ಷ. ಎರಡು ತಿಂಗಳು ಗರ್ಭಿಣಿಯಾದಾಗ ಈಗಲೇ ಮಗು ಬೇಡವೆಂದು ಮಾತ್ರೆ ತೆಗೆದುಕೊಂಡಿದ್ದೆ. ಆದರೆ ಮಾತ್ರೆ ಏನು ಕೆಲಸ ಮಾಡಿಲ್ಲ. ಈಗ ಸ್ಕ್ಯಾನಿಂಗ್ ಮಾಡಿಸಿದೆ. ನಾಲ್ಕು ತಿಂಗಳಾಗಿದೆ ಎಂದು ಹೇಳುತ್ತಿದ್ದಾರೆ. ಸ್ಕ್ಯಾನಿಂಗ್ ರಿಪೋರ್ಟ್ ಪ್ರಕಾರ ಏನು ತೊಂದರೆ ಇಲ್ಲ, ಮಗು ಚೆನ್ನಾಗಿದೆ ಎಂದು ಹೇಳಿದ್ದಾರೆ. ಆದರೆ, 5 ತಿಂಗಳ ನಂತರ ಏನು ಎಂದು ಹೇಳೋಕೆ ಆಗಲ್ಲ ಎಂದೂ ಹೇಳುತ್ತಿದ್ದಾರೆ. ಮಗುವಿಗೆ ಏನು ತೊಂದರೆ ಆಗುವುದಿಲ್ಲವೇ, ತಿಳಿಸಿ ?**

ನೇತ್ರಾವತಿ, ಊರು ತಿಳಿಸಿಲ್ಲ.

ನೇತ್ರಾ ಅವರೇ, ನಿಮಗೀಗಾಗಲೇ 28ವರ್ಷಗಳು ಎಂದು ತಿಳಿಸಿದ್ದೀರಿ. ಆದರೆ, ಮದುವೆಯಾಗಿ ಎಷ್ಟು ವರ್ಷಗಳಾಯಿತು? ಮೊದಲಬಾರಿಗೆ ಗರ್ಭಿಣಿಯಾಗುತ್ತಿದ್ದೀರಾ? ಈ ಮಾಹಿತಿ ತಿಳಿಸಿಲ್ಲ.

ಮೊದಲನೆಯದಾಗಿ ನೀವು ಗರ್ಭಧರಿಸುವ ಮೊದಲೇ ಮುಂಜಾಗ್ರತೆಯಾಗಿ ಯಾವುದಾದರೂ ಸಂತಾನ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಬಹುದಿತ್ತು. ಯಾಕೆಂದರೆ ಗರ್ಭಧಾರಣೆ ಒಂದು ಅಪೇಕ್ಷಿತ, ಯೋಜಿತ ಘಟನೆಯಾಗಿರಬೇಕೇ ಹೊರತು ಅನಪೇಕ್ಷಿತ ಅವಘಡವಾಗಬಾರದು.

ಮೊದಲ ಬಾರಿಗೆ ಗರ್ಭಧರಿಸುವಾಗ ನೀವಾಗಿ ನೀವೇ ಗರ್ಭಪಾತ ಮಾಡಿಸಿಕೊಂಡರೆ ಅಥವಾ ಗರ್ಭಪಾತ ಆಗುವ ಮಾತ್ರೆ ಸೇವಿಸಿದರೆ ಮುಂದೆ ತೊಡಕಾಗಬಹುದು. ಇಲ್ಲಿ, ನೀವು ಅಬಾರ್ಷನ್‌ಗಾಗಿ ಯಾವ ತರಹದ ಮಾತ್ರೆ ಬಳಸಿದ್ದೀರಿ ಎಂಬುದನ್ನು ತಿಳಿಸಿಲ್ಲ. ಕೆಲವರು ವೈದ್ಯರ ಸಲಹೆ ಇಲ್ಲದೇ ಅಬಾರ್ಷನ್ ಮಾತ್ರೆಗಳನ್ನು ನೇರವಾಗಿ ಔಷಧಿ ಅಂಗಡಿಯಿಂದ ತೆಗೆದುಕೊಳ್ಳುತ್ತಾರೆ. ಅದು ತಪ್ಪು. ಅಬಾರ್ಷನ್‌ಗಾಗಿ ಮಾತ್ರೆಗಳನ್ನು ಈ ರೀತಿ ತೆಗೆದುಕೊಂಡಾಗ ಒಮ್ಮೊಮ್ಮೆ ಗರ್ಭನಾಳದಲ್ಲೇನಾದರೂ ಗರ್ಭಹೊರೆದಿದ್ದರೆ (ಎಕ್ಟೋಪಿಕ್ ಗರ್ಭಧಾರಣೆ) ಒಳಗೆ ಗರ್ಭನಾಳ ಒಡೆದು ಹೋಗಿ ಪ್ರಾಣಾಂತಿಕ ವಾಗಬಹುದು.

- **ನನ್ನ ವಯಸ್ಸು 28. ನನಗೆ 'ಸಿ' ಸೆಕ್ಷನ್ ಹೆರಿಗೆಯಾಗಿತ್ತು. ಮಗುವಿನ ತೂಕ ಕಡಿಮೆಯಾಗಿ 15ನೇ ದಿನಕ್ಕೆ ಮಗು ತೀರಿ ಹೋಯಿತು. ಇನ್ನು ಯಾವಾಗ ನಾನು ಗರ್ಭ ಧರಿಸಬಹುದು? ಒಂದು ವರ್ಷದೊಳಗೆ ಗರ್ಭ ಧರಿಸಿದರೆ ತೊಂದರೆ ಆಗುತ್ತದಾ?**

ಹೆಸರು, ಊರು ತಿಳಿಸಿಲ್ಲ

ನೀವು ಮಗು ಕಳೆದುಕೊಂಡಿದ್ದಕ್ಕೆ ವಿಷಾದವಿದೆ. ನಿಮ್ಮ ಮಗು ಯಾವ ಕಾರಣಕ್ಕೆ ಮರಣಹೊಂದಿತು ಎಂದು ನೀವು ತಜ್ಞ ವೈದ್ಯರನ್ನು ವಿಚಾರಿಸಿದ್ದೀರಾ? ಸಂಬಂಧದಲ್ಲಿ ವಿವಾಹವಾಗಿದೆಯಾ? ಇದೆಲ್ಲಾ ಕಾರಣ ನೀವು ಹೇಳಿಲ್ಲ. ಇರಲಿ; ಸಿಸೇರಿಯನ್ ಗಾಯ ಸರಿಯಾಗಿ ಮಾಯಲು ಒಂದು ವರ್ಷ ಬೇಕು. ಮೊದಲ ಮಗು ಇದ್ದರೆ ಎರಡು ಮಕ್ಕಳ ನಡುವೆ ಅಂತರ ಕನಿಷ್ಠ ಎರಡರಿಂದ ಮೂರು ವರ್ಷ ಇರಬೇಕು. ಆ ಮಗುವಿಗೆ ಎದೆಹಾಲುಣಿಸಿ ಸರಿಯಾದ ಕಾಳಜಿ ಕೊಡಲಿಕ್ಕಾಗಿ ಈ ನಿಯಮವಷ್ಟೆ. ಆದರೆ, ಈಗ ಮಗು ಇಲ್ಲದಿರುವುದರಿಂದ ಒಂದು ವರ್ಷದ ಅಂತರದಲ್ಲಿ ಇನ್ನೊಂದು ಮಗು ಪಡೆಯಲು ಪ್ರಯತ್ನಿಸಿ. ಗರ್ಭಧರಿಸುವ ಮೊದಲು ನಿಮ್ಮ ದೇಹದ ತೂಕ ಹೆಚ್ಚಿದ್ದರೆ ನಿರ್ವಹಣೆ ಮಾಡಿಕೊಳ್ಳಿ. ರಕ್ತಹೀನತೆಯಿದ್ದರೆ ಸರಿಪಡಿಸಿಕೊಳ್ಳಿ. ನಿಯಮಿತವಾಗಿ ವೈದ್ಯರ ಸಂಪರ್ಕದಲ್ಲಿರಿ.

ವೈದ್ಯರಾದರೆ, ಮೊದಲು ಗರ್ಭಧಾರಣೆಯು ಗರ್ಭಕೋಶದೊಳಗೆ ಆಗಿದಿಯೋ ಇಲ್ಲವೋ ಎಂದು ಸ್ಕ್ಯಾನಿಂಗ್ ಮಾಡಿ ನೋಡಿ, ನಂತರ ಗರ್ಭಪಾತದ ಮಾತ್ರೆ ಕೊಡುತ್ತಾರೆ. ಎಷ್ಟೋ ಬಾರಿ ಅಂಥವರಲ್ಲಿ ರಕ್ತಸ್ರಾವವೂ ಆಗಿರುತ್ತದೆ. ಆಗ ಅವರು ತಮಗೆ ಅಬಾರ್ಷನ್ ಆಗಿದೆ ಎಂದು ನಿರಾಳವಾಗುವಂತಿಲ್ಲ. ಇಂಥವರಲ್ಲಿ ಒಮ್ಮೊಮ್ಮೆ ಗರ್ಭಧಾರಣೆ ಮುಂದುವರಿದಿರುವ ಸಾಧ್ಯತೆ ಇರುತ್ತದೆ. ಹಾಗಾಗಿ, ಗರ್ಭಪಾತದ ಮಾತ್ರೆ ತೆಗೆದುಕೊಂಡಾಗ 15 ದಿನದೊಳಗೆ ಮತ್ತೆ ವೈದ್ಯರನ್ನು ಭೇಟಿ ಮಾಡಿ. ಸ್ಕ್ಯಾನಿಂಗ್ ಮಾಡಿಸಿ ಸಂಪೂರ್ಣ ಗರ್ಭಪಾತ ಆಗಿರುವುದನ್ನು ಖಚಿತಪಡಿಸಿಕೊಳ್ಳುವುದು ಸೂಕ್ತ ಹಾಗೂ ಅವಶ್ಯಕ.

ಗಮನಿಸಿ; ಅಬಾರ್ಷನ್ ಮಾತ್ರೆ ತೆಗೆದುಕೊಂಡಾಗ ಶೇ 97ರಷ್ಟು ಜನರಿಗೆ 6 ರಿಂದ 8 ವಾರದೊಳಗಿನ ಗರ್ಭದ ಅವಧಿಯಾಗಿದ್ದರೆ ಸಹಜವಾಗಿ 48 ರಿಂದ 72 ತಾಸಿನೊಳಗೆ ಗರ್ಭಪಾತವಾಗುತ್ತದೆ. ನೀವು ಮಾತ್ರೆ ತೆಗೆದುಕೊಂಡರೂ (ಯಾವ ಮಾತ್ರೆ ಎಂದು ತಿಳಿಸಿಲ್ಲ) ಗರ್ಭಪಾತವಾಗದಿದ್ದಾಗ, ವೈದ್ಯರನ್ನು ಪುನಃ ಕಾಣಬೇಕಿತ್ತು. ಆದರೆ ತಡವಾಗಿ ವೈದ್ಯರಲ್ಲಿ ಹೋಗಿದ್ದೀರಿ. ನಿಮಗೀಗ 4 ತಿಂಗಳಾಗಿದೆ. ಈಗ ನಿಮಗೆ ಹಾಗೂ ನಿಮ್ಮ ಮಗುವಿಗೆ ಏನಾದರೂ ಜನ್ಮಜಾತ ವೈಕಲ್ಯತೆಯಾಗುತ್ತದೆಯೋ ಎಂಬ ಆತಂಕವಿದೆ ಅಲ್ಲವೇ?

ನೋಡಿ, ಹಲವು ಅಧ್ಯಯನಗಳ ಪ್ರಕಾರ ಮಾತ್ರೆ ತೆಗೆದುಕೊಳ್ಳದೇ ಜನಿಸುವ ಶೇ 2 ರಿಂದ 3 ರಷ್ಟು ಮಕ್ಕಳಲ್ಲಿ ನ್ಯೂನತೆ ಆಗಬಹುದು. ಇಂಥ ಮಾತ್ರೆಗಳಿಂದ ಅಂಥ ನ್ಯೂನತೆಯ ಸಂಭವನೀಯತೆ ಪ್ರಮಾಣ ಶೇ 1ರಿಂದ ಶೇ 2 ರಷ್ಟು ಹೆಚ್ಚಾಗಬಹುದು. ನನ್ನ ಮೂರು ದಶಕಗಳ ವೈದ್ಯಕೀಯ ವೃತ್ತಿಯ ಅನುಭವದಲ್ಲಿ ಇಂಥ ಸಾಕಷ್ಟು ಪ್ರಕರಣಗಳಾಗಿವೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಹುಟ್ಟುವ ಮಗುವಿಗೆ ತೊಂದರೆಗಳಾಗಿಲ್ಲ. ಗರ್ಭಿಣಿ ಸೇವಿಸುವ ಔಷಧಗಳು ಭ್ರೂಣದ ಮೇಲೆ ಬೀರುವ ದುಷ್ಪರಿಣಾಮಗಳು, ಭ್ರೂಣದ ಬೆಳವಣಿಗೆ ಯಾವ ಹಂತದಲ್ಲಿದೆ? ಔಷಧ ಯಾವರೀತಿಯದು? ಅದರ ಸಾಮರ್ಥ್ಯ ಹಾಗೂ ಸೇವಿಸುವ ಅವಧಿ ಜೊತೆಗೆ ತಾಯಿಯ ವಂಶವಾಹಿಯ ಗುಣಮಟ್ಟ ಎಲ್ಲವನ್ನೂ ಅವಲಂಬಿಸಿರುತ್ತದೆ.

ಗರ್ಭಕಟ್ಟಿ ಮೊದಲ 20 ದಿನಗಳಲ್ಲಿ ಮಾತ್ರೆ ಸೇವಿಸಿದಾಗ ಹೆಚ್ಚಿನ ಸಂದರ್ಭಗಳಲ್ಲಿ ಹುಟ್ಟುವಿನ ಮಗುವಿನಲ್ಲಿ ವೈಕಲ್ಯಗಳಾಗುವುದಿಲ್ಲ. ಆದರೆ ಗರ್ಭಧರಿಸಿ 3 ರಿಂದ 8 ವಾರದೊಳಗೆ ಮಾತ್ರೆ ಸೇವಿಸಿದ್ದರೆ ಭ್ರೂಣದ ಅವಯವಗಳು ಬೆಳೆಯುವ ಹಂತದಲ್ಲಿ ವೈಕಲ್ಯಗಳುಂಟಾಗುವ ಸಂಭವ ಹೆಚ್ಚು. ಗರ್ಭಕಟ್ಟಿ ಮೂರು ತಿಂಗಳಾದ ಮೇಲೆ ಅಂಗಾಂಗಗಳ ಬೆಳವಣಿಗೆ ಪೂರ್ಣವಾಗಿರುವಾಗ ಜನ್ಮದತ್ತ ವೈಕಲ್ಯಗಳು ಆಗದೇ ಇದ್ದರೂ ಹುಟ್ಟುವ ಮಗುವಿನ ಅಂಗಗಳ ಬೆಳವಣಿಗೆ ಹಾಗೂ ಕಾರ್ಯಗಳಲ್ಲಿ ಏರುಪೇರಾಗಬಹುದು. ಹಾಗಾಗಿ ಗರ್ಭಧರಿಸಿರುವಾಗ ಮಾತ್ರೆಗಳ ಸೇವನೆಯ ಬಗ್ಗೆ ಎಚ್ಚರವಹಿಸಿ. ನೀವು ಇನ್ನೊಮ್ಮೆ 5 ತಿಂಗಳಿಗೆ ವಿವರವಾದ ಭ್ರೂಣದ ಸ್ಕ್ಯಾನಿಂಗ್ ಮಾಡಿಸಿ. ನಿಮಗೆ ಒಳ್ಳೆಯದಾಗಲಿ. ಆರೋಗ್ಯವಂತ ಮಗು ಜನಿಸಲಿ.

- **ನನಗೆ 30 ವರ್ಷಗಳು. ಪತ್ನಿಗೆ 22 ವರ್ಷಗಳು. ನಾವು ಮದುವೆ ಆಗಿ 7 ತಿಂಗಳಾಗಿದೆ. ಇನ್ನೂ ಮಕ್ಕಳಾಗಿಲ್ಲ. ನನ್ನ ಪತ್ನಿ ದಪ್ಪ ಇದ್ದಾರೆ. ಪ್ರತಿ ತಿಂಗಳು ಸ್ವಲ್ಪ ತಡವಾಗಿ ಮುಟ್ಟಾಗುತ್ತಾರೆ. ಮಗು ಪಡೆಯುವ ಮಾರ್ಗ ತಿಳಿಸಿ.**

ಹೆಸರು, ಊರು ತಿಳಿಸಿಲ್ಲ

ಉತ್ತರ: ನಿಮಗೆ ಮಕ್ಕಳಾಗುವ ಚಿಕಿತ್ಸೆ ಪಡೆಯಲು ವೈದ್ಯರನ್ನು ಕಾಣಲು ಇನ್ನೂ ಎರಡು ಮೂರು ತಿಂಗಳು ಕಾಯಬಹುದು. ಅಷ್ಟರಲ್ಲಿ ನೀವು ನಿಮ್ಮ ಮಡದಿಗೆ ತೂಕ ಇಳಿಸಿಕೊಳ್ಳಲು ಉತ್ತೇಜಿಸಿ.

ಎಷ್ಟೊ ಬಾರಿ ಕೇವಲ ಶೇ 5 ರಿಂದ ಶೇ 10ರಷ್ಟು ತೂಕ ಕಡಿಮೆ ಮಾಡಿಕೊಂಡಾಗಲೂ ಮಹಿಳೆಯರಲ್ಲಿ ಅಂಡಾಣು ಉತ್ಪಾದನೆಯ ಪ್ರಕ್ರಿಯೆ ಉತ್ತಮಗೊಂಡು ಸಹಜ ಗರ್ಭಧಾರಣೆಯಾಗುತ್ತದೆ. ಆದ್ದರಿಂದ ಗರ್ಭಧಾರಣೆಗೂ ಮೊದಲು ತೂಕ ನಿರ್ವಹಣೆ ಮಾಡಿಕೊಂಡು ನಿತ್ಯ ಐದು ಮಿ.ಗ್ರಾಂ. ಫೋಲಿಕ್ ಆಸಿಡ್ ಮಾತ್ರೆಯನ್ನು ತೆಗೆದುಕೊಳ್ಳುವುದು ಒಳ್ಳೆಯದು. ಇದರಿಂದ ಮಗುವಿನಲ್ಲಿ ಕೆಲವು ನರವ್ಯೂಹದ ನ್ಯೂನತೆಗಳು ಉಂಟಾಗುವುದನ್ನು ತಡೆಯಬಹುದು.

ಸ್ಪಂದನ.. ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಅಲಲೆ ಕಳಲೆ ರುಚಿ!



ಸಂಗ್ರಹ ಚಿತ್ರ

ಕರಾವಳಿ, ಮಲೆನಾಡು ಭಾಗಗಳಲ್ಲಿ ಮಳೆಗಾಲದಲ್ಲಿ ಕಳಲೆಯ(ಎಳೆಬಿದಿರು) ಖಾದ್ಯಗಳದ್ದೇ ಸುದ್ದಿ. ಇದರಿಂದ ವೈವಿಧ್ಯಮಯ ಖಾದ್ಯಗಳನ್ನು ತಯಾರಿಸುತ್ತಾರೆ. ಅದರಲ್ಲಿ ಕೆಲವು ಖಾದ್ಯಗಳ ರೆಸಿಪಿಗಳನ್ನು ಪವಿತ್ರಾ ಭಟ್ ಇಲ್ಲಿ ಪರಿಚಯಿಸಿದ್ದಾರೆ.

ನಳಪಾಕ



ಬೋಂಡಾ

ಬೇಕಾಗುವ ಸಾಮಗ್ರಿ

ಸಣ್ಣ ತುಂಡುಗಳಾಗಿ ಕತ್ತರಿಸಿದ ಕಳಲೆ- 2 ಕಪ್, ಕಡಲೆಹಿಟ್ಟು ಒಂದು ಕಪ್, ಓಂಕಾಳು 1 ಚಮಚ, ಕೆಂಪುಮೆಣಸಿನ ಪುಡಿ ½ ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಸೋಡಾ- ಒಂದು ಚಿಟಿಕೆ

ಮಾಡುವ ವಿಧಾನ

ಕಡಲೆಹಿಟ್ಟಿಗೆ ಓಂಕಾಳು, ಕೆಂಪುಮೆಣಸಿನ ಪುಡಿ, ಉಪ್ಪು, ಕಳಲೆ ಚೂರುಗಳನ್ನು ಸೇರಿಸಿ ನೀರನ್ನು ಬೆರೆಸಿ ಚೆನ್ನಾಗಿ ಕಲಸಿಕೊಳ್ಳಿ. ಚಿಟಿಕೆ ಸೋಡಾ ಸೇರಿಸಿ ಮಿಶ್ರಣ ಕೊಂಚ ಗಟ್ಟಿಯಾಗಿರುವಂತೆ ಬೆರೆಸಿಟ್ಟುಕೊಳ್ಳಿ. ಅದನ್ನು ಅರ್ಧಗಂಟೆ ಹಾಗೆಯೇ ಇಡಿ. ಬಾಣಲೆಗೆ ಎಣ್ಣೆ ಹಾಕಿ ಚೆನ್ನಾಗಿ ಕಾಯಿಸಿಕೊಳ್ಳಿ. ನಂತರ ಚಿಕ್ಕ ಚಿಕ್ಕ ಉಂಡೆಗಳಾಗಿ ಕಾದ ಎಣ್ಣೆಗೆ ಹಾಕಿ, ಕೆಂಬಣ್ಣ ಬರುವವರೆಗೆ ಕರಿದು ತೆಗೆದರೆ ಬಿಸಿ ಬಿಸಿ ಕಳಲೆ ಬೋಡಾ ಸವಿಯಲು ಸಿದ್ಧ.

ಮಜ್ಜಿಗೆ ಬಜ್ಜಿ

ಬೇಕಾಗುವ ಸಾಮಗ್ರಿ

ಒಂದು ಕಪ್ ಕತ್ತರಿಸಿದ ಕಳಲೆ, ಎರಡು ಹಸಿಮೆಣಸಿನ ಕಾಯಿ, ತೆಂಗಿನ ತುರಿ ಒಂದು ಕಪ್, ಒಗ್ಗರಣೆಗೆ- ಎಣ್ಣೆ, ಸಾಸಿವೆ ಅರ್ಧ ಚಮಚ, ಚಿಟಿಕೆ ಇಂಗು, ಉದ್ದಿನ ಬೇಳೆ ಒಂದು ಚಮಚ, ಮೊಸರು ಒಂದು ಕಪ್, ರುಚಿಗೆ ತಕ್ಕಷ್ಟು ಉಪ್ಪು

ಮಾಡುವ ವಿಧಾನ

ಬಾಣಲೆಗೆ ಎಣ್ಣೆ ಹಾಕಿ ಬಿಸಿ ಮಾಡಿ ಅದಕ್ಕೆ ಉದ್ದಿನ ಬೇಳೆ, ಹಸಿ ಮೆಣಸಿನ ಕಾಯಿ, ಸಾಸಿವೆ, ಇಂಗು ಹಾಕಿ ಒಗ್ಗರಣೆ ಮಾಡಿ. ಅದಕ್ಕೆ ಹೆಚ್ಚಿದ ಕಳಲೆಯನ್ನು ಹಾಕಿ ಚೆನ್ನಾಗಿ ಹುರಿದುಕೊಳ್ಳಿ. ಕಾಯಿತುರಿಗೆ ಒಂದು ಹಸಿಮೆಣಸಿನ ಕಾಯಿ ಹಾಕಿ ರುಬ್ಬಿಕೊಂಡು ಮಿಶ್ರಣ ತಣ್ಣಗಾದ ಮೇಲೆ ಸೇರಿಸಿ. ನಂತರ ಮೊಸರು ಸೇರಿಸಿದರೆ ರುಚಿಯಾದ ಕಳಲೆ ಮಜ್ಜಿಗೆ ಗೊಜ್ಜು ತಯಾರು.



ಚಿತ್ರಗಳು: ಸೌಖ್ಯ ಮೋಹನ್

ಪಲಾವ್



ಬೇಕಾಗುವ ಸಾಮಗ್ರಿ

ದೊಡ್ಡದಾಗಿ ಕತ್ತರಿಸಿದ ಕಳಲೆ ಒಂದು ಬಟ್ಟಲು, ಈರುಳ್ಳಿ, ಟೊಮಾಟೊ ತಲಾ ಒಂದು, ಶುಂಠಿ, ಬೆಳ್ಳುಳ್ಳಿ ಪೇಸ್ಟ್, ಕೊತ್ತಂಬರಿಸೊಪ್ಪು, ಕರಿಬೇವಿನ ಎಲೆ

ಒಗ್ಗರಣೆಗೆ- ಎಣ್ಣೆ, ಚಿಟಿಕೆ ಜೀರಿಗೆ, ಸಾಸಿವೆ, ಲಾವ್ ಎಲೆ, ಒಂದು ಚಮಚ ಸೋಂಪಿನ ಕಾಳು, ಚಕ್ಕೆ, ಅರಿಶಿನ ಒಂದು ಚಮಚ, ಅಚ್ಚ ಖಾರದ ಪುಡಿ 2 ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಹುಣಸೆ ರಸ ಎರಡು ಚಮಚ, ಅಕ್ಕಿ 2 ಕಪ್

ಮಾಡುವ ವಿಧಾನ

ಮೊದಲಿಗೆ ಕುಕ್ಕರ್ ಪಾತ್ರೆಗೆ ಎಣ್ಣೆ ಹಾಕಿ ಚಿಟಿಕೆ ಜೀರಿಗೆ, ಸಾಸಿವೆ, ಪಲಾವ್ ಎಲೆ, ಒಂದು ಚಮಚ ಸೋಂಪಿನ ಕಾಳು, ಚಕ್ಕೆ, ಅರಿಶಿನ, ಸಣ್ಣಗೆ ಕತ್ತರಿಸಿದ ಈರುಳ್ಳಿ, ಟೊಮಾಟೊ, ಶುಂಠಿ, ಬೆಳ್ಳುಳ್ಳಿ ಪೇಸ್ಟ್,ಕರಿಬೇವಿನ ಎಲೆ, ಅಚ್ಚ ಖಾರದ ಪುಡಿ ಹಾಕಿ ಹುರಿದುಕೊಳ್ಳಿ ನಂತರ ಅದಕ್ಕೆ ಕತ್ತರಿಸಿಟ್ಟುಕೊಂಡ ಕಳಲೆ ಹಾಕಿ ಉಪ್ಪು, ಹುಣಸೆ ರಸ, ಚಿಟಿಕೆ ಸಕ್ಕರೆ (ಅಗತ್ಯವಿದ್ದರೆ) ಹಾಕಿ ತೊಳೆದಿಟ್ಟ ಅಕ್ಕಿಯನ್ನು ಸೇರಿಸಿ ಅಗತ್ಯಕ್ಕೆ ತಕ್ಕಷ್ಟು ನೀರು ಹಾಕಿ ಕುಕ್ಕರ್ 2 ವಿಶಲ್ ಆದ ಮೇಲೆ ಗ್ಯಾಸ್ ಆಫ್ ಮಾಡಿ. ರುಚಿಯಾದ ಕಳಲೆ ಪಲಾವ್ ತಿನ್ನಬಹುದು.

ಎನ್‌ಇಪಿ ಕುರಿತು ಶೈಕ್ಷಣಿಕ ಸಮಾವೇಶದಲ್ಲಿ ಸಚಿವ ಮಹದೇವಪ್ಪ ಹೇಳಿಕೆ

ಶೂದ್ರರಿಗೆ ಶಿಕ್ಷಣ ವಂಚಿಸುವ ತಂತ್ರ

ಪ್ರಜಾವಾಣಿ ವಾರ್ತೆ



ಶೈಕ್ಷಣಿಕ ಸಮಾವೇಶದಲ್ಲಿ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಶೂದ್ರರನ್ನು ಶಿಕ್ಷಣವಂಚಿತರನ್ನಾಗಿಸುವ ದುರುದ್ದೇಶವೇ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಗುಪ್ತ ಕಾರ್ಯಸೂಚಿ ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಶುಕ್ರವಾರ ಹೇಳಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಕರ್ನಾಟಕ ಜನಪರ ಶಿಕ್ಷಣ ನೀತಿ ರೂಪಿಸಲು ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಶೈಕ್ಷಣಿಕ ಸಮಾವೇಶದಲ್ಲಿ ಮಾತನಾಡಿದರು.

ದೇಶದಲ್ಲಿ ಶೇ 2.5ರಷ್ಟಿರುವ ಒಂದು ವರ್ಗದವರು ಸಾವಿರಾರು ವರ್ಷಗಳಿಂದ ಶೂದ್ರ ಸಮುದಾಯಕ್ಕೆ ಶಿಕ್ಷಣ ನಿರಾಕರಿಸುತ್ತಾ ಬಂದಿದ್ದರು. ಅಕ್ಷರ ವಂಚಿತರಿಗೆ ಸಾರ್ವತ್ರಿಕ ಶಿಕ್ಷಣ ಜಾರಿಗೊಳಿಸುವ ಕುರಿತು ಬ್ರಿಟಿಷರು ರಚಿಸಿದ್ದ ಸಮಿತಿಗಳು ಭಾರತಕ್ಕೆ ಬಂದಾಗ ಅದೇ ವರ್ಗದ ಜನರು 'ಗೋ ಬ್ಯಾಕ್' ಹೇಳಿದ್ದರು. ಈ ವರ್ಗದ ಹಿತಾಸಕ್ತಿಗಾಗಿಯೇ ಎನ್‌ಇಪಿ ರೂಪುಗೊಂಡಿದೆ. ಶಿಕ್ಷಣದ ಮೂಲಕ ಮನು ಸಂಸ್ಕೃತಿಯ ಪುನರ್ ಹೇರಿಕೆಗೆ ಸಿದ್ಧತೆ ನಡೆದಿದೆ ಎಂದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ವೈಚಾರಿಕ ಶಿಕ್ಷಣದ ಮೂಲಕ ಮಕ್ಕಳಿಗೆ ಉತ್ತಮ ಭವಿಷ್ಯ ನೀಡುವುದು ಸರ್ಕಾರದ ಆಶಯ. ಸರ್ವಜನಾಂಗದ ಶಾಂತಿಯ ತೋಟದ ನಿರ್ಮಾಣಕ್ಕೆ ಪೂರಕವಾದ ಜನಪರ ಶಿಕ್ಷಣ ನೀತಿ ರೂಪಿಸಲು ಇಲಾಖೆ ಬದ್ಧವಾಗಿದೆ. 3.5 ಲಕ್ಷ ಶಿಕ್ಷಕರು, ಒಂದೂ ಕಾಲು ಕೋಟಿ ಮಕ್ಕಳಿದ್ದಾರೆ. ಎಲ್ಲರ ಹಾಗೂ ಪೋಷಕರ ಹಿತಾಸಕ್ತಿಗೆ ಅನುಗುಣವಾಗಿ ಶಿಕ್ಷಣ ನೀತಿ ರೂಪಿಸಲಾಗುವುದು ಎಂದರು.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಎನ್‌ಇಪಿ ಅಂತಿಮ ರೂಪ ಪಡೆಯುವ ಮೊದಲೇ ರಾಜ್ಯದಲ್ಲಿ ತರಾತುರಿಯಲ್ಲಿ ಜಾರಿಗೊಳಿಸಲಾಯಿತು. ಇದರಿಂದ ಅಧ್ಯಾಪಕರು, ವಿದ್ಯಾರ್ಥಿಗಳು ಸಾಕಷ್ಟು ಸಂಕಷ್ಟ ಅನುಭವಿಸಿದರು. ಹಿಂದೆ ಇದ್ದ ಶಿಕ್ಷಣ ನೀತಿ ಫಲವಾಗಿ ಉತ್ತಮ ವಿದ್ಯಾರ್ಥಿಗಳು ರೂಪುಗೊಂಡಿದ್ದರು. ಅವರ ಶ್ರಮದಿಂದ ಬೆಂಗಳೂರಿಗೆ 'ಸಿಲಿಕಾನ್ ವ್ಯಾಲಿ' ಎಂಬ ಖ್ಯಾತಿ ದೊರೆಯಿತು ಎಂದು ಹೇಳಿದರು.

ಯುಜಿಸಿ ಮಾಜಿ ಅಧ್ಯಕ್ಷ ಸುಖದೇವ್ ಥೋರಟ್, ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎ.ಮುರಿಗೆಪ್ಪ, ಮೌಂಟ್ ಕಾರ್ಮೆಲ್ ಸ್ಕೂಲ್ ಡೀನ್ ಮೈಕೆಲ್ ವಿಲಿಯಮ್ಸ್, ಕರ್ನಾಟಕ ಪ್ರಾದೇಶಿಕ ಶಿಕ್ಷಣ ಆಯೋಗದ ಕಾರ್ಯದರ್ಶಿ ಫ್ರಾನ್ಸಿಸ್ ಅಲ್ಮೇಡಾ ಅವರು ಶಿಕ್ಷಣ ನೀತಿಗಳ ಕುರಿತು ವಿಚಾರಗಳನ್ನು ಪ್ರಸ್ತುತಪಡಿಸಿದರು. ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ರಾಜ್ಯ ಉಪಾಧ್ಯಕ್ಷ ವಿ.ಎನ್.ರಾಜಶೇಖರ ಮಾತನಾಡಿದರು. ಸಮಿತಿ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಅಧ್ಯಕ್ಷತೆ ವಹಿಸಿದ್ದರು.

ಮೈತ್ರಿಗೆ ಎ.ಸಿ ಹುದ್ದೆ: ಡಿಪಿಎಆರ್‌ಗಿಲ್ಲ ಕಿಮ್ಮತ್ತು

ಒಂದನೇ ಪುಟದಿಂದ

'ಸೂಪರ್ ನ್ಯೂಮರರಿ ಹುದ್ದೆಗೆ ನೇಮಕಗೊಂಡಿದ್ದ ಚಂದ್ರಕಾಂತ್ ಅವರನ್ನು ನ್ಯಾಯಾಲಯದ ಆದೇಶದಂತೆ ಮತ್ತೆ ಹಿಂದಿನ ಹುದ್ದೆಗೆ ಹಿಂದಿರುಗಿಸಲಾಗಿದೆ. ಶಿಲ್ಪಾ ಅವರ ಪ್ರಕರಣದಲ್ಲಿ ಹುದ್ದೆ ಸೃಜಿಸಿಲ್ಲ. ವರದಿ ಮಾಡದೇ ಇರುವ ಹುದ್ದೆಗೆ ಪರಿಗಣಿಸಲಾಗಿದೆ. ಸಿದ್ದೇಶ್ವರ ಅವರ ಪ್ರಕರಣದಲ್ಲಿ ಕೆಪಿಎಸ್‌ಸಿ ಪ್ರಕಟಿಸಿದ ಪರಿಷ್ಕೃತ ಆಯ್ಕೆ ಪಟ್ಟಿಯ ಮೇಲೆ ಕೆಎಟಿ ನೀಡಿದ ನಿರ್ದೇಶನದಂತೆ ಹುದ್ದೆ ಸೃಜಿಸಲಾಗಿದೆ. ಈ ಮೂರು ಪ್ರಕರಣಗಳು ಮೈತ್ರಿ ಪ್ರಕರಣಕ್ಕೆ ಅನ್ವಯಿಸುವುದಿಲ್ಲ' ಎಂದು ಡಿಪಿಎಆರ್ ಹೇಳಿದೆ.

'ಅರ್ಜಿದಾರ ಅಭ್ಯರ್ಥಿಗೆ ಆಕ್ಷೇಪ ಸಲ್ಲಿಸಲು ಅವಕಾಶ ನೀಡದೆ 149 ಅಂಕಗಳಿಂದ 140 ಅಂಕಗಳಿಗೆ ಸ್ವಯಂಪ್ರೇರಿತವಾಗಿ ಇಳಿಸಿದ ಪ್ರಕರಣ ಪಟ್ನಾ ಹೈಕೋರ್ಟ್ ಮುಂದಿತ್ತು. ಅಂಕ ಇಳಿಸಿರುವುದು ಅಭ್ಯರ್ಥಿಗೆ ಅನನುಕೂಲ ಎಂದು ಪರಿಗಣಿಸಿದ್ದ ಕೋರ್ಟ್, ಅರ್ಜಿದಾರರಿಗೆ ಮೂಲ ಅಂಕ ನೀಡಿದರೆ ಅವರು ಹುದ್ದೆಗೆ ಅರ್ಹರು ಎಂದಿತ್ತು. ಮೈತ್ರಿ ಪ್ರಕರಣದಲ್ಲಿ ಸರ್ಕಾರದ ಮುಂದಿರುವ ಪ್ರಸ್ತಾವನೆಗಳು ಭಿನ್ನವಾಗಿದೆ. ಹೀಗಾಗಿ ಸೂಪರ್ ನ್ಯೂಮರರಿ ಹುದ್ದೆಯನ್ನು ಸೃಜಿಸುವುದು ಕಾನೂನಿನ ಪ್ರಕಾರ ಊರ್ಜಿತವಲ್ಲ' ಎಂದು ಡಿಪಿಎಆರ್ ಪ್ರತಿಪಾದಿಸಿತ್ತು.

ವಿದ್ಯಾರ್ಥಿನಿಯರಿಗೆ ಜಾಮೀನು

ಒಂದನೇ ಪುಟದಿಂದ

ಬೈಂದೂರು ಶಾಸಕ ಗುರುರಾಜ ಶೆಟ್ಟಿ ಗಂಟಿಹೊಳೆ ಅವರು, 'ರಾಜಕೀಯ ಹೋರಾಟಗಳಲ್ಲಿ ರಾಜಕೀಯ ಮಾಡಿದರೆ ಸಹಿಸುತ್ತೇವೆ, ಹಿಂದುತ್ವದ ಪರವಾದ ಹೋರಾಟಗಳಲ್ಲಿ ರಾಜಕೀಯ, ತಮಾಷೆ ಹಾಗೂ ಉದಾಸೀನ ಮಾಡಿದರೆ ಸಹಿಸುವುದಿಲ್ಲ. ಮನಷ್ಯ ತಪ್ಪೆಸಗುವುದು ಸಹಜ. ಆದರೆ, ಉದ್ದೇಶಪೂರ್ವಕವಾಗಿ ಇಂಥ ಕೃತ್ಯ ನಡೆಸುವುದು ಅಪರಾಧ. ಪ್ರಕರಣದ ತನಿಖೆಯಲ್ಲಿ ರಾಜ್ಯ ಸರ್ಕಾರ ಹಸ್ತಕ್ಷೇಪ ಮಾಡದೇ ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು' ಎಂದರು.

ಖುಷ್ಬೂ ದಾರಿ ತಪ್ಪಿಸಿದ್ದಾರೆ: 'ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬೂ ಗಡಿಬಿಡಿಗೆ ಸಿಲುಕಿ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ. ಕಾಲೇಜಿನಲ್ಲಿ ರಹಸ್ಯ ಕ್ಯಾಮೆರಾ ಇದೆ ಎಂದು ಯಾರೂ ಆರೋಪಿಸಿಲ್ಲ. ಪ್ರಕರಣದಲ್ಲಿ ಖುಷ್ಬೂ ಅವರಿಗೆ ಮಾಹಿತಿ ನೀಡಿದವರು ವ್ಯವಸ್ಥಿತವಾಗಿ ಅವರ ದಾರಿ ತಪ್ಪಿಸಿದ್ದಾರೆ' ಎಂದು ಶಾಸಕ ಗುರುರಾಜ ಶೆಟ್ಟಿ ಗಂಟಿಹೊಳೆ ಆರೋಪಿಸಿದರು.

'ಈ ವಿಚಾರದಲ್ಲಿ ಸರ್ಕಾರ ಮಕ್ಕಳಾಟ ಮಾಡಬಾರದು, ತನಿಖೆ ಸರಿದಾರಿಯಲ್ಲಿ ನಡೆದರೆ ಹೋರಾಟದ ಅಗತ್ಯವಿಲ್ಲ. ತನಿಖೆ ನಡೆಸಲು ಸ್ವಾತಂತ್ರ್ಯ ಕೊಡಿ; ಇಲ್ಲವಾದರೆ ರಾಷ್ಟ್ರೀಯ ತನಿಖಾ ದಳಕ್ಕೆ ತನಿಖೆ ಹೊಣೆ ವಹಿಸಿ' ಎಂದು ಒತ್ತಾಯಿಸಿದರು.

ತನಿಖೆಗೆ ತಂಡ ರಚನೆ: ಪ್ರಕರಣವು ಮಹಿಳೆಯರಿಗೆ ಸಂಬಂಧಪಟ್ಟದ್ದಾಗಿರುವುದರಿಂದ ಹಿಂದಿನ ತನಿಖಾಧಿಕಾರಿಯನ್ನು ಬದಲಿಸಿ, ಮಹಿಳಾ ಪಿಎಸ್‌ಐ ನೇತೃತ್ವದ ತಂಡಕ್ಕೆ ತನಿಖೆಯ ಜವಾಬ್ದಾರಿ ವಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿ.ಎಂ ಕುಟುಂಬದ ಅವಹೇಳನ ಬಿಜೆಪಿ ಕಾರ್ಯಕರ್ತೆ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ



ಶಕುಂತಲಾ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬದ ಬಗ್ಗೆ ಅವಹೇಳನಕಾರಿ ಹೇಳಿಕೆಯನ್ನು ಪೋಸ್ಟ್ ಮಾಡಿದ್ದಾರೆಂಬ ಆರೋಪದಡಿ ಬಿಜೆಪಿ ಕಾರ್ಯಕರ್ತೆ ಶಕುಂತಲಾ ಎಚ್.ಎಸ್. ಅವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿ, ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಿದ್ದಾರೆ.

'ಕಾಂಗ್ರೆಸ್ ಪಕ್ಷದ ಪೋಸ್ಟ್‌ಗೆ ಪ್ರತಿಕ್ರಿಯಿಸಿ ತುಮಕೂರಿನ ಶಕುಂತಲಾ, ಮತ್ತೊಂದು ಪೋಸ್ಟ್ ಮಾಡಿದ್ದರು. ಈ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತ ಹನುಮಂತರಾಯ ದೂರು ನೀಡಿದ್ದರು. ಮಹಿಳೆಯ ಗೌರವಕ್ಕೆ ಧಕ್ಕೆ ತಂದ (ಐಪಿಸಿ 509) ಆರೋಪದಡಿ ಶಕುಂತಲಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು' ಎಂದು ಮೂಲಗಳು ಹೇಳಿವೆ.

'ಉಡುಪಿ ಪ್ರಕರಣ: ತನಿಖೆಗೂ ಮುನ್ನವೇ ಸರ್ಟಿಫಿಕೇಟ್'

ಹಾವೇರಿ: 'ಉಡುಪಿ ಪ್ರಕರಣದಲ್ಲಿ ತನಿಖೆಗೂ ಮುಂಚೆಯೇ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಪ್ರಕರಣ ಮುಚ್ಚಿ ಹಾಕುವ ಶಂಕೆ ಇದೆ. ಹೆಣ್ಣುಮಕ್ಕಳ ಗೌರವದ ಬಗ್ಗೆ ಹಗುರವಾಗಿ ಮಾತನಾಡುವ ಕಾಂಗ್ರೆಸ್ ನಾಯಕರಿಗೆ ನಾಚಿಕೆಯಾಗಬೇಕು' ಎಂದು ಶಾಸಕ ಬಸವರಾಜ ಬೊಮ್ಮಾಯಿ ಶುಕ್ರವಾರ ವಾಗ್ದಾಳಿ ನಡೆಸಿದರು.

ನಗರದಲ್ಲಿ ಮಾಧ್ಯಮದವರ ಜೊತೆ ಮಾತನಾಡಿ, 'ಅಲ್ಲಿ ವಿಡಿಯೊ ರೆಕಾರ್ಡ್ ಮಾಡಿಲ್ಲ ಅಂದರೆ ವಿದ್ಯಾರ್ಥಿನಿಯರನ್ನು ಕಾಲೇಜಿನ ಆಡಳಿತ ಮಂಡಳಿ ಏಕೆ ಸಸ್ಪೆಂಡ್ ಮಾಡಿದೆ? ತಪ್ಪೊಪ್ಪಿಗೆ ಪತ್ರ ಏಕೆ ಬರೆಯಿಸಿಕೊಂಡರು? ಇದು ಮುಗಿದು ಹೋದ ಪ್ರಕರಣ ಅಲ್ಲ, ಮುಚ್ಚಿಹೋದ ಪ್ರಕರಣ' ಎಂದರು.

ದಂಗೆಕೋರರ ರಕ್ಷಣೆ: 'ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಪ್ರಕರಣವೇ ಬೇರೆ. ಕನ್ನಡ ಸಂಘಟನೆಗಳ ಪ್ರಕರಣ ಬೇರೆ. ಪೊಲೀಸ್ ಠಾಣೆಗಳಿಗೆ ಕಲ್ಲು ಹೊಡೆದು ಬೆಂಕಿ ಹಚ್ಚಿದ ದಂಗೆಕೋರರ ರಕ್ಷಣೆಗೆ ಸರ್ಕಾರ ಹೊರಟಿದೆ. ಈ ಪ್ರಕರಣವನ್ನು ಲಘುವಾಗಿ ಪರಿಗಣಿಸಬಾರದು' ಎಂದರು.

'ವಿಡಿಯೊ ಷಡ್ಯಂತ್ರ ಬಯಲಾಗಲಿ'

ಉಡುಪಿ: 'ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಒಂದು ವರ್ಷದಿಂದ ಅಹಿತಕರ ಘಟನೆಗಳು ನಡೆಯುತ್ತಿರುವ ಬಗ್ಗೆ ವಿದ್ಯಾರ್ಥಿನಿಯರೇ ಆರೋಪಿಸಿದ್ದು ಈ ಬಗ್ಗೆ ಸಮಗ್ರ ತನಿಖೆ ಆಗಬೇಕು. ಘಟನೆ ಹಿಂದಿನ ಷಡ್ಯಂತ್ರ ಬಯಲಾಗಬೇಕು' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಒತ್ತಾಯಿಸಿದರು.

ಶುಕ್ರವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಸಚಿವೆ, 'ಆರೋಪಿ ವಿದ್ಯಾರ್ಥಿನಿಯರ ಭೇಟಿಗೆ ಹಿಂದಿನಿಂದಲೂ ಕೆಲವು ಯುವಕರು ಕಾಲೇಜಿಗೆ ಬರುತ್ತಿದ್ದರು ಎಂಬ ಮಾಹಿತಿ ಇದೆ. ಈ ನಿಟ್ಟಿನಲ್ಲಿ ಕಾಲೇಜಿನ ಸುತ್ತಮುತ್ತ ಇರುವ ಸಿ.ಸಿ. ಟಿ.ವಿ ಕ್ಯಾಮೆರಾ ದಾಖಲೆಗಳನ್ನು ವಶಕ್ಕೆ ಪಡೆದು, ತನಿಖೆ ನಡೆಸಬೇಕು. ವಿದ್ಯಾರ್ಥಿನಿಯರ ಮೊಬೈಲ್‌ನಲ್ಲಿ ಡಿಲೀಟ್ ಆಗಿರುವ ವಿಡಿಯೊಗಳ ಎಫ್‌ಎಸ್‌ಎಲ್ ತಜ್ಞರ ನೆರವಿನಿಂದ ಮರು ಪಡೆಯಬೇಕು' ಎಂದು ಅವರು ಆಗ್ರಹಪಡಿಸಿದರು.

ನಗರಸಭೆ ಕಾರ್ಯಾಲಯ, ಹಾವೇರಿ–581 110

ವೆಬ್ ಸೈಟ್:www.havericity.mrc.gov.in ಜನಹಿತ ಸಹಾಯವಾಣಿ: 080 375–23108108
ಇ–ಮೇಲ್-: itstaff_ulb_haveri@yahoo.com ದೂರವಾಣಿ ಕಛೇರಿ: 08375–232444
ಜಿಲ್ಲೆ: ಹಾವೇರಿ ರಾಜ್ಯ: ಕರ್ನಾಟಕ

ಕ್ರಸಂ/ನಸಹಾ/ತಾವಿ/ಟೆ.ಪ್ರ/ವಹಿ :2023–24 ದಿನಾಂಕ:27–07–2023

ಟೆಂಡರ್ ಪ್ರಕಟಣೆ

ಈ ಮೂಲಕ ಯಾವತ್ತೂ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಇ–ಪ್ರಕ್ಯೂರಮೆಂಟ್ ಮೂಲಕ **2019–20ನೇ** ಸಾಲಿನ **14ನೇ** ಹಣಕಾಸು ಯೋಜನೆಯ **ರೂ.150.00** ಲಕ್ಷಗಳ **10** ಕಾಮಗಾರಿಗಳ ಟೆಂಡರ್ ಅನ್ನು **ದಿ.19/07/2023** ರಂದು ಪ್ರಕಟಿಸಲಾಗಿತ್ತು ಹಾಗು **ದಿ.27/07/2023** ರಂದು ಗುತ್ತಿಗೆದಾರರಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಆದರೆ ತಾಂತ್ರಿಕ ಕಾರಣಗಳಿಂದ ಸದರಿ ದಿನಾಂಕವನ್ನು **ದಿ.31/07/2023** ರವರೆಗೆ ವಿಸ್ತರಿಸಲಾಗಿದೆ. ಆಸಕ್ತವುಳ್ಳ ಗುತ್ತಿಗೆದಾರರು ತಮ್ಮ–ತಮ್ಮ ದರಗಳನ್ನು ಈ ಕೆಳಕಾಣಿಸಿದ ವೆಬ್ ಸೈಟ್ ಮೂಲಕ ನಮೂದಿಸಬಹುದಾಗಿದೆ. **kppp.karnataka.gov.in** ನಲ್ಲಿ ನೋಡಿ ತಿಳಿದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕಾರ್ಯಾಲಯದ ಕಛೇರಿಯಲ್ಲಿ ಕೇಳಿ ತಿಳಿದುಕೊಳ್ಳಬಹುದಾಗಿದೆ.

ಸಹಿ/– ಪೌರಾಯುಕ್ತರು, ನಗರಸಭೆ, ಹಾವೇರಿ.

ವಾ.ಸಾ.ಇ/ಹಾವೇರಿ/91/2023–24/ದೇಶಪಾಂಡೆಪಬ್ಲಿಸಿಟಿ

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ1.ಇ.ಟೆಂಡರ್:07:2023–24 ದಿನಾಂಕ: 20–07–2023

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಸ್ವಚ್ಛ ಭಾರತ್ ಮಿಷನ್ /ಪಾಲಿಕೆ ಸಾಮಾನ್ಯ ನಿಧಿ– 02 ಕಾಮಗಾರಿ, 2020–21 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 02 ಕಾಮಗಾರಿ, 2022–23 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯ ಶೇಕಡ. 24.10– 01 ಕಾಮಗಾರಿ, 2019–20 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ – 01 ಕಾಮಗಾರಿ, 2022–23 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ನಿಧಿ – 01 ಕಾಮಗಾರಿ, 2022–23 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಶೇಕಡ 24.10 – 01 ಕಾಮಗಾರಿ, 2020–21 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ನಿಧಿ – 01 ಕಾಮಗಾರಿ, 2022–23 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 15 ಕಾಮಗಾರಿಗಳು ಒಟ್ಟು 24 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜೆನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. **ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ (ರೂ.100.00 ಲಕ್ಷ ಮೇಲ್ಪಟ): 08–08–2023 ಸಮಯ : 11.00 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ: 14–08–2023 ಸಮಯ : 16.30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 14–08–2023 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 16–08–2023 ಸಮಯ : 11.00**

ವಾಸಾಇ/ದಾವಣಗೆರೆ/150/ ಕೆಎಸ್‌ಎಂಸಿಎ/2023–24

ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ – 587104.

ಸಂ: ಆ.ಅ/ತೋ.ವಿ.ವಿ.ಬಾ/ಟೆಂ.ಪ್ರ–229/2023–24 ದಿನಾಂಕ: 28.07.2023

ಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಯ, ಬಾಗಲಕೋಟದ ಅಡಿಯಲ್ಲಿ ಬರುವ ಬಾಗಲಕೋಟ, ಬೀದರ ಹಾಗೂ ವಿಜಯಪೂರ ಕೇಂದ್ರಗಳಿಗೆ ಬಾಡಿಗೆ ವಾಹನಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಪಡೆಯಲು ಅರ್ಹ ಏಜೆನ್ಸಿಯವರಿಂದ ಟೆಂಡರನ್ನು KC-2 ಷರತ್ತು ನಿಬಂಧನೆಗಳಿಗೆ ಒಳಪಟ್ಟಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಸಲ್ಲಿಸುವುದು

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ	16.08.2023 ರಂದು ಮಧ್ಯಾಹ್ನ 16–00 ಘಂಟೆಯವರೆಗೆ
2	ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ	19.08.2023 ರಂದು ಮಧ್ಯಾಹ್ನ 16–00 ಘಂಟೆಗೆ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	22.08.2023 ರಂದು ಮಧ್ಯಾಹ್ನ 16–00 ಘಂಟೆಗೆ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	24.08.2023 ರಂದು ಮಧ್ಯಾಹ್ನ 16–00 ಘಂಟೆಗೆ

ಗುತ್ತಿಗೆದಾರರು ಸದರಿ ಟೆಂಡರನಲ್ಲಿ ಭಾಗವಹಿಸಲು ಕರ್ನಾಟಕ ಸರಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಗುತ್ತಿಗೆದಾರರು https://kppp.karnataka.gov.in ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ/ Corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ–08354–230260ಗೆ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಆಸ್ತಿ ಅಧಿಕಾರಿಗಳು

DIPR/BGK/RO-NO-68/KSMCA/2023-24

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2281105 Email:eemitmk@gmail.com

ಐ.ಎಫ್.ಟಿ ಸಂಖ್ಯೆ.02/2023–24 KW–4(ದ್ವಿಕಲಕೋಟೆ) ದಿನಾಂಕ: 26.07.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 26.07.2023

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2023–24 ನೇ ಸಾಲಿನ ಲೆಕ್ಕ ಶೀರ್ಷಿಕೆ: CEPMIZ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 02/ 2023–24, ದಿ: 26–07–2023 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:

1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 28–07–2023 ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ ಸ್ಪಷ್ಟೀಕರಣವನ್ನು (ಪ್ರಿ.ಬಿಡ್) ಪಡೆಯಲು ದಿನಾಂಕ: 03–08–2023 ಬೆಳಗ್ಗೆ 11.30 ಗಂಟೆಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವೃತ್ತ ಕಛೇರಿ, ಬೆಂಗಳೂರುರವರ ಕಛೇರಿಯಲ್ಲಿ ನಡೆಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು"ಇ" ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ:14–08–2023 ಸಾಯಂಕಾಲ 5.00ಗಂಟೆಯುವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 16–08–2023 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 17–08–2023 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.

DIPR/TUM/89/KSMCA/2023-24

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ, ವಿಜಯಪುರ.
ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ (ಅಕ್ಷರ ದಾಸೋಹ ಯೋಜನೆ)

ಸಂಖ್ಯೆ:ಜಿಪಂ/ಅದಾ/ಸಿಆರ್/ಆ.ಪ.ಸಾ/ಟೆಂಡರ್/2023–24 ದಿನಾಂಕ:18.05.2023

ಟೆಂಡರ್ ಪ್ರಕಟಣೆಯ ಅಧಿಸೂಚನೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಅಕ್ಷರ ದಾಸೋಹ ಯೋಜನೆಯಡಿ ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಆಯಾ ತಾಲೂಕುಗಳಲ್ಲಿಯ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ (ಕೆ.ಎಫ್.ಸಿ.ಎಸ್.ಸಿ) ತಾಲುಕು ಸಗಟು ಮಳಿಗೆಯಿಂದ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ನೀಡುವ ಮಾರ್ಗ ನಕ್ಷೆಯಂತೆ ಅಗತ್ಯವಾದ ಆಹಾರ ಪದಾರ್ಥಗಳನ್ನು ಸರಕಾರಿ ಹಾಗೂ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಹಾಗೂ ಶಾಲಾ ಅಡುಗೆ ಕೇಂದ್ರಗಳಿಗೆ 01–ಎಪ್ರಿಲ್–2023 ರಿಂದ 31–ಮಾರ್ಚ–2024 ರ ಅವಧಿಗೆ ಸಾಗಾಣಿಕೆ ಮಾಡಲು ಅರ್ಹ ಹಾಗೂ ಆಸಕ್ತ ಗುತ್ತಿಗೆದಾರರನ್ನು ತಾಲೂಕುವಾರು ನೇಮಕ ಮಾಡುವ ಕುರಿತು ಪ್ರತ್ಯೇಕ ಟೆಂಡರ್‌ಗಳ ತಾಂತ್ರಿಕ ಹಾಗೂ ವಾಣಿಜ್ಯ ಬಿಡ್‌ಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಕುರಿತಾಗಿ ಅನುಸರಿಸಬೇಕಾದ ಷರತ್ತು/ನಿಬಂಧನೆಗಳು ಹಾಗೂ ಅರ್ಜಿ ವಿವರವು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವೆಬ್‌ಸೈಟ್ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದಾಗಿದೆ.

ವಿವರಗಳು:

ಅ.ನಂ	ವಿವರ	ದಿನಾಂಕ
1	ಟೆಂಡರ್ ಪ್ರಕಟಣೆ ದಿನಾಂಕ	28.07.2023
2	ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ	22.08.2023 ರ ಸಂಜೆ 5.00 ಗಂಟೆಯವರೆಗೆ.
3	ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವದು 1. ತಾಂತ್ರಿಕ ಬಿಡ್: 2. ವಾಣಿಜ್ಯ ಬಿಡ್:	 24.08.2023 ಬೆಳಿಗ್ಗೆ 11.00 ಗಂಟೆಗೆ. 28.08.2023 ಬೆಳಿಗ್ಗೆ 11.00 ಗಂಟೆಗೆ.

ಅ.ನಂ.3 ರಲ್ಲಿ ತಿಳಿಸಿದ ದಿನಾಂಕದಂದು ಸರಕಾರಿ ರಜೆ ಬಂದಲ್ಲಿ, ರಜೆಯ ಮರು ದಿನ ಬಿಡ್ ತೆರೆಯಲಾಗುವುದು. ಹೆಚ್ಚಿನ ವಿವರಣೆಗಳನ್ನು ಮೇಲಿನ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ವಿಜಯಪುರ

ವಾಸಾಸಂಇ/ವಿಜಯಪುರ/74/ಕೆಎಸ್‌ಎಂಸಿಎ/2023–24

ನಗರಸಭಾ ಕಾರ್ಯಾಲಯ, ಭದ್ರಾವತಿ

ನಂ.ನಸಭ/ಕಾವಿ/ಟೆಂಡರ್/ಸಿಆರ್/01/2023–24 ದಿನಾಂಕ: 25/07/2023

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2022–23 ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನದಡಿಯಲ್ಲಿ ರೂ 121.20 ಲಕ್ಷಗಳ ಒಟ್ಟು 10 ಪ್ಯಾಕೇಜ್ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತ ಆದ್ಯಾದ್ದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document - KW-1 ಮತ್ತು KW-2 ರ ಪ್ರಕಾರ ಐಟಂವಾರು ಅಲ್ಪಾವಧಿ ಟೆಂಡರ್‌ನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ww.kpp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

1) ಟೆಂಡರ್ ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 05–08–2023 ಅಪರಾಹ್ನ 5.30 ಗಂಟೆವರೆಗೆ 2) ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ: 07–08–2023 ಅಪರಾಹ್ನ 11.00 ಗಂಟೆಯನಂತರ ಆನ್ ಲೈನ್ ಮೂಲಕ, ಸದರಿ ದಿನಾಂಕ ರಜಾ ದಿನವೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು. 3) ಕಾಮಗಾರಿ ಪೂರ್ಣಗೊಳಿಸುವ ಅವಧಿ 90 ದಿವಸಗಳು 4) ಟೆಂಡರ್ ಅಫ್ ಲೋಡಿಂಗ್‌ಗೆ ಸಂಬಂಧಿಸಿದಂತೆ ಇ–ಪೋರ್ಟಲ್ ಸಹಾಯಕ ದೂರವಾಣಿ 080–22485867 ಅಥವಾ 080–25501216 ಮತ್ತು ಹೆಲ್ತ್ ಡೆಸ್ಕ್ ಇ–ಮೇಲ್– supporta@eprochelpdesk.com ಇವರನ್ನು ಸಂಪರ್ಕಿಬಹುದು. ಹೆಚ್ಚಿನ ವಿವರಗಳಿಗೆ www.eproc.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಭದ್ರಾವತಿ / ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಭದ್ರಾವತಿ ಈ ಕಛೇರಿಯಲ್ಲಿ ಪಡೆಯಬಹುದು. 5) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್ ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಇ–ಪ್ರಕ್ಯೂರ್.ಮೆಂಟ್ ಪೋರ್ಟಲ್ ಗೆ ಪ್ರವೇಶಿಸಲಾಗದಿರುವಿಕೆಗೆ ನಗರಸಭೆ ಜವಾಬ್ದಾರರಾಗಿರುವುದಿಲ್ಲ. 6) ಯಾವುದೇ ತಿದ್ದುಪಡಿ/ಅನುಬಂಧಗಳನ್ನು ಇ–ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ ಹಾಗೂ ಟೆಂಡರ್ ದಾರರು ಟೆಂಡರ್ ದಾಸ್ತವೇಜಿನಲ್ಲಿರುವ ಎಲ್ಲಾ ಷರತ್ತುಗಳಿಗೆ ಬದ್ಧರಿರತಕ್ಕದ್ದು.

ಸಹಿ/– (ಶೃತಿ.ಸಿ.ವಸಂತ್ ಕುಮಾರ್.ಕೆ.ಜಿ) ಅಧ್ಯಕ್ಷರು ನಗರಸಭೆ, ಭದ್ರಾವತಿ

ಸಹಿ/– (ಸರ್ವಮಂಗಳ ಬಿ.ಪಿ.) ಉಪಾಧ್ಯಕ್ಷರು ನಗರಸಭೆ, ಭದ್ರಾವತಿ

ಸಹಿ/– (ಸುದೀಪ್ ಕುಮಾರ್.ಕೆ) ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ಭದ್ರಾವತಿ

ಸಹಿ/–(ಮನುಕುಮಾರ್.ಹೆಚ್.ಎಂ.ಕೆ.ಎಂ.ಎ.ಎಸ್) ಪೌರಾಯುಕ್ತರು ನಗರಸಭೆ, ಭದ್ರಾವತಿ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/111/07/23–24/255

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ: ಮೈನಪ್ರಾ/ಲೆಶಾ/ನಗದು/ನಿಶ್ಚಿತ ಠೇವಣಿ/2/2023–24 ದಿನಾಂಕ: 25.07.2023

ಇ–Bidding ಪ್ರಕಟಣೆ

ವಿಷಯ: ನಿಶ್ಚಿತ ಠೇವಣಿಗಾಗಿ ಸಾರ್ವಜನಿಕ ಬ್ಯಾಂಕುಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಹಾಗೂ ಖಾಸಗಿ ವಲಯದ ಷಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ ಇ–ಟೆಂಡರ್ ಮುಖಾಂತರ ಸ್ಪರ್ಧಾತ್ಮಕ ಬಡ್ಡಿದರ ಕೋರಿ ಪ್ರಕಟಣೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದಿಂದ ರಚಿಸಲ್ಪಟ್ಟ ಸಂಸ್ಥೆಯಾಗಿರುತ್ತದೆ. ಸಂಸ್ಥೆಯಲ್ಲಿ ಅಲ್ಪಾವಧಿಗಾಗಿ ಲಭ್ಯವಿರುವ ಮೊತ್ತವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ.FD.91TAR2022 ದಿನಾಂಕ02.07.2022 ರ ಸುತ್ತೋಲೆಯನ್ವಯ ಪ್ರಾಧಿಕಾರದ ಖಾತೆಯಲ್ಲಿ ಲಭ್ಯವಿರುವ ರೂ. **428.00** ಕೋಟಿಗಳ ಹೆಚ್ಚುವರಿ ನಿಧಿಯನ್ನು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಸೇರಿದಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಶೇ. 60 ರಷ್ಟು ಹಾಗೂ ಶೇ.40 ರಷ್ಟನ್ನು ಖಾಸಗಿ ವಲಯ ಬ್ಯಾಂಕ್‌ಗಳಲ್ಲಿ ಸ್ಪರ್ಧಾತ್ಮಕ ಬಡ್ಡಿದರದಲ್ಲಿ ತಾತ್ಕಾಲಿಕವಾಗಿ ಅಲ್ಪಾವಧಿಯ ನಿಶ್ಚಿತ ಠೇವಣಿಯಾಗಿ ತೊಡಗಿಸಲು ಉದ್ದೇಶಿಸಲಾಗಿದ್ದು, ಠೇವಣಿ ಸ್ವೀಕರಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಹಾಗೂ ಖಾಸಗಿ ವಲಯದ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು E-Portal(WWW.KPPP.Karnataka.gov.in) ಮುಖಾಂತರ ಆಹ್ವಾನಿಸಲಾಗಿದೆ.

ಅರ್ಹತೆಗಳು:–

1. ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಮತ್ತು ಖಾಸಗಿ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳು ಅನುಕ್ರಮವಾಗಿ ರೂ. 5000 ಕೋಟಿ ರೂ. 1000 ಕೋಟಿ ಹಾಗೂ 5000 ಕೋಟಿ ನಿವ್ವಳ (Net Worth) ಬಂಡಾವಾಳವನ್ನು ಹೊಂದಿರಬೇಕು. (ದೃಢೀಕೃತ ಪ್ರತಿ ಸಲ್ಲಿಸಬೇಕು)
2. ಸಾರ್ವಜನಿಕ ವಲಯಗಳ ಬ್ಯಾಂಕ್‌ಗಳ ಹಾಗೂ ಖಾಸಗಿ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳಿಗೆ ಕನಿಷ್ಠ ಶೇ.12 ಕ್ಕೆ ಕಡಿಮೆ ಇಲ್ಲದಂತೆ ಕ್ಯಾಪಿಟಲ್ ಅಡಿಕ್ವೆಸಿ ರೇಷಿಯೋ ಹೊಂದಿರಬೇಕು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ಕನಿಷ್ಠ ಶೇ.10 ಕ್ಕೆ ಕಡಿಮೆ ಇಲ್ಲದಂತೆ ಕ್ಯಾಪಿಟಲ್ ಅಡಿಕ್ವೆಸಿ ರೇಷಿಯೋ ಹೊಂದಿರಬೇಕು. (ದೃಢೀಕೃತ ಪ್ರತಿ ಸಲ್ಲಿಸಬೇಕು)
3. ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಹಿಂದಿನ 5 ವರ್ಷಗಳಲ್ಲಿ ಕನಿಷ್ಠ 2 ವರ್ಷಗಳು ಲಾಭದ (Profitablity Track Record) ದಾಖಲೆ ಹೊಂದಿರಬೇಕು. (ದೃಢೀಕೃತ ಪ್ರತಿ ಸಲ್ಲಿಸಬೇಕು)
4. ಖಾಸಗಿ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಕಳೆದ 5 ವರ್ಷಗಳಲ್ಲಿಯೂ ಲಾಭದ (Profitability Track Record) ದಾಖಲೆ ಹೊಂದಿರಬೇಕು. (ದೃಢೀಕೃತ ಪ್ರತಿ ಸಲ್ಲಿಸಬೇಕು)
5. ದಿನಾಂಕ: 22.08.2022 ರಿಂದ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರ ನಿಗಧಿಪಡಿಸಿರುವಂತೆ ನಿವ್ವಳ N.P.A. ಖಾಸಗಿ ಷೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ 3.90 % ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ಶೇ.10.62% ದಾಟಿರಬಾರದು. (ದಿನಾಂಕ: 31.03.2022 ರಿಂದ 31.07.2023 ವರೆಗೆ N.P.A. ಅನ್ವಯಿಸುತ್ತದೆ). (ದೃಢೀಕೃತ ಪ್ರತಿ ಸಲ್ಲಿಸಬೇಕು)
6. ಪ್ರಾಧಿಕಾರ ಅಪೇಕ್ಷಿಸಿದ್ದಲ್ಲಿ ಭಾಗಶ: / ಪೂರ್ಣ ಪ್ರಮಾಣದಲ್ಲಿ ನಿಶ್ಚಿತ ಠೇವಣಿಯನ್ನು ಹಿಂತಗೆದಲ್ಲಿ ಯಾವುದೇ ದಂಡ ವಿಧಿಸತ್ಕದಲ್ಲ (Pre Maturity Penalty)
7. ಈ ಮೇಲ್ಕಂಡ ವಿವರಗಳನ್ನು ನೀಡಿರುವ "Annexure -1" ರಲ್ಲಿ ದೃಢೀಕರಿಸಿ ಸಲ್ಲಿಸುವುದು.

ಷರತ್ತುಗಳು: 1. ಯಾವುದೇ ಕಾರಣವನ್ನು ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿರುತ್ತದೆ. 2. ಬ್ಯಾಂಕ್‌ಗಳಿಗೆ ನೀಡಲಾಗುವ ನಿಶ್ಚಿತ ಠೇವಣಿ ಹೂಡಿಕೆಯ ಮೊತ್ತದ ಅನುಪಾತವನ್ನು ನಿರ್ಧರಿಸುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರುತ್ತದೆ.

ಮೇಲಿನ ಅರ್ಹತೆ ಹೊಂದಿರುವ ಬ್ಯಾಂಕುಗಳು ಈ ಕೆಳಗೆ ನಮೂದಿಸಿರುವ ದಿನ/ಅವಧಿಗೆ ನೀಡುವ ಗರಿಷ್ಟ ಬಡ್ಡಿ ದರವನ್ನು ಇ– ಪೋರ್ಟಲ್ **http://www.kppp.karnataka.gov.in** ಮುಖಾಂತರ **ದಿನಾಂಕ: 26.07.2023** ರಿಂದ **02.08.2023 ರ 17.00 ಗಂಟೆವರೆಗೆ** ಅರ್ಹತೆ ದಾಖಲೆಗಳನ್ನು ಸಲ್ಲಿಸಬಹುದಾಗಿದ್ದು, ತಾಂತ್ರಿಕವಾಗಿ ಅರ್ಹತೆಗೊಳ್ಳುವ ಬಿಡ್ಡುದಾರರು **ದಿನಾಂಕ 09.08.2023** ರಂದು ನಡೆಯುವ ನೈಜ ಬಿಡ್‌ನಲ್ಲಿ **ಬೆಳಿಗ್ಗೆ 11.00** ರಿಂದ **ಸಂಜೆ 17.00** ಗಂಟೆಯರವರೆಗೆ ಭಾಗವಹಿಸಬಹುದಾಗಿರುತ್ತದೆ. ಅರ್ಹತೆಯನ್ನು ಕುರಿತಂತೆ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಬ್ಯಾಂಕಿನ ಮೊಹರು ಮತ್ತು ಸಹಿಯೊಂದಿಗೆ Up Load ಮಾಡಬೇಕು.

ಟೆಂಡರ್‌ಗಳು: E-Portal ನಲ್ಲಿ ಮಾತ್ರ ಇರತಕ್ಕದ್ದು.

Period	>= 200 crore
9 Months 1 day < = 1 Year	

ಬಡ್ಡಿದರವು ದಿನಾಂಕ: 30.08.2023 ರವರೆಗೆ ಚಾಲ್ತಿಯಲ್ಲಿರಬೇಕು.

ಪ್ರಾಧಿಕಾರದ ಅವಶ್ಯಕತೆ ಹಾಗೂ ಹಿತಾಸಕ್ತಿಯ ಅನುಗುಣವಾಗಿ ಅಥವಾ ಭಾಗಶ: ಠೇವಣಿ ಇರಿಸುವ ಬಗ್ಗೆ ಸಕ್ಷಮ ಪ್ರಾಧಿಕಾರವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ. ಈ ಸಂಬಂಧ ಯಾವುದೇ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿರುವ ಸಮಯದಲ್ಲಿ ಅಥವಾ **E-Bidding** ನಲ್ಲಿ ಯಾವುದಾದರು ಬದಲಾವಣೆ ಇದ್ದಲ್ಲಿ http://www.kppp.karnataka.gov.in ರಲ್ಲಿ ತಿಳಿಸುವ ಮಾಹಿತಿಯು ಅಂತಿಮವಾಗಿರುತ್ತದೆ.

ಸಹಿ/– ಅಧೀಕ್ಷಕ ಅಭಿಯಂತರರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012. ದೂರವಾಣಿ: 080–23460460 (5 ಲೈನ್ಸ್), ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–01/2023 ದಿನಾಂಕ: 28–07–2023

ಡಿಪ್ಲೊಮಾ ಧಾರಕರಿಗೆ ಹಗಲು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಡಿಪ್ಲೊಮಾ ಸಾಮಾನ್ಯ ಪ್ರವೇಶ ಪರೀಕ್ಷೆ–2023

ಸರ್ಕಾರದ ಆದೇಶ ಸಂಖ್ಯೆ ಇಡಿ 88 ಡಿಟಿಇ 2022 ಬೆಂಗಳೂರು ದಿನಾಂಕ 14–07–2022 ಅನ್ವಯ ಮೂರು ವರ್ಷಗಳ ಡಿಪ್ಲೊಮಾ ಇಂಜಿನಿಯರಿಂಗ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿ ಅರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳು ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ನೇರವಾಗಿ ಯಾವುದೇ ಇಂಜಿನಿಯರಿಂಗ್ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಆದೇಶಿಸಿದೆ. ಸರ್ಕಾರದ ಆದೇಶದ ಅನ್ವಯ 2023–24ನೇ ಸಾಲಿಗೆ ಪ್ರಾಧಿಕಾರವು ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ "ಹಗಲು ಇಂಜಿನಿಯರಿಂಗ್ ಕಾಲೇಜುಗಳ" ಪ್ರವೇಶಾತಿಗೆ ಅರ್ಹ ಡಿಪ್ಲೊಮಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು, ಲ್ಯಾಟರಲ್ ಎಂಟ್ರಿ ಮೂಲಕ ಈ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆಯಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ 2023ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು. ಆರ್ಕಿಟೆಕ್ಚರ್ ಪ್ರವೇಶಕ್ಕೆ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ನವರು ನಡೆಸಿದ NATA-2023 ಪರೀಕ್ಷೆಗೆ ಹಾಜರಾಗಿ valid NATA score ಅನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ಆನ್‌ಲೈನ್ ಮೂಲಕ ನೋಂದಣಿ ಮಾಡಿ ಅರ್ಜಿ ಸಲ್ಲಿಸಿ ಶುಲ್ಕವನ್ನು ಪಾವತಿಸಬೇಕು.

ಶೈಕ್ಷಣಿಕ ವಿದ್ಯಾರ್ಹತೆ: ಮೇಲಿನ ಎಲ್ಲಾ ಕೋರ್ಸ್‌ಗಳ ಪ್ರವೇಶಕ್ಕೆ ವಿವರವಾದ ಅರ್ಹತೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು, ಯಾವುದೇ ಕೋರ್ಸಿಗೆ ಅರ್ಜಿ ಸಲ್ಲಿಸುವ ಮೊದಲು ಅರ್ಹತಾ ವಿವರವನ್ನು ಪರಿಶೀಲಿಸಲು ಕೋರಲಾಗಿದೆ.

ಪರಿಷ್ಕೃತ ಪಠ್ಯಕ್ರಮ: ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ನೀಡಿರುವ ಡಿಸಿಇಟಿ – 2023ರ ಪರೀಕ್ಷೆಯ ಪರಿಷ್ಕೃತ ಪಠ್ಯಕ್ರಮಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ (ಎಲ್ಲಾ ಡಿಪ್ಲೊಮಾ ವಿಭಾಗಗಳಿಗೆ ಸಾಮಾನ್ಯವಾದದು).

i.	ನೋಂದಣಿ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ	31–07–2023 ಬೆ.11.00 ರಿಂದ
ii.	ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	13–08–2023 ರಾತ್ರಿ 11.59 ರವರೆಗೆ
iii.	ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	14–08–2023 ಸಂಜೆ 6.00 ರವರೆಗೆ
iv.	ಡಿಸಿಇಟಿ–2023ಕ್ಕೆ ಪ್ರವೇಶ ಪತ್ರವನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡುವುದು	ನಂತರ ತಿಳಿಸಲಾಗುವುದು.

ಸೂಚನೆ:

- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಡಿಪ್ಲೊಮಾ ಸಿಇಟಿ–2023ಕ್ಕೆ ದಾಖಲಿಸಿದ ಎಲ್ಲಾ ಮಾಹಿತಿಗಳನ್ನು ಅಂತಿಮ ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಮಾಹಿತಿಯೇ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ಆಧಾರವಾಗಿರುತ್ತದೆ ಹಾಗೂ ಯಾವುದೇ ಕಾರಣಕ್ಕೂ ದಾಖಲಿಸಿದ ಮಾಹಿತಿಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
- **ಡಿಪ್ಲೊಮಾ ಸಿಇಟಿ–2023 ರ ಅರ್ಜಿ ನಮೂನೆಯಲ್ಲಿ ಜಾತಿ / ವರ್ಗ ಮತ್ತು ವಾರ್ಷಿಕ ಆದಾಯದ ಬಗ್ಗೆ ಒದಗಿಸಿರುವ ಮಾಹಿತಿಯು ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವುದಕ್ಕೆ / ಸೀಟು ಆಯ್ಕೆ ಮಾಡುವುದಕ್ಕೆ ಪರಿಗಣಿಸಲಾಗುವುದು ಮತ್ತು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.**

2023 ರ ಡಿಪ್ಲೊಮಾ ಸಾಮಾನ್ಯ ಪ್ರವೇಶ ಪರೀಕ್ಷೆಯ ವೇಳಾಪಟ್ಟಿ

ದಿನಾಂಕ	ವಾರ	ವಿಷಯ (ಎಲ್ಲಾ ಪ್ರೋಗ್ರಾಂಗಳಿಗೆ)	ಸಮಯ	ಅಂಕಗಳು
10–09–2023 ಭಾನುವಾರ		a. Engineering Mathematics b. Statistics & Analytics c. IT Skills d. Fundamentals of Electrical and Electronics engineering e. Project Management Skills	ಬೆ. 10.00 ರಿಂದ ಮ. 1.00 (ಅವಧಿ–3.00 ಗಂಟೆಗಳು)	100
		ಕನ್ನಡ ಭಾಷಾ ಪರೀಕ್ಷೆ ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ (ಬೆಂಗಳೂರಿನಲ್ಲಿ ಮಾತ್ರ)	ಮ. 3.00 ರಿಂದ ಸಂ 4.00	50


ವಿ.ಸೂ. ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಸೂಚಿಸಿದೆ.

ಸಹಿ/–
(ಎಸ್. ರಮ್ಯ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/713/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ತಪ್ಪೆಸಗಲು ಹಲವು ಮಾರ್ಗಗಳಿರುತ್ತವೆ. ಆದರೆ ಸರಿದಾರಿ ಒಂದೇ. ಹೀಗಾಗಿಯೇ ಸೋಲುವುದು ಸುಲಭ, ಯಶಸ್ಸು ಪಡೆಯುವುದು ಕಷ್ಟ. **–ಅರಿಸ್ಟಾಟಲ್**

ವ್ಯಾಜ್ಯ ಇತ್ಯರ್ಥಕ್ಕೆ ಮಧ್ಯಸ್ಥಿಕೆ ಕೇಂದ್ರದ ನಡೆ ಸ್ವಾಗತಾರ್ಹ

ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿರುವ 'ಮಧ್ಯಸ್ಥಿಕೆ ಮಸೂದೆ' ಸಂಸತ್ತಿನ ಮುಂಗಾರು ಅಧಿವೇಶನದ ಸಂದರ್ಭದಲ್ಲಿಯೇ ಮಂಡನೆ ಆಗುವ ನಿರೀಕ್ಷೆ ಇದೆ. ವ್ಯಾಜ್ಯಗಳನ್ನು ಕೋರ್ಟ್‌ನಲ್ಲಿ ಬಗೆಹರಿಸಿಕೊಳ್ಳುವುದರ ಬದಲು, ಮಧ್ಯಸ್ಥಿಕೆ ಮೂಲಕ ಅವುಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಈ ಮಸೂದೆಯು ಉತ್ತೇಜನ ನೀಡುವ ಉದ್ದೇಶ ಹೊಂದಿದೆ. ಮಧ್ಯಸ್ಥಿಕೆ ಮೂಲಕ ಕೈಗೊಂಡ ತೀರ್ಮಾನವನ್ನು ಜಾರಿಗೆ ತರುವ ವ್ಯವಸ್ಥೆ ರೂಪಿಸುವುದು ಹಾಗೂ ಆನ್‌ಲೈನ್ ಮೂಲಕ ಮಧ್ಯಸ್ಥಿಕೆ ನಡೆಸುವುದಕ್ಕೆ ಅವಕಾಶ ಕಲ್ಪಿಸುವ ಅಂಶವೂ ಈ ಮಸೂದೆಯಲ್ಲಿ ಇದೆ. ವ್ಯಾಜ್ಯಗಳನ್ನು ಇತ್ಯರ್ಥಪಡಿಸುವುದಕ್ಕೆ ಮಧ್ಯಸ್ಥಿಕೆಯ ಮೊರೆ ಹೋಗುವ ವಿಚಾರವು ದೇಶದಲ್ಲಿ ವರ್ಷಗಳಿಂದ ಚರ್ಚೆಯಲ್ಲಿದೆ. ವ್ಯಾಜ್ಯಗಳು ಕೋರ್ಟ್ ಮೆಟ್ಟಿಲೇರುವ ಮೊದಲು, ಮಧ್ಯಸ್ಥಿಕೆಯ ಮೂಲಕ ಅವುಗಳನ್ನು ಇತ್ಯರ್ಥಪಡಿಸಲು ಸಾಧ್ಯವೇ ಎಂಬ ಪ್ರಯತ್ನವು ಕಡ್ಡಾಯವಾಗಿ ನಡೆಯುವಂತಾಗಬೇಕು ಎನ್ನುವ ಸಲಹೆಗಳು ಇವೆ. ಕಂಪನಿಗಳ ಕಾಯ್ದೆಯು ವ್ಯಾಜ್ಯ ಪರಿಹಾರಕ್ಕೆ ಮಧ್ಯಸ್ಥಿಕೆಯ ಮೊರೆ ಹೋಗಬಹುದು ಎನ್ನುತ್ತದೆ. ಆದರೆ ಮಧ್ಯಸ್ಥಿಕೆಗಾಗಿ ಪ್ರತ್ಯೇಕ ಕಾಯ್ದೆ ದೇಶದಲ್ಲಿ ಇಲ್ಲ. ಈ ಕೊರತೆಯನ್ನು ಹೊಸ ಮಸೂದೆಯು ತುಂಬಬಹುದು. ಸಂಸತ್ತಿನ ಸ್ಥಾಯಿ ಸಮಿತಿಯೊಂದು ನೀಡಿದ್ದ ಕೆಲವು ಶಿಫಾರಸುಗಳನ್ನು ಪರಿಗಣಿಸಿ ಹೊಸ ಮಸೂದೆಯನ್ನು ಸಂಪುಟವು ಅನುಮೋದಿಸಿದೆ. ಈ ಮಸೂದೆಯು ಕಾಯ್ದೆಯಾಗಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದಲ್ಲಿ ದೇಶದ ನ್ಯಾಯದಾನ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳು ಆಗಬಹುದು.



ಈ ಮಸೂದೆಯು ಕಾಯ್ದೆಯಾಗಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದಲ್ಲಿ, ದೇಶದ ನ್ಯಾಯದಾನ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳು ಆಗಬಹುದು

ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳುವುದಕ್ಕೆ ಮಧ್ಯಸ್ಥಿಕೆಯು ಕಡಿಮೆ ವೆಚ್ಚದ ಹಾಗೂ ಪರಿಣಾಮಕಾರಿಯಾದ ವ್ಯವಸ್ಥೆ. ನ್ಯಾಯಾಲಯಗಳಲ್ಲಿ ವಿಚಾರಣೆಯ ಹಂತದಲ್ಲಿ ಇರುವ ಪ್ರಕರಣಗಳ ಸಂಖ್ಯೆ ಲಕ್ಷಗಳಷ್ಟು ಇದೆ. ಕೋರ್ಟ್‌ಗಳಲ್ಲಿ ಪ್ರಕರಣಗಳು ಇತ್ಯರ್ಥವಾಗುವ ವೇಗ ಇದೇ ಮಟ್ಟದಲ್ಲಿ ಇದ್ದರೆ, ಇದುವರೆಗಿನ ಪ್ರಕರಣಗಳನ್ನು ಇತ್ಯರ್ಥಪಡಿಸಲು ದಶಕಗಳೇ ಬೇಕಾಗಬಹುದು. ಈಗ ಸಂಪುಟದ ಅನುಮೋದನೆ ಪಡೆದಿರುವ ಮಸೂದೆಯು ವ್ಯಾಜ್ಯವನ್ನು ಕೋರ್ಟ್‌ಗೆ ಒಯ್ಯುವ ಮೊದಲು ಮಧ್ಯಸ್ಥಿಕೆ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವೇ ಎಂಬ ಪ್ರಯತ್ನ ನಡೆಸಬೇಕು ಎನ್ನುತ್ತದೆ; ಮಧ್ಯಸ್ಥಿಕೆಯ ಯತ್ನವು ಐಚ್ಛಿಕ ಎಂದು ಹೇಳುತ್ತದೆ. ಏಕೆಂದರೆ ಮಧ್ಯಸ್ಥಿಕೆಯನ್ನು ಕಡ್ಡಾಯ ಮಾಡುವುದು, ನ್ಯಾಯಾಂಗದ ಮೊರೆ ಹೋಗುವುದಕ್ಕೆ ಅಡ್ಡಿ ಎಂದು ಪರಿಗಣಿತವಾಗಿ ಬಿಡಬಹುದು. ಆ ರೀತಿ ಮಾಡುವುದಕ್ಕೆ ಕಾನೂನು ಅವಕಾಶ ಕೊಡುವುದಿಲ್ಲ. ಮಸೂದೆಯ ಪ್ರಕಾರ, ಮಧ್ಯಸ್ಥಿಕೆ ಪ್ರಕ್ರಿಯೆಗಳನ್ನು 180 ದಿನಗಳಲ್ಲಿ ಪೂರ್ಣಗೊಳಿಸಬೇಕು. ಮಸೂದೆಯ ಈ ಮೊದಲಿನ ಕರಡು ಪ್ರತಿಯಲ್ಲಿ, ಮಧ್ಯಸ್ಥಿಕೆ ಪ್ರಕ್ರಿಯೆಗೆ ಹೆಚ್ಚುವರಿಯಾಗಿ ಆರು ತಿಂಗಳ ಕಾಲಾವಕಾಶ ಕಲ್ಪಿಸುವ ಪ್ರಸ್ತಾವ ಇತ್ತು. ಆದರೆ, ವ್ಯಾಜ್ಯ ಇತ್ಯರ್ಥಪಡಿಸುವುದನ್ನು ವಿಳಂಬಗೊಳಿಸಲು ಇದನ್ನು ಬಳಸಿಕೊಳ್ಳಬಾರದು ಎಂಬ ಉದ್ದೇಶದಿಂದ ಹೆಚ್ಚುವರಿ ಕಾಲಾವಕಾಶಕ್ಕೆ ಅವಕಾಶವನ್ನು ನಿರಾಕರಿಸಲಾಗಿದೆ. ಮಧ್ಯಸ್ಥಿಕೆಗೆ ಅಗತ್ಯವಿರುವ ಮೂಲಸೌಕರ್ಯವನ್ನು ದೇಶದ ಎಲ್ಲೆಡೆ ಕಲ್ಪಿಸಲಾಗುತ್ತದೆ ಎಂದು ಮಸೂದೆ ಹೇಳುತ್ತದೆ. ಅಖಿಲ ಭಾರತ ಮಟ್ಟದಲ್ಲಿ ಮಧ್ಯಸ್ಥಿಕೆ ಮಂಡಳಿಯೊಂದು ರಚನೆಯಾಗುತ್ತದೆ. ಮಧ್ಯಸ್ಥಿಕೆದಾರರ ನೋಂದಣಿ, ಮಧ್ಯಸ್ಥಿಕೆ ಸೇವೆ ಒದಗಿಸುವವರಿಗೆ ಮಾನ್ಯತೆ ನೀಡುವ ಕೆಲಸ, ಮಧ್ಯಸ್ಥಿಕೆಯ ಬಗ್ಗೆ ತರಬೇತಿ ನೀಡುವ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು ಈ ಮಂಡಳಿಯ ಕೆಲಸ.

ಅಂತರರಾಷ್ಟ್ರೀಯ ಮಧ್ಯಸ್ಥಿಕೆಗಳು ಭಾರತದಲ್ಲಿ ನಡೆದಲ್ಲಿ, ಅದಕ್ಕೆ ಮಾನ್ಯತೆ ನೀಡುವ ಅಂಶ ಕೂಡ ಮಸೂದೆಯಲ್ಲಿ ಇದೆ. ಭಾರತದ ಸಮಾಜ, ಇಲ್ಲಿನ ಸರ್ಕಾರಿ ವ್ಯವಸ್ಥೆ ಹಾಗೂ ಇಲ್ಲಿನ ಸಂಸ್ಥೆಗಳು ಸಣ್ಣ ತಕರಾರುಗಳನ್ನು ಕೂಡ ಕೋರ್ಟ್‌ಗೆ ಒಯ್ಯುವ ಪ್ರವೃತ್ತಿ ಹೊಂದಿವೆ. ಮಧ್ಯಸ್ಥಿಕೆ ಮಸೂದೆಯು ಈ ಪ್ರವೃತ್ತಿಯನ್ನು ನಿರುತ್ತೇಜಿಸುತ್ತದೆ ಎಂದು ಭಾವಿಸಬಹುದು. ಮದ್ರಾಸ್ ಹೈಕೋರ್ಟ್ ತಮಿಳುನಾಡಿನಲ್ಲಿ ಮಧ್ಯಸ್ಥಿಕೆ ವ್ಯವಸ್ಥೆಯೊಂದನ್ನು ಆರಂಭಿಸಿದೆ. ಅಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಮಧ್ಯಸ್ಥಿಕೆ ಕೇಂದ್ರ ಇದೆ. ದೇಶದಲ್ಲಿ ಇಂತಹ ವ್ಯವಸ್ಥೆ ಇರುವುದು ತಮಿಳುನಾಡಿನಲ್ಲಿ ಮಾತ್ರ. ಇದು ಆ ರಾಜ್ಯದಲ್ಲಿ ವಿಚಾರಣೆಯ ಹಂತದಲ್ಲಿನ ಪ್ರಕರಣಗಳ ಸಂಖ್ಯೆ ಕಡಿಮೆ ಆಗುವಲ್ಲಿ ನೆರವಾಗಿದೆ. ಹೊಸ ಮಸೂದೆಯು ತಮಿಳುನಾಡಿನಲ್ಲಿ ಸಾಧ್ಯವಾಗಿರುವುದನ್ನು ದೇಶದ ಎಲ್ಲೆಡೆ ಸಾಧ್ಯವಾಗಿಸಬಹುದು. ಆದರೆ, ಈಗಾಗಲೇ ವಿಚಾರಣೆಯ ಹಂತದಲ್ಲಿ ಇರುವ ಪ್ರಕರಣಗಳಿಗೆ ಇದು ಹೇಗೆ ಅನ್ವಯವಾಗುತ್ತದೆ ಎಂಬುದು ಸ್ಪಷ್ಟವಿಲ್ಲ. ಮಧ್ಯಸ್ಥಿಕೆಯ ವ್ಯವಸ್ಥೆಯು ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದನ್ನು ಖಾತರಿಪಡಿಸಬೇಕು. ಆ ವ್ಯವಸ್ಥೆಯು ಜನರ ವಿಶ್ವಾಸವನ್ನು ಸಂಪಾದಿಸಬೇಕು.

ದಿನದ ಟ್ವೀಟ್

ಮೊದಲೇ ಎಚ್ಚೆತ್ತುಕೊಳ್ಳೋಣ



ಪರಿಸರದೊಂದಿಗೆ ಖುಷಿಯಿಂದ ಕಾಲ ಕಳೆಯೋಣ ಮತ್ತು ಮುಂದಿನ ಪೀಳಿಗೆಗಳಿಗಾಗಿ ಅದನ್ನು ಸಂರಕ್ಷಿಸಲು ಕಟಿಬದ್ಧರಾಗೋಣ. ಅದಕ್ಕಾಗಿ ಪ್ರಕೃತಿಯಿಂದ ಎಚ್ಚರಿಕೆಯ ಸಂದೇಶ ಬರುವವರೆಗೂ ಕಾಯುವುದು ಬೇಡ. ವಿಶ್ವ ಪರಿಸರ ಸಂರಕ್ಷಣಾ ದಿನಾಚರಣೆ!

ಹಿಮಾಂಶು ಮಿಶ್ರಾ, ನಿವೃತ್ತ ಐಪಿಎಸ್ ಅಧಿಕಾರಿ

ಕಿಡಿನುಡಿ



ಜಾರಿ ನಿರ್ದೇಶನಾಲಯದ ಮುಖ್ಯಸ್ಥರ ಅವಧಿ ವಿಸ್ತರಣೆ ಅಕ್ರಮ ಎನ್ನುವುದಾದರೆ, ಆ ಅವಧಿಯನ್ನು ಸುಪ್ರೀಂ ಕೋರ್ಟ್ ಇಷ್ಟು ಕಾಲ ವಿಸ್ತರಿಸಲು ಹೇಗೆ ಸಾಧ್ಯ? ಅಕ್ರಮವನ್ನು ಅನುಮೋದಿಸುವುದೇ?

ಕೆ.ಸಿ.ಜೋಸೆಫ್, ಕೇರಳದ ಮಾಜಿ ಸಚಿವ

25 ವರ್ಷಗಳ ಹಿಂದೆ

ಬುಧವಾರ, 29-7-1998

• **ಬೆಲೆ ಏರಿಕೆಗೆ ಉಭಯ ಸದನಗಳಲ್ಲಿ ತರಾಟೆ: ಬಿಜೆಪಿ ವೈಫಲ್ಯ ಖಂಡಿಸಿ ಪ್ರತಿಪಕ್ಷ ಸಭಾತ್ಯಾಗ**

ನವದೆಹಲಿ, ಜುಲೈ 28 (ಪಿಟಿಐ)– ಬೆಲೆ ಹತೋಟಿ ಹಾಗೂ ಕಾನೂನು ಶಾಂತಿ ಪರಿಸ್ಥಿತಿಯನ್ನು ಹತೋಟಿಗೆ ತರುವುದೂ ಸೇರಿದಂತೆ ಎಲ್ಲ ರಂಗಗಳಲ್ಲೂ ವಾಜಪೇಯಿ ನಾಯಕತ್ವದ ಸರ್ಕಾರ ವಿಫಲವಾಗಿದೆ ಎಂದು ಆಪಾದಿಸಿದ ಪ್ರತಿಪಕ್ಷಗಳು ಸಂಸತ್ತಿನ ಎರಡೂ ಸದನಗಳಲ್ಲಿ ಇಂದು ಸಭಾತ್ಯಾಗ ಮಾಡಿದವು.

ಈ ಸರ್ಕಾರ 'ಎಷ್ಟುಬೇಗ ತೊಲಗಿದರೆ ದೇಶದ ಜನರಿಗೆ ಅಷ್ಟು ಒಳ್ಳೆಯದು' ಎಂದು ಘೋಷಿಸುತ್ತ ಸದಸ್ಯರು ಹೊರನಡೆದರು.

ರಾಜಧಾನಿಯಲ್ಲಿ ಕಾಂಗ್ರೆಸ್ ಪಕ್ಷ ಸೋನಿಯಾ ಗಾಂಧಿ ನೇತೃತ್ವದಲ್ಲಿ ಸರ್ಕಾರದ ವಿರುದ್ಧ ಚಳವಳಿಯನ್ನು ಪ್ರಾರಂಭಿಸುತ್ತಿದ್ದಂತೆ ಸದನದ ಒಳಗೆ ಪ್ರತಿಪಕ್ಷ ನಾಯಕ ಶರದ್ ಪವಾರ್ ಅವರು ಶೂನ್ಯವೇಳೆಯಲ್ಲಿ ಸರ್ಕಾರದ ವೈಫಲ್ಯವನ್ನು ಪ್ರಸ್ತಾಪಿಸಿ 'ಈ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಸಮರ್ಥನೆ ಇಲ್ಲ' ಎಂದರು.

• **ಕಾಶ್ಮೀರದಲ್ಲಿ ಮತ್ತೆ 16 ಜನರ ಹತ್ಯೆ**

ದೋಡಾ, ಜುಲೈ 28 (ಪಿಟಿಐ, ಯುಎನ್‌ಐ)– ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯ ಎರಡು ಗ್ರಾಮಗಳಲ್ಲಿ ಉಗ್ರಗಾಮಿಗಳು ಇಂದು ಬೆಳಿಗ್ಗೆ ಇಬ್ಬರು ಮಹಿಳೆಯರೂ ಸೇರಿ 16 ಮಂದಿ ಹಿಂದೂಗಳನ್ನು ಹತ್ಯೆ ಮಾಡಿದ್ದಾರೆ.

ಈ ನಡುವೆ ಜಮ್ಮು ಪ್ರದೇಶದಲ್ಲಿ ಕಳೆದ ರಾತ್ರಿ ನಡೆದ ಮೂರು ಪ್ರತ್ಯೇಕ ಚಕಮಕಿಗಳಲ್ಲಿ 11 ಉಗ್ರರು ಹತರಾಗಿದ್ದಾರೆ. ಇಬ್ಬರು ಸೈನಿಕರು ಹಾಗೂ ನ್ಯಾಷನಲ್ ಕಾನ್ಫರೆನ್ಸಿನ ಧುರೀಣರೊಬ್ಬರು ಮೃತಪಟ್ಟಿದ್ದಾರೆ. ಇದರಿಂದ ಕಳೆದ ರಾತ್ರಿಯಿಂದ ಈ ಪ್ರದೇಶದಲ್ಲಿ ಸಾವಿನ ಸಂಖ್ಯೆ 31ಕ್ಕೆ ಏರಿದೆ.

50 ವರ್ಷಗಳ ಹಿಂದೆ

ಭಾನುವಾರ, 29-7-1973

• **'ಧಾನ್ಯ ಬಚ್ಚಿಡುವವರಿಗೆ ನೆರವಾದ ಎಂ.ಪಿ.ಗಳು, ಶಾಸಕರನ್ನು ಚುನಾವಣೆಗೆ ನಿಲ್ಲಿಸಬೇಡಿ'**

ಲಖನೌ, ಜುಲೈ 28– ಆಹಾರಧಾನ್ಯ ಬಚ್ಚಿಡುವ ಹಾಗೂ ಕಲಬೆರಕೆ ಮಾಡುವ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಡಗಿದ್ದು, ತಪ್ಪಿತಸ್ಥರೆಂದು ಕಂಡುಬರುವ ಸಂಸತ್ತಿನ ಹಾಗೂ ರಾಜ್ಯ ವಿಧಾನಸಭೆಗಳ ಸದಸ್ಯರನ್ನು ಮುಂದಿನ ಚುನಾವಣೆಗೆ ತಮ್ಮ ಉಮೇದುವಾರರನ್ನಾಗಿ ನಿಲ್ಲಿಸಬಾರದೆಂದು ರಾಜಕೀಯ ಪಕ್ಷಗಳಿಗೆ ರಾಷ್ಟ್ರಪತಿ ವಿ.ವಿ.ಗಿರಿ ಅವರು ಇಂದು ಮನವಿ ಮಾಡಿದರು.

ಇಲ್ಲಿ ಗಾಂಧಿ ಭವನವನ್ನು ಉದ್ಘಾಟಿಸಿದ ರಾಷ್ಟ್ರಪತಿ ಅವರು, ಆಹಾರಧಾನ್ಯ ಬಚ್ಚಿಡುವವರನ್ನು ಹಾಗೂ ಆಹಾರ ಕಲಬೆರಕೆ ಮಾಡುವವರನ್ನು ಬಂಧಿಸಬೇಕು ಮತ್ತು ಯಾವುದನ್ನೂ ಗಣಿಸದೆ ಅವರಿಗೆ ಉಗ್ರ ಶಿಕ್ಷೆ ಕೊಡಬೇಕು ಎಂದರು.

• **49 ಕೋಟಿ ರೂಪಾಯಿ ವೆಚ್ಚಕ್ಕೆ ಒಪ್ಪಿಗೆ: ಕಾಳಿ ನದಿ ಯೋಜನೆಯ ದ್ವಿತೀಯ ಹಂತಕ್ಕೆ ಕೇಂದ್ರದ ಅನುಮತಿ**

ಬೆಂಗಳೂರು, ಜುಲೈ 28– ಆರು ವರ್ಷಗಳಲ್ಲಿ, ರಾಜ್ಯದ ವಿದ್ಯುತ್ ಉತ್ಪಾದನೆಯನ್ನು ಬಹುತೇಕಮಟ್ಟಿಗೆ ದ್ವಿಗುಣಗೊಳಿಸಲಿರುವ ಕಾಳಿ ನದಿಯ ಪ್ರಥಮ ಘಟ್ಟದ 49 ಕೋಟಿ ರೂಪಾಯಿಗಳ ದ್ವಿತೀಯ ಹಂತಕ್ಕೆ ಕೇಂದ್ರ ಸರ್ಕಾರ ಮಂಜೂರಾತಿ ನೀಡಿದೆ.

ಈ 'ಸಂತೋಷದ ಸುದ್ದಿ'ಯನ್ನು ಇಂದು ಸಂಜೆ ಅವಸರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಲೋಕೋಪಯೋಗಿ ಹಾಗೂ ವಿದ್ಯುತ್ ಖಾತೆ ಸಚಿವ ಎಚ್.ಎಂ. ಚನ್ನಬಸಪ್ಪ ಅವರು ಪ್ರಕಟಿಸಿ, ಕೇಂದ್ರದ ಸಂಪೂರ್ಣ ಅಂಗೀಕಾರ ಸಿಕ್ಕಿದೆ ಎಂದರು.

ಬೆತ್ತಲಾಗಿಸುವುದು ಪೌರುಷ ಅಲ್ಲ; ಸತ್ಯ, ನ್ಯಾಯವನ್ನು ಎತ್ತಿಹಿಡಿಯುವುದು ಪೌರುಷ

ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ...



ಅನುಸಂಧಾನ

ರವೀಂದ್ರ ಭಟ್ಟ

ಜುಲೈ 26. ಕಾರ್ಗಿಲ್ ವಿಜಯ ದಿವಸ. ಇಡೀ ದೇಶ ಕಾರ್ಗಿಲ್ ಯೋಧರಿಗೆ ನಮನ ಸಲ್ಲಿಸಿದೆ. ವಿಜಯೋತ್ಸವ ಆಚರಿಸಿದೆ. ಹಾಗೆ ಮಾಡಬೇಕಾದುದು ನಮ್ಮ ಕರ್ತವ್ಯವೂ ಹೌದು. ನಮ್ಮ ಸೈನಿಕರು ನಮ್ಮ ಹೆಮ್ಮೆ. ಅದರಲ್ಲಿ ಅನುಮಾನವೇ ಇಲ್ಲ. ಆದರೆ ಇದು ಬರೀ ತೋರಿಕೆಗೆ ಆಗಬಾರದಲ್ಲ. ಕಾರ್ಗಿಲ್ ಯೋಧರಿಗೆ ಕೆಲವರು ನಮಿಸಿದ್ದನ್ನು ನೋಡಿದರೆ ಪುರಂದರದಾಸರ ಪದ್ಯ ನೆನಪಿಗೆ ಬರುತ್ತದೆ. 'ಕುಟಿಲವ ಬಿಡದಿಹ ಕುಜನರು ಮಂತ್ರವ ಪಠನೆಯ ಮಾಡಿದರೇನು ಫಲ, ಸಟೆಯನ್ನಾಡುವ ಮನುಜರು ಮನದಲಿ ವಿಠಲನ ನೆನೆದರೆ ಏನು ಫಲ, ಹೀನ ಕೃತ್ಯಗಳ ಮಾಡುತ ನದಿಯಲಿ ಸ್ನಾನವ ಮಾಡಿದರೇನು ಫಲ' ಎಂದು ದಾಸರು ಕೇಳುತ್ತಾರೆ.

ಕಾರ್ಗಿಲ್ ವಿಜಯೋತ್ಸವದ ದಿನ, ದೂರದ ಮಣಿಪುರದ ಬೆಟ್ಟಗುಡ್ಡಗಳ ನಡುವೆ ಇರುವ ಹಳ್ಳಿಯೊಂದರಲ್ಲಿ ಕಾರ್ಗಿಲ್ ಯೋಧರೊಬ್ಬರು ದುಃಖದ ಮಡುವಿನಲ್ಲಿ ಬಿದ್ದಿದ್ದರು. ತಲೆ ಎತ್ತದೆ ತಮ್ಮ ಅಸಹಾಯಕತೆಯನ್ನು ಹಳಿಯುತ್ತ, ಘೋರ ಘಟನೆಯನ್ನು ನೆನೆಯುತ್ತ ಬಿಕ್ಕಳಿಸುತ್ತಿದ್ದರು. ಗಂಡಾಗಿ ಹುಟ್ಟಿದ್ದಕ್ಕೆ ನಾಚಿಕೆ ಪಡುತ್ತಿದ್ದರು. ಮೇ 4ರಂದು ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲಾಗಿಸಿ ಮೆರವಣಿಗೆ ಮಾಡಿದ ಪ್ರಕರಣ ನಡೆದಿತ್ತು. ಅವರಲ್ಲಿ ಒಬ್ಬರು ಈ ಯೋಧನ ಪತ್ನಿ. ಆ ಘಟನೆಯನ್ನು ನೆನೆದು ಕಾರ್ಗಿಲ್ ಯೋಧ ಹೇಳಿದ ಮಾತುಗಳು ಬಂಡೆಗಳನ್ನೂ ಕರಗಿಸುವಂತಿವೆ. ಸ್ವಲ್ಪವಾದರೂ ಮನುಷ್ಯತ್ವ ಇದ್ದರೆ ಕಣ್ಣೀರು ಹರಿಯುತ್ತದೆ. ಪುರುಷರಾಗಿ ಹುಟ್ಟಿದ ಬಗ್ಗೆಯೇ ಜುಗುಪ್ಸೆ ಮೂಡುತ್ತದೆ.

ಮಣಿಪುರದ ಪ್ರಕರಣ ಇಡೀ ಪುರುಷ ಕುಲಕ್ಕೇ ಅವಮಾನ. ಗಂಡಸರಿಗೆಲ್ಲ ನಾಚಿಕೆ ಹುಟ್ಟಿಸುವಂಥದ್ದು. ತಲೆ ಎತ್ತುವುದಕ್ಕೂ ಮುಜುಗರ ಪಡುವಂಥದ್ದು. ಈ ಘಟನೆ ಎಷ್ಟು ಹೇಯ ಎಂದರೆ, ದೇಶದ ಇತರ ಗಂಡಸರಿಗೂ ತಮ್ಮ ತಾಯಿಯ, ಪತ್ನಿಯ, ಸಹೋದರಿಯರ ಮುಖ ನೋಡುವುದಕ್ಕೂ ಹಿಂಜರಿಕೆ ತರುವಂತಹದ್ದು. ಅವಮಾನದಿಂದ ಬೇಯುವಂತಹದ್ದು. ನಿರ್ಭಯಾ ಪ್ರಕರಣ ನಡೆದಾಗಲೂ ದೇಶ ಇಂತಹುದೇ ಸ್ಥಿತಿ ಎದುರಿಸಿತ್ತು. ದೇಶದಲ್ಲಿ ಆಗಾಗ ಇಂತಹ ನಾಚಿಕೆಗೇಡಿನ ಕೃತ್ಯ ನಡೆಯುತ್ತಲೇ ಇರುತ್ತದೆ. ಆಗ ಕೊಂಚ ದಿನಗಳು ನಾವು ಮರುಗುತ್ತೇವೆ. ಮತ್ತೆ ನಮ್ಮ ಪುರುಷತ್ವ ವಿಜೃಂಭಿಸಲು ಆರಂಭಿಸುತ್ತದೆ. ಯಾಕೆಂದರೆ ಈ ನೆಲದಲ್ಲಿ ಬಿತ್ತಿದ್ದು ಪುರುಷತ್ವವನ್ನೇ ವಿನಾ ಹೆಣ್ತನವನ್ನಲ್ಲ!

ಅಸ್ಸಾಂ ರೆಜಿಮೆಂಟ್‌ನ ಸುಬೇದಾರ್ ಆಗಿದ್ದ ಮಣಿಪುರದ ಆ ಯೋಧ ಕಾರ್ಗಿಲ್ ಯುದ್ಧದಲ್ಲಿ ಮುಂದೆ ನಿಂತು ಹೋರಾಡಿದವರು. ಶ್ರೀಲಂಕಾಕ್ಕೆ ಶಾಂತಿ ಪಾಲನಾ ಪಡೆ ಕಳಿಸಿದಾಗ ಅಲ್ಲಿಗೂ ತೆರಳಿ ಶಾಂತಿ ಸ್ಥಾಪನೆಗೆ ಯತ್ನಿಸಿದವರು. ಅಂತಹ ವ್ಯಕ್ತಿ ಈಗ ತಮ್ಮ ಸ್ಥಿತಿಗೆ ಮಮ್ಮಲ ಮರುಗಿ 'ಯುದ್ಧಭೂಮಿಗಿಂತ ನಾನಿರುವ ಸ್ಥಳದ ಸ್ಥಿತಿಯೇ ಭೀಕರವಾಗಿದೆ' ಎನ್ನುತ್ತಾರೆ. 'ಕಾರ್ಗಿಲ್ ಯುದ್ಧದಲ್ಲಿ ನಾನು ದೇಶಕ್ಕಾಗಿ ಹೋರಾಡಿದೆ. ಯುದ್ಧ ಗೆದ್ದೆ. ಆದರೆ ನನ್ನ ಸ್ವಂತ ಗ್ರಾಮದಲ್ಲಿ ಮನೆ ಉಳಿಸಿಕೊಳ್ಳಲು ಆಗಲಿಲ್ಲ. ಪತ್ನಿಗೆ ರಕ್ಷಣೆ ನೀಡಲು ಆಗಲಿಲ್ಲ. ಗ್ರಾಮದ ಇತರರನ್ನು ರಕ್ಷಿಸಲು ಆಗಲಿಲ್ಲ' ಎಂದು ವೇದನೆಯಿಂದ ಹೇಳಿಕೊಂಡಿದ್ದಾರೆ. ಮಾಜಿ ಯೋಧನೊಬ್ಬನ ಕಣ್ಣೀರು ಒರೆಸದೆ ಕಾರ್ಗಿಲ್ ವಿಜಯೋತ್ಸವ ಆಚರಿಸಿದರೇನು ಫಲ?

ಮಣಿಪುರ ಪ್ರಕರಣದ ಸಂತ್ರಸ್ತೆಯರನ್ನು ಆ ರಾಜ್ಯದ ಮುಖ್ಯಮಂತ್ರಿ ಭೇಟಿ ಮಾಡಿ ಸಾಂತ್ವನ ಹೇಳಲು ಮುಂದಾಗದಿರುವುದು ಅತ್ಯಂತ ದುರದೃಷ್ಟಕರ. ರಾಜ್ಯದಲ್ಲಿ ಹಿಂಸಾಚಾರ ಆರಂಭವಾಗಿ ಎರಡೂವರೆ ತಿಂಗಳಾದರೂ ಇನ್ನೂ ತಹಬಂದಿಗೆ ಬಂದಿಲ್ಲ. 'ನಾವು ಸರ್ಜಿಕಲ್ ಸ್ಟ್ರೈಕ್ ಮಾಡುತ್ತೇವೆ' ಎನ್ನುವವರೂ 'ನಿಮ್ಮ ಗಡಿಯೊಳಗೆ ನುಗ್ಗಿ ಬಗ್ಗುಬಡಿಯುತ್ತೇವೆ' ಎಂದು ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಡುವವರೂ ಏನನ್ನೂ ಮಾಡುತ್ತಿಲ್ಲ. ಇದಕ್ಕಾಗಿಯೂ ನಾವು ನಾಚಿಕೆ ಪಡಬೇಕಿದೆ. ಮಹಿಳೆಯರ ರಕ್ಷಣೆಗಾಗಿಯೇ ಇರುವ ರಾಷ್ಟ್ರೀಯ ಮಹಿಳಾ ಆಯೋಗ ಸಹ ತುಟಿಪಿಟಕ್ಕೆನ್ನುತ್ತಿಲ್ಲ. 'ವಿಶ್ವಗುರು' ಕೂಡ ಮಾತನಾಡುತ್ತಿಲ್ಲ. ಬಾಯಿಮಾತಿನ ಉಪಚಾರ ಸಾಕಾಗುತ್ತಿಲ್ಲ. ಹಿಂಸಾಚಾರ ಹತ್ತಿಕ್ಕಲು ನಾವೀಗ ಪೌರುಷ ತೋರಬೇಕಿದೆ.

ಮಹಿಳೆಯರ ಬೆತ್ತಲೆ ಮೆರವಣಿಗೆಯ ನಂತರ, ಗಂಡಸರು ಬೆತ್ತಲಾಗುತ್ತಲೇ ಇದ್ದಾರೆ. ಗಲಭೆಯನ್ನು ಹತ್ತಿಕ್ಕುವ ಬದಲು, ರಾಜಸ್ಥಾನದಲ್ಲಿಯೂ ಮಹಿಳೆಯರ ಬೆತ್ತಲೆ ಮೆರವಣಿಗೆ ನಡೆದಿದೆ, ಪಶ್ಚಿಮ ಬಂಗಾಳದಲ್ಲಿಯೂ ಇಂತಹ ಪ್ರಕರಣಗಳು ನಡೆಯುತ್ತಿವೆ ಎಂದು ದೂರುವುದು ಇನ್ನೂ ನಾಚಿಕೆಗೇಡಿನ ವಿಷಯ. ದೇಶದ ಯಾವುದೇ ಭಾಗದಲ್ಲಿ ನಡೆದರೂ ಅದು ತಪ್ಪು. ಎಲ್ಲಿಯೂ ಇಂತಹ ಪ್ರಕರಣಗಳು ನಡೆಯದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದು ನಮ್ಮ ಆದ್ಯತೆಯಾಗಬೇಕು. ಎಲ್ಲಿಯಾದರೂ ಒಂದು ಹೇಯ ಕೃತ್ಯ ನಡೆದರೆ ಅದನ್ನು ಖಂಡಿಸಿ, ಮುಂದೆ ಅಂತಹದ್ದು ಮರುಕಳಿಸದಂತೆ ನೋಡಿಕೊಳ್ಳಬೇಕೇ ವಿನಾ 'ನಿಮ್ಮಲ್ಲಿ ಇಂತಹ ಘಟನೆಗಳು ಆಗುತ್ತಿಲ್ಲವೇ?' ಎಂದು ಕೇಳುವುದು ಹೃದಯಹೀನರ ಮಾತಾದೀತು. ರಾಜಕೀಯದ ಮಾಯೆಯಲ್ಲಿ ಮುಳುಗಿರುವ ಈ ಹೊತ್ತಿನಲ್ಲಿ ಮಣಿಪುರಕ್ಕಾಗಿ ಮರುಗುವ ಮನಸ್ಸನ್ನು ಕಡ ತರುವುದು ಎಲ್ಲಿಂದ?

ಮಣಿಪುರ ಎನ್ನುವುದು ಒಂದು ಪುಟ್ಟ ಕಣಿವೆ ರಾಜ್ಯ. ಅಲ್ಲಿರುವವರು ಬಹುತೇಕ ಬುಡಕಟ್ಟು ಜನಾಂಗದವರು. ಮೈತೇಯಿ ಜನಾಂಗದವರು ಬಹುಸಂಖ್ಯಾತರಾದರೆ, ಕುಕಿ ಮತ್ತು ನಾಗಾಗಳು ಅಲ್ಪಸಂಖ್ಯಾತರು. ಮೈತೇಯಿ ಜನಾಂಗದ ಮೀಸಲಾತಿ ವಿಚಾರ ಹಿಂಸಾಚಾರಕ್ಕೆ ಮೂಲ. ಮೀಸಲಾತಿ ಪರ ಮತ್ತು ವಿರುದ್ಧ ಹೋರಾಟ ನಡೆಯುತ್ತಿದೆ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಎಲ್ಲರ ಹಕ್ಕು. ಪ್ರತಿಭಟನೆ ಮಾಡಲಿ, ಆದರೆ ಹೆಣ್ಣನ್ನು ಅವಮಾನಿಸುವ ನೀಚತನ ಇದೆಯಲ್ಲ ಅದು ನಾಗರಿಕ ಸಮಾಜ ತಲೆತಗ್ಗಿಸುವ ವಿಚಾರ. ಅದಕ್ಕಿಂತಲೂ ಭೀಕರ ಎಂದರೆ ಅದನ್ನು ಬೆಂಬಲಿಸುವುದು. ಇನ್ನೂ ಘೋರ ಎಂದರೆ, ಪ್ರಭುಗಳು ಅದನ್ನು ನಿಯಂತ್ರಿಸದೆ ರಾಜಕಾರಣಕ್ಕೆ ಬಳಸಿಕೊಳ್ಳುವುದು.


ಯುದ್ಧ ಮತ್ತು ಶಾಂತಿ ಯಾವುದೇ ಇರಲಿ, ಎಲ್ಲ ಕಾಲದಲ್ಲಿಯೂ ಶೋಷಣೆಗೆ ಒಳಗಾಗುವುದು ಮಹಿಳೆಯೆ. ಅದಕ್ಕೆ ಕಾರಣ ನಮ್ಮ ಜೀವನ ಪದ್ಧತಿ. ನಾವು ಗಂಡಸನ್ನು ಬೈಯ್ಯುವಾಗಲೂ ಮಹಿಳೆಗೆ ಅವಮಾನಿಸಿಯೇ ಬೈಯ್ಯುತ್ತೇವೆ. ನಮ್ಮ ಬೈಗುಳಗಳೆಲ್ಲ ಮಹಿಳಾಕೇಂದ್ರಿತ ಆಗಿವೆ. ಅತ್ಯಂತ ನಾಗರಿಕ ಸಮಾಜ ಎಂದು ಬೆನ್ನು ತಟ್ಟಿಕೊಳ್ಳುವ ನಮಗೆ ಇದನ್ನು ಬದಲಾಯಿಸಲು ಇನ್ನೂ ಸಾಧ್ಯವಾಗಿಲ್ಲ. ಸಮಾಜವು ಪುರುಷಕೇಂದ್ರಿತ, ಬೈಗುಳವು ಮಹಿಳಾಕೇಂದ್ರಿತ. ಇದೆಂತಹ ವಿಪರ್ಯಾಸ? ಸಿಟ್ಟು, ದ್ವೇಷ, ಜಗಳ, ಘರ್ಷಣೆ, ಯುದ್ಧ ಎಲ್ಲವೂ ಪುರುಷ ಅಹಂಕಾರದ ಫಲ. ಶಿಕ್ಷೆ ಮಾತ್ರ ಹೆಣ್ಣು ಕುಲಕ್ಕೆ. ಇದು ಮಹಾಭಾರತದ ಕಾಲಕ್ಕೂ ರಾಮಾಯಣದ ಕಾಲಕ್ಕೂ ಇಂದಿನ 21ನೇ ಶತಮಾನಕ್ಕೂ ಬದಲಾಗಲೇ ಇಲ್ಲ.

ಭಾರತದಲ್ಲಿ ಮರದ ಬೊಂಬೆಗೆ ಅಲಂಕಾರ ಮಾಡಿ ಅದನ್ನು ದೇವಿ ಎಂದು ಪೂಜಿಸಿ ಮೆರವಣಿಗೆ ಮಾಡಲಾಗುತ್ತದೆ. ಅದೇ ಜೀವಂತ ಹೆಣ್ಣನ್ನು ಬೆತ್ತಲೆ ಮಾಡಿ ರಸ್ತೆಯಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಛೇ, ಇದೆಂತಹ ಸಮಾಜ?

ನಮ್ಮ ಮನೆಯಲ್ಲಿಯೂ ಹೆಣ್ಣುಮಕ್ಕಳ ಮುಖವನ್ನು ನೋಡುವ ಧೈರ್ಯ ಬರಬೇಕು ಎಂದರೆ, ನೈತಿಕ ಸಮಾಜವೊಂದನ್ನು ಕಟ್ಟಬೇಕಿದೆ. ಸಾವಿರ ಸಾವಿರ ವರ್ಷಗಳಿಂದ ನಮ್ಮ ಮನೆಗಳಲ್ಲಿ ಹೆಣ್ಣುಮಕ್ಕಳ ನಡವಳಿಕೆ ಹೇಗಿರಬೇಕು ಎಂದು ಕಲಿಸಿಕೊಡುತ್ತಾ ಬಂದಿದ್ದೇವೆ. ಎಲ್ಲಿ ತಲೆ ಎತ್ತಬೇಕು, ಎಲ್ಲಿ ತಲೆ ತಗ್ಗಿಸಬೇಕು, ಹೇಗೆ ಸಂಸ್ಕಾರಯುತವಾಗಿ ಇರಬೇಕು ಎಂದು ಅಡಿಗಡಿಗೆ ಆಕೆಗೆ ಹೇಳುತ್ತಾ ಬಂದಿದ್ದೇವೆ. ಇನ್ನು ಮುಂದಿನ ಸಾವಿರ ವರ್ಷ, ನಮ್ಮ ಗಂಡುಮಕ್ಕಳು ಹೇಗೆ ನಡೆದುಕೊಳ್ಳಬೇಕು, ಹೆಣ್ಣನ್ನು ಹೇಗೆ ನಡೆಸಿಕೊಳ್ಳಬೇಕು, ಸಮಾಜದಲ್ಲಿ ಹೇಗಿರಬೇಕು, ಸಂಘರ್ಷದ ಕಾಲದಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ಕಲಿಸೋಣ. ಆಗದೇ?



ಚುರುಮುರಿ



ಶಾಲೆ ಸಂಕಟ

• ಮಣ್ಣೆರಾಜು

ಚಟ್ನಿಹಳ್ಳಿ ಸರ್ಕಾರಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು ಶಿಕ್ಷಕರ ಹಾಜರಾತಿ ಪುಸ್ತಕ ಪರಿಶೀಲಿಸಿದರು.

'ಕನ್ನಡ ಶಿಕ್ಷಕ... ಗೈರುಹಾಜರಿ, ಇಂಗ್ಲಿಷ್ ಮೇಷ್ಟ್ರು... ಆ್ಯಬ್ಸೆಂಟ್, ಗಣಿತ, ವಿಜ್ಞಾನ ಟೀಚರ್‌ಗಳೂ ಆ್ಯಬ್ಸೆಂಟ್... ಏನ್ರೀ ಇದು? ಮಕ್ಕಳಂತೆ ಶಿಕ್ಷಕರೂ ಶಾಲೆಗೆ ಚಕ್ಕರ್ ಹಾಕಿದ್ದಾರೆ?' ಸಿಟ್ಟಾದ ಎಸ್‌ಡಿಎಂಸಿ ಅಧ್ಯಕ್ಷರು, 'ಆ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಲು ಇಲಾಖೆಗೆ ಕಂಪ್ಲೇಂಟ್ ಮಾಡಿ' ಎಂದು ಶಿಕ್ಷಕರಿಗೆ ಹೇಳಿದರು.

'ಪ್ರಯೋಜನವಿಲ್ಲ ಸಾರ್, ಆ ಶಿಕ್ಷಕರೆಲ್ಲಾ ಬೇರೆ ಶಾಲೆಗಳಿಗೆ ವರ್ಗಾವಣೆಯಾಗಿದ್ದಾರೆ' ಅಂದರು ಶಿಕ್ಷಕರು.

'ಹೆಡ್‌ಮಾಸ್ಟರೂ ಸ್ಕೂಲಿಗೆ ಬಂದಿಲ್ಲ, ಅವರಿಗಾದರೂ ಜವಾಬ್ದಾರಿ ಬೇಡ್ವಾ?'

'ಅವರೂ ಟ್ರಾನ್ಸ್‌ಫರ್ ಆಗಿದ್ದಾರೆ ಸಾರ್'.

'ಹಾಗಾದ್ರೆ ಹೆಡ್‌ಮಾಸ್ಟರ್ ಯಾರ್ರೀ ?'

'ಈಗ ನಾನೇ ಸಾರ್, ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯ'.

'ಸರಿಹೋಯ್ತು... ಅದುಬಿಡಿ, ನಮ್ಮ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಎಷ್ಟಿದೆ?'

'ಒಂದರಿಂದ ಎಂಟನೇ ತರಗತಿವರೆಗೆ ಹನ್ನೆರಡು ಮಕ್ಕಳು ಕಲಿಯುತ್ತಿದ್ದಾರೆ ಸಾರ್'.

'ಉಳಿದವರು ಎಲ್ಲಿ ಹೋದ್ರು?'

'ಮಕ್ಕಳೂ ಬೇರೆ ಶಾಲೆಗೆ ವರ್ಗವಾಗಿದ್ದಾರೆ. ನಮ್ಮ ಶಾಲೆಯ ಪುಸ್ತಕ, ಯೂನಿಫಾರಂ, ಬಿಸಿಯೂಟ ಬೇಡ ಅಂತ ಆ ಮಕ್ಕಳು ಪಕ್ಕದೂರಿನ ಖಾಸಗಿ ಶಾಲೆಯ ಬಸ್ ಹತ್ತಿ ಹೋಗುತ್ತಿದ್ದಾರೆ'.

'ಹೀಗಾದರೆ ಶಾಲೆ ಉಳಿಯುತ್ತೇನ್ರೀ?'

'ನಮ್ಮ ಶಾಲೆಯೇ ಬೆಟರ್ ಸಾರ್. ರಾಜ್ಯದ ಸಾವಿರಾರು ಶಾಲೆಗಳಲ್ಲಿ ಹತ್ತಕ್ಕಿಂತ ಕಡಿಮೆ ಮಕ್ಕಳಿದ್ದಾರಂತೆ. ಎಷ್ಟೋ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಯೂ ಇಲ್ಲವಂತೆ' ಶಿಕ್ಷಕರು ಅಂಕಿಅಂಶ ನೀಡಿದರು.

ನಿಟ್ಟುಸಿರುಬಿಟ್ಟ ಅಧ್ಯಕ್ಷರು, 'ನೀವೊಬ್ಬರಾದರೂ ಶಾಲೆಯಲ್ಲಿ ಉಳಿದಿದ್ದೀರಲ್ಲ' ಎಂದರು.

'ನಮ್ಮೂರಿನ ಶಾಲೆಗೆ ಟ್ರಾನ್ಸ್‌ಫರ್‌ಗೆ ಪ್ರಯತ್ನಿಸಿದ್ದೆ, ಸ್ಟೂಡೆಂಟ್ಸ್ ಸ್ಟ್ರೆಂಥ್ ಇಲ್ಲ ಅಂತ ಆ ಶಾಲೆ ಮುಚ್ಚಿಹೋಯ್ತು, ಹಾಗಾಗಿ ಇಲ್ಲೇ ಉಳಿದೆ. ಮುಂದಿನ ತಿಂಗಳು ನಾನು ರಿಟೈರ್ ಆಗ್ತಿದ್ದೀನಿ ಸಾರ್...' ಅಂದರು ಮೇಷ್ಟ್ರು.

ಸಂಗತ

ಸಾಂಸ್ಕೃತಿಕ ಪ್ರಶಸ್ತಿ ಮಾರುಕಟ್ಟೆ ಸರಕಲ್ಲ

'ಪ್ರಶಸ್ತಿ ಮರಳಿಸುವುದಿಲ್ಲ' ಎಂದು ಲೇಖಕರು, ಚಿಂತಕರಿಂದ ಮುಚ್ಚಳಿಕೆ ಬರೆಸಿಕೊಳ್ಳುವ ಪ್ರಸ್ತಾವವು ಕ್ರಿಯೆಗೆ ಇಳಿದರೆ ಸಾಂಸ್ಕೃತಿಕ ನಿರಂಕುಶಾಧಿಕಾರಕ್ಕೆ ದಾರಿ ಮಾಡಿಕೊಡಲಿದೆ

• ನಾ.ದಿವಾಕರ


ದೇಶದ ಬಹುತೇಕ ಅಕಾಡೆಮಿಗಳು ತಮ್ಮ ಮೂಲ ಅಂತಃಸತ್ವವನ್ನು ಕಳೆದುಕೊಂಡು ಬಹಳ ವರ್ಷಗಳೇ ಕಳೆದಿವೆ. ಸರ್ಕಾರಗಳ ಕೃಪಾಪೋಷಿತ ಸ್ಥಾವರಗಳಾಗಿ ಪರಿವರ್ತಿತವಾಗಿರುವ ಎಲ್ಲ ಸಾಂಸ್ಕೃತಿಕ, ಸಾಹಿತ್ಯಕ ಸಂಸ್ಥೆಗಳು ತಮ್ಮ ಸ್ವಾಯತ್ತತೆಯನ್ನಷ್ಟೇ ಅಲ್ಲದೆ ಮೂಲ ಉದ್ದೇಶವನ್ನೇ ಮರೆತಿರುವುದು ದುರಂತ ವಾಸ್ತವ.

ಅವುಗಳ ಮೇಲೆ ಇನ್ನಷ್ಟು ನಿಯಂತ್ರಣ ಸಾಧಿಸುವ ರೀತಿಯಲ್ಲಿ ಸಾರಿಗೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಕುರಿತ ಸಂಸದೀಯ ಸ್ಥಾಯಿ ಸಮಿತಿಯು ಇತ್ತೀಚಿನ ವರದಿಯಲ್ಲಿ ಕೆಲವು ಶಿಫಾರಸುಗಳನ್ನು ಮಾಡಿದೆ. 'ರಾಷ್ಟ್ರೀಯ ಅಕಾಡೆಮಿಗಳು ಮತ್ತು ಇತರ ಸಾಂಸ್ಕೃತಿಕ ಸಂಸ್ಥೆಗಳ ಕಾರ್ಯನಿರ್ವಹಣೆ' ಶೀರ್ಷಿಕೆಯಡಿ ಕೆಲವು ಸಲಹೆಗಳನ್ನು ಮುಂದಿಟ್ಟಿದೆ. ಈ ಶಿಫಾರಸುಗಳು ಇಡೀ ಸಾಂಸ್ಕೃತಿಕ ಕ್ಷೇತ್ರವನ್ನು ಸರ್ಕಾರದ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಉದ್ದೇಶವನ್ನು ಸ್ಪಷ್ಟವಾಗಿ ಸೂಚಿಸುವಂತಿವೆ. ಇನ್ನು ಮುಂದೆ ಪ್ರಶಸ್ತಿಗಳನ್ನು ಸ್ವೀಕರಿಸುವವರು 'ಸಾಂಸ್ಕೃತಿಕ ಪ್ರಶಸ್ತಿಗಳನ್ನು ರಾಜಕೀಯ ಕಾರಣಕ್ಕಾಗಿ ಮರಳಿಸುವುದಿಲ್ಲ ಎಂದು ಪ್ರಶಸ್ತಿ ಸ್ವೀಕರಿಸುವುದಕ್ಕೂ ಮೊದಲೇ ಹೇಳಿಕೆ ನೀಡಬೇಕು' ಎಂದು ಪ್ರಶಸ್ತಿ ಸ್ವೀಕರಿಸುವ ಸಾಂಸ್ಕೃತಿಕ ಚಿಂತಕರ ಮೇಲೆ ನಿರ್ಬಂಧ ಹೇರುವಂತೆ ಶಿಫಾರಸು ಮಾಡಲಾಗಿದೆ.

ಪ್ರಶಸ್ತಿ ಭಾಜನರು ಯಾವುದೋ ಒಂದು ಸನ್ನಿವೇಶದಲ್ಲಿ ಪ್ರಭುತ್ವದ ನೀತಿಯನ್ನು, ನಿಷ್ಕ್ರಿಯತೆಯನ್ನು ವಿರೋಧಿಸಿ, ತಮಗೆ ನೀಡಲಾದ ಪ್ರಶಸ್ತಿಯನ್ನು ಹಿಂದಿರುಗಿಸುವುದು ಒಂದು ಪ್ರಜಾಸತ್ತಾತ್ಮಕ ಧೋರಣೆ. ಈ ಸಾಂಕೇತಿಕ ಪ್ರತಿರೋಧವನ್ನು ರಾಜಕೀಯ ಚೌಕಟ್ಟಿನೊಳಗಿಟ್ಟು ನೋಡದೆ, ಪ್ರಶಸ್ತಿ ಭಾಜನರು ಪ್ರತಿನಿಧಿಸುವ ಸಾಮಾನ್ಯ ಜನತೆಯ ನೆಲೆಯಲ್ಲಿ ಹಾಗೂ ಈ ಜನತೆಯ ಸಾಂವಿಧಾನಿಕ ಆಶೋತ್ತರಗಳ ಚೌಕಟ್ಟಿನೊಳಗಿಟ್ಟು ನೋಡಬೇಕೇ ವಿನಾ, ಆಡಳಿತಾರೂಢ ಪಕ್ಷದ ಅಧಿಕಾರ ವಲಯದಲ್ಲಿಟ್ಟು ನೋಡಕೂಡದು.

ಯಾವುದೇ ಒಂದು ಸಾಹಿತ್ಯ ಕೃತಿ ಪ್ರಶಸ್ತಿಗೆ ಅರ್ಹತೆ ಪಡೆಯುವುದು ಆ ಕೃತಿಯೊಳಗಿನ ಸಾಮಾಜಿಕ ಸಂವೇದನೆ, ಸೂಕ್ಷ್ಮತೆ ಮತ್ತು ಅಭಿವ್ಯಕ್ತಿಗಾಗಿಯೇ ವಿನಾ ಆಳುವವರನ್ನು ಸಂತೃಪ್ತಿಗೊಳಿಸುವ ಕಾರಣಕ್ಕಾಗಿ ಅಲ್ಲ. ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಅಕಾಡೆಮಿಗಳ ಸ್ವಾಯತ್ತತೆಯೂ ಈ ಕಾರಣಕ್ಕಾಗಿಯೇ ಮುಖ್ಯವಾಗುತ್ತದೆ. ಈ ಅಕಾಡೆಮಿಗಳು ನೀಡುವ ಪ್ರಶಸ್ತಿಗಳು ರಾಜಕೀಯಪ್ರೇರಿತವಾದಷ್ಟೂ ಪ್ರಶಸ್ತಿಗೆ ಭಾಜನವಾಗುವ ಸಾಹಿತ್ಯಕ ಕೃತಿಗಳ ಆಂತರಿಕ ಮೌಲ್ಯ ಕ್ಷೀಣಿಸುತ್ತಲೇ ಹೋಗುತ್ತದೆ. ಹಾಗೆಯೇ ಸಮಕಾಲೀನ ರಾಜಕೀಯ ಬೆಳವಣಿಗೆಗಳನ್ನು ವಿರೋಧಿಸುವ ಸಾಂವಿಧಾನಿಕ ಹಕ್ಕನ್ನು ಸಾಹಿತ್ಯಕ ವಲಯದಿಂದ ಕಸಿದುಕೊಳ್ಳುವ ಪ್ರಯತ್ನಗಳೂ ಈ ಮೌಲ್ಯ ನಾಶಕ್ಕೆ ಕಾರಣವಾಗುತ್ತವೆ.

ಸಂಸದೀಯ ಸಮಿತಿಯ ಶಿಫಾರಸುಗಳು ಈ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಒಂದು ಪ್ರಯತ್ನ. ಯಾವುದೋ ಒಂದು ಅಸಾಂವಿಧಾನಿಕ ಪ್ರಕರಣವನ್ನು, ಸಂವಿಧಾನವಿರೋಧಿ ಆಡಳಿತ ನೀತಿಗಳನ್ನು ವಿರೋಧಿಸಿ ತಮಗೆ ನೀಡಲಾದ ಸಾಂಸ್ಕೃತಿಕ ಪ್ರಶಸ್ತಿಯನ್ನು ಹಿಂದಿರುಗಿಸುವುದು ಸಹ ಪ್ರಶಸ್ತಿ ಭಾಜನ ಸಾಹಿತಿಯ ಅಥವಾ ಸಾಂಸ್ಕೃತಿಕ ಚಿಂತಕರ ಸಾಂವಿಧಾನಿಕ ಹಕ್ಕು, ಅಲ್ಲವೇ? ಪ್ರಶಸ್ತಿಗಳಿಗೆ ರಾಜಕೀಯ ಸಂಬಂಧ ಇರಕೂಡದು ಎಂದಾದರೆ, ಪ್ರಶಸ್ತಿಯನ್ನು ವಿರೋಧಿಸುವ ಸಾತ್ವಿಕ ಪ್ರತಿರೋಧಕ್ಕೂ ರಾಜಕೀಯ ನಂಟನ್ನು ಬೆರೆಸಕೂಡದು ಅಲ್ಲವೇ? ಪ್ರಶಸ್ತಿಗೆ ಆಯ್ಕೆಯಾದ ಲೇಖಕರಿಂದ, ಸಾಹಿತಿಗಳಿಂದ 'ಹಿಂದಿರುಗಿಸುವುದಿಲ್ಲ' ಎಂದು ಮುಚ್ಚಳಿಕೆ ಬರೆಸಿಕೊಂಡು ಪ್ರಶಸ್ತಿ ನೀಡುವುದು ರಾಜನಿಷ್ಠೆಯನ್ನು ಪ್ರತಿಪಾದಿಸುವ, ರಾಜಪ್ರಭುತ್ವದ ಕಾಲದಲ್ಲಿದ್ದ ಆಸ್ಥಾನ ಕವಿಗಳಿಗೆ ಅನ್ವಯಿಸಲಾಗುತ್ತಿದ್ದ ನಿಯಮ ಎನ್ನುವುದನ್ನು ನಾವು ಮರೆಯಕೂಡದು.



ಕಲೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಪೋಷಿಸುವ ನೈತಿಕ ಜವಾಬ್ದಾರಿ ಇರುವ ಸರ್ಕಾರಗಳು ಈ ವಲಯಗಳನ್ನು ಸ್ವಾಯತ್ತ ಸಂಸ್ಥೆಗಳಂತೆ ಪರಿಗಣಿಸಿ ರಾಜಕೀಯ ಹಸ್ತಕ್ಷೇಪದಿಂದ ಹೊರತಾಗಿಸುವುದು ವರ್ತಮಾನದ ತುರ್ತು. ಹಾಗೆಯೇ ದೇಶದ ಸೃಜನಶೀಲ ಸಾಹಿತ್ಯ ಅಥವಾ ಕಲೆಯನ್ನು ಪೋಷಿಸಲು ಬಯಸುವ ಒಂದು ಸ್ವಸ್ಥ ಸಮಾಜವನ್ನು ಸಾಕಾರಗೊಳಿಸುವ ಜವಾಬ್ದಾರಿಯೂ ಸರ್ಕಾರಗಳ ಮೇಲಿರುತ್ತದೆ. ಸ್ವಾಯತ್ತತೆಗಾಗಿ ಹೋರಾಡಬೇಕಾದ ಜವಾಬ್ದಾರಿ ಸಾಹಿತ್ಯ ವಲಯದ ಮೇಲಿರುವುದನ್ನೂ ಅಲ್ಲಗಳೆಯಲಾಗುವುದಿಲ್ಲ. ಈ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಸರ್ಕಾರಗಳ ವಿರುದ್ಧ ಅಥವಾ ದೇಶದ ಬಹುಸಾಂಸ್ಕೃತಿಕ ನೆಲೆಗಳನ್ನು ನಾಶಪಡಿಸುವ ಆಡಳಿತ ವ್ಯವಸ್ಥೆಯ ವಿರುದ್ಧ ತಮ್ಮ ಪ್ರತಿರೋಧ ವ್ಯಕ್ತಪಡಿಸುವ ಹಕ್ಕು ಪ್ರತಿಯೊಬ್ಬ ಸೃಜನಶೀಲ ಸಾಹಿತಿ, ಕಲಾವಿದರಿಗೂ ಇರುತ್ತದೆ. ಪ್ರಶಸ್ತಿ ಹಿಂದಿರುಗಿಸುವುದೂ ಇದೇ ಪ್ರತಿರೋಧದ ಒಂದು ಸಾತ್ವಿಕ ಆಯಾಮವಾಗಿರುತ್ತದೆ.

ಈ ಸಾಹಿತ್ಯಕ ಅಭಿವ್ಯಕ್ತಿಯನ್ನೇ ಕಸಿದುಕೊಳ್ಳುವ ಪ್ರಯತ್ನಗಳನ್ನು ದೇಶದ ಸಮಸ್ತ ಸಾಹಿತ್ಯಕ, ಸಾಂಸ್ಕೃತಿಕ ವಲಯ ವಿರೋಧಿಸಬೇಕಿದೆ. ಈ ದಿಸೆಯಲ್ಲಿ ಸಂಸದೀಯ ಸಮಿತಿಯ ಶಿಫಾರಸುಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕಿದೆ. ಹಾಗೊಮ್ಮೆ ಇದೇ ನೀತಿ ಜಾರಿಯಾಗುವುದೇ ಆದರೆ ಸೃಜನಶೀಲತೆಗೆ, ಸಂವಿಧಾನಕ್ಕೆ ಬದ್ಧವಾಗಿರುವ ಸಾಹಿತಿ– ಕಲಾವಿದರು, ಸಾಂಸ್ಕೃತಿಕ ಚಿಂತಕರು ಪ್ರಶಸ್ತಿಗಳನ್ನೇ ನಿರಾಕರಿಸುವ ದೃಢ ನಿಶ್ಚಯ ಮಾಡಬೇಕಾಗುತ್ತದೆ. ಅಂತಿಮವಾಗಿ ಒಂದು ಸೃಜನಶೀಲ ಸಾಹಿತ್ಯ ಕೃತಿ- ಸಾಂಸ್ಕೃತಿಕ ಚಿಂತನೆಗೆ ಅತ್ಯುನ್ನತ ಪ್ರಶಸ್ತಿ ದೊರೆಯುವುದು ಅದು ತಳಮಟ್ಟದ ಶ್ರೀಸಾಮಾನ್ಯನ ಬದುಕಿನೊಳಗೆ ಹೊಕ್ಕು ಮನ್ವಂತರದ ದಿಕ್ಕನ್ನು ತೋರಿದಾಗ ಮಾತ್ರ. ಈ ಪ್ರಶಸ್ತಿ ಪಡೆಯಲು ಯಾವ ಪೂರ್ವ ಷರತ್ತುಗಳನ್ನೂ ಅನ್ವಯಿಸಲು ಸಾಧ್ಯವಿಲ್ಲ.

ವಾಚಕರ ವಾಣಿ

ಅರ್ಧ ಹೆಲ್ಮೆಟ್: ಶಾಶ್ವತ ಪರಿಹಾರವೇನು?

ಅರ್ಧ ಹೆಲ್ಮೆಟ್‌ಗಳು ಇರುವುದು ವಾಹನ ಸವಾರರಿಗಲ್ಲ, ಬದಲಾಗಿ ಗಣಿ ಕಾರ್ಮಿಕರು, ರಸ್ತೆ ಕಾಮಗಾರಿ ನಡೆಸುವವರಿಗೆ ಎಂದು ರವಿಕಿರಣ್ ಶೇಖರ್ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಜುಲೈ 28). ಆದರೆ ಹಲವು ವಾಹನ ಸವಾರರು ಅರ್ಧ ಹೆಲ್ಮೆಟ್‌ಗಳನ್ನು ಬಳಸುತ್ತಿದ್ದಾರೆ. ಅವರಿಗೆ ಬುದ್ಧಿ ಹೇಳಿದರೆ ಅಥವಾ ಒಂದೆರಡು ಬಾರಿ ಕ್ಷಿಪ್ರ ಕಾರ್ಯಾಚರಣೆಯ ನೆಪದಲ್ಲಿ ಅವರಿಂದ ಆ ಹೆಲ್ಮೆಟ್‌ಗಳನ್ನು ಕಸಿದುಕೊಂಡರೆ ಸಮಸ್ಯೆ ಬಗೆಹರಿಯುತ್ತದೆಯೇ? ಪೊಲೀಸರು ಈ ರೀತಿ ಅರ್ಧ ಹೆಲ್ಮೆಟ್‌ಗಳನ್ನು ವಶಪಡಿಸಿಕೊಂಡಿರುವುದು ಇದೇ ಮೊದಲಲ್ಲ. ಆದರೂ ಸಮಸ್ಯೆ ಮಾತ್ರ ಹಾಗೆಯೇ ಇದೆ.

ಪೊಲೀಸರ ಮುಂದೆಯೇ ಎಗ್ಗಿಲ್ಲದೆ ಸವಾರರು ಅರ್ಧ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸುತ್ತಾರೆ. ಪೊಲೀಸರೂ ಕಂಡೂ ಕಾಣದಂತೆ ಇದ್ದು, 'ಮೇಲಿನಿಂದ' ಆದೇಶ ಬಂದಾಗ ಮಾತ್ರ ಕಾರ್ಯಾಚರಣೆಗೆ ಇಳಿಯುತ್ತಾರೆ. ಆಗ ಹೆಲ್ಮೆಟ್ ಕಳೆದುಕೊಂಡವರು, ಮುಂದಿನ ಬೀದಿಯಲ್ಲೇ ಮಾರಾಟಕ್ಕಿಟ್ಟಿರುವ ಮತ್ತೊಂದು ಅರ್ಧ ಹೆಲ್ಮೆಟ್ ಕೊಂಡು ತಲೆಗೇರಿಸಿಕೊಳ್ಳುತ್ತಾರೆ. ಅಲ್ಲಿಗೆ ಸಮಸ್ಯೆ ಹಾಗೇ ಉಳಿಯುತ್ತದೆ.

ಇಲ್ಲಿ ಎರಡು ಕ್ರಮಗಳ ಅಗತ್ಯವಿದೆ. ಮೊದಲನೆಯದು, ಅರ್ಧ ಹೆಲ್ಮೆಟ್ ಕಂಡ ತಕ್ಷಣ ಪೊಲೀಸರು ಅದನ್ನು ವಶಪಡಿಸಿಕೊಂಡು ದಂಡ ವಿಧಿಸುವುದು. ಎರಡನೆಯದು, ಅಂಗಡಿಗಳು ಸೇರಿದಂತೆ, ಹಾದಿ ಬೀದಿಯಲ್ಲಿ ಲಂಗುಲಗಾಮಿಲ್ಲದೆ ಮಾರಾಟವಾಗುತ್ತಿರುವ ಅರ್ಧ ಹೆಲ್ಮೆಟ್‌ಗಳ ಮಾರಾಟವನ್ನು ಸ್ಥಗಿತಗೊಳಿಸಿ, ಕೈಗಾರಿಕಾ ಉದ್ದೇಶಗಳಿಗೆ ಮಾತ್ರ ಮಾರಾಟವಾಗುವಂತೆ ನೋಡಿಕೊಳ್ಳುವುದು. ಮೊದಲನೆಯದು ಪೊಲೀಸ್ ಇಲಾಖೆಯಿಂದ ಆಗಬೇಕಾಗಿದೆ. ಎರಡನೆಯದಕ್ಕೆ ಪೊಲೀಸ್, ಸಾರಿಗೆ, ವಾಣಿಜ್ಯ ತೆರಿಗೆ, ಕೈಗಾರಿಕಾ ಇಲಾಖೆಗಳ ನಡುವೆ ಸಮನ್ವಯ ಬೇಕಾಗಿದೆ. ಆಗ ಮಾತ್ರ ಅರ್ಧ ಹೆಲ್ಮೆಟ್ ಸಮಸ್ಯೆ ನಿವಾರಣೆಯಾಗಲು ಸಾಧ್ಯ.

ಸುಘೋಷ ಸ. ನಿಗಳೆ, ಬೆಂಗಳೂರು

ವಿದ್ಯಾವಂತರ ಮೌಢ್ಯ: ಬೇಸರದ ವಿದ್ಯಮಾನ

ವಿಶೇಷ ಪೂಜೆ ನೆಪದಲ್ಲಿ ಬೆಂಗಳೂರಿನ ಮನೆಯೊಂದಕ್ಕೆ ಬಂದಿದ್ದ ನಕಲಿ ಜ್ಯೋತಿಷಿ, ಚಿನ್ನಾಭರಣ ಕದ್ದೊಯ್ದ ಸುದ್ದಿ (ಪ್ರ.ವಾ., ಜುಲೈ 28) ಓದಿ ಕಸಿವಿಸಿಯಾಯಿತು. ಗಂಡ– ಹೆಂಡತಿ ಜಗಳ, ಮದುವೆಯಾಗಿ ಹಲವಾರು ವರ್ಷಗಳು ಕಳೆದರೂ ಮಕ್ಕಳಾಗಿಲ್ಲ ಎಂಬಂಥ ವಿಷಯಗಳ ಬಗ್ಗೆ ಜ್ಯೋತಿಷಿಗಳು ಪರಿಹಾರ ನೀಡುತ್ತಾರೆ ಎಂದುಕೊಂಡು ಅವರ ಬಳಿ ಹೋಗಿ, ಲಕ್ಷಾಂತರ ರೂಪಾಯಿ ಕಳೆದುಕೊಳ್ಳುತ್ತಿರುವವರ ಬಗ್ಗೆ ಆಗಿಂದಾಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇರುತ್ತದೆ. ಆದರೂ ಜನರು ಮೌಢ್ಯದಿಂದ, ಬೇಜವಾಬ್ದಾರಿಯಿಂದ ಇಂತಹ ವಂಚನೆಗೆ ಒಳಗಾಗುತ್ತಲೇ ಇರುವುದು ಬೇಸರ ತರಿಸುತ್ತದೆ.

ಯಾರೋ ಅನಾಮಧೇಯರು ಕೆಲವರ ಮೊಬೈಲ್‌ಗಳಿಗೆ ಫೋನ್ ಮಾಡಿ ಅಥವಾ ಸಂದೇಶ ಕಳುಹಿಸಿ 'ನಿಮಗೆ ಹಣ ಬಂದಿದೆ, ಈ ಲಿಂಕ್ ಸಂಪರ್ಕಿಸಿ ಅಥವಾ ಒಟಿಪಿ ಕಳುಹಿಸಿ' ಎಂದಾಗಲೂ ಅದಕ್ಕೆ ಪೂರಕವಾಗಿ ಪ್ರತಿಕ್ರಿಯಿಸಿ ಹಣ ಕಳೆದುಕೊಳ್ಳುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ. ಇಂತಹವುಗಳ ಬಗ್ಗೆ ಜಾಗರೂಕರಾಗಿ ಇರಬೇಕು ಎಂದು ಹಲವು ಸೂಚನೆ, ಸಲಹೆಗಳು ಬರುತ್ತಿದ್ದರೂ ಜನ ಇದರ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಇವರಲ್ಲಿ ಅನೇಕರು ವಿದ್ಯಾವಂತರೇ ಆಗಿರುವುದು ತೀರಾ ದುರದೃಷ್ಟಕರ.

ಎಚ್.ವಿ.ಶ್ರೀಧರ್, ಬೆಂಗಳೂರು

ಸಿರಿಧಾನ್ಯ ಬಿತ್ತನೆ ಬೀಜ: ಕೃಷಿ ವಿ.ವಿ. ಮುಂದಾಗಲಿ

ರಾಜ್ಯದಲ್ಲಿ ಸಿರಿಧಾನ್ಯಗಳ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳು ನಾಲ್ಕು ಪ್ರಾಂತ್ಯಗಳಲ್ಲಿವೆ. ಇವಲ್ಲದೆ ಕೆಲವು ವಲಯವಾರು ಸಂಶೋಧನಾಲಯಗಳೂ ಇದ್ದು, ಇವು ಸಣ್ಣ ಪ್ರಮಾಣದಲ್ಲಿ ಮಾತ್ರ ಸಿರಿಧಾನ್ಯ ಬೀಜಗಳನ್ನು ಪೂರೈಸುತ್ತವೆ. ರಾಜ್ಯದಲ್ಲಿ ಸಿರಿಧಾನ್ಯಗಳನ್ನು ಬೆಳೆಯಲು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಬೀಜಗಳನ್ನು ಉತ್ಪಾದಿಸಲು ವಿಪುಲ ಅವಕಾಶಗಳಿದ್ದರೂ ಈ ದಿಸೆಯಲ್ಲಿ ಸಮರ್ಪಕವಾದ ಪ್ರಯತ್ನ ನಡೆಯುತ್ತಿಲ್ಲ. ಭತ್ತದ ಅಕ್ಕಿಯಿಂದ ತಯಾರಿಸಿದ ಅನ್ನಕ್ಕೆ ಬದಲಾಗಿ ಸಿರಿಧಾನ್ಯಗಳಿಂದ ತಯಾರಿಸಿದ ಅನ್ನವು ಮಧುಮೇಹ ಉಳ್ಳವರಿಗಷ್ಟೇ ಅಲ್ಲ ಆರೋಗ್ಯವಂತರಿಗೂ ಉತ್ತಮ ಆಹಾರ ಎಂಬುದು ವೈದ್ಯರ ಶಿಫಾರಸು.

ನಮ್ಮ ರಾಜ್ಯದಲ್ಲಿ ಸಿರಿಧಾನ್ಯ ಬೆಳೆಗೆ ಸೂಕ್ತ ವಾತಾವರಣ ಇರುವುದರಿಂದ ಸುಧಾರಿತ ಹಾಗೂ ಶಕ್ತಿಮಾನ್ ತಳಿಗಳನ್ನು ಮಳೆ ಆಶ್ರಿತ ಅಥವಾ ನೀರಾವರಿ ಬೆಳೆಯಾಗಿಯೂ ಬೆಳೆಯಬಹುದು. ಆದರೆ, ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಪೂರಕ ವಾತಾವರಣ ಇದ್ದರೂ ನಿರೀಕ್ಷಿತ ಮಟ್ಟದಲ್ಲಿ ಉತ್ಪಾದನೆಯಾಗುತ್ತಿಲ್ಲ. ಆದ್ದರಿಂದ, ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳ ಮುಖಾಂತರ ಬೀಜೋತ್ಪಾದನೆ ಹಾಗೂ ಬೆಳೆ ತಂತ್ರಜ್ಞಾನವನ್ನು ಒದಗಿಸುವತ್ತ ಕೃಷಿ ಸಚಿವರು ಗಮನಹರಿಸಿ ನಿರ್ದೇಶನ ನೀಡುವಂತಾದರೆ, ರಾಜ್ಯದಲ್ಲಿ ಸಿರಿಧಾನ್ಯಗಳ ಉತ್ಪಾದನೆಗೆ ರೈತರನ್ನು ಪ್ರೇರೇಪಿಸಿದಂತೆ ಆಗುತ್ತದೆ.

ಡಿ.ರಾಜಗೋಪಾಲ್, ಬೆಂಗಳೂರು

ಪೈರಸಿ ತಡೆ: ಶೀಘ್ರ ಜಾರಿಗೆ ಬರಲಿ ಕಾಯ್ದೆ

ಸಿನಿಮಾಟೊಗ್ರಾಫ್ ಕಾಯ್ದೆಯ ತಿದ್ದುಪಡಿ ಮಸೂದೆಯು ರಾಜ್ಯಸಭೆಯಲ್ಲಿ ಅಂಗೀಕಾರ ಪಡೆದಿರುವುದು ಸ್ವಾಗತಾರ್ಹ. ಪೈರಸಿಯಿಂದ ನಷ್ಟ ಅನುಭವಿಸುತ್ತಿರುವ ನಿರ್ಮಾಪಕರಿಗೆ ಹಾಗೂ ಚಿತ್ರರಂಗಕ್ಕೆ ಇದರಿಂದ ಖಂಡಿತ ಸಹಾಯವಾಗಲಿದೆ. ಈ ಮಸೂದೆ ಸಾಧ್ಯವಾದಷ್ಟು ಬೇಗ ಜಾರಿಗೆ ಬರಲಿ.

ಪೈರಸಿ ತಡೆ ಕಾಯ್ದೆಯ ವಿವರಗಳನ್ನು ಒಳಗೊಂಡ ಸೂಚನಾ ಫಲಕಗಳನ್ನು ಎಲ್ಲಾ ಚಿತ್ರಮಂದಿರಗಳಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಕಡ್ಡಾಯವಾಗಿ ಅಳವಡಿಸಲು ಹಾಗೂ ಪ್ರತಿ ಪ್ರದರ್ಶನದ ಆರಂಭಕ್ಕೂ ಮೊದಲು ಚಿತ್ರಮಂದಿರಗಳು ಆಯಾ ರಾಜ್ಯದ ದ್ವಿಭಾಷೆಯಲ್ಲಿ (ಕರ್ನಾಟಕದಲ್ಲಿ ಕನ್ನಡ ಹಾಗೂ ಇಂಗ್ಲಿಷ್) ಚಿತ್ರ ಹಾಗೂ ಧ್ವನಿಯ ಮೂಲಕ (ವಾಯ್ಸ್ ಓವರ್) ಸೂಚನೆ ನೀಡುವುದನ್ನು ಆಯಾ ರಾಜ್ಯ ಸರ್ಕಾರಗಳು ಕಡ್ಡಾಯಗೊಳಿಸಲಿ. ಯಾರಾದರೂ ಮೊಬೈಲ್ ಅಥವಾ ಕ್ಯಾಮೆರಾಗಳಲ್ಲಿ ಕಾನೂನುಬಾಹಿರವಾಗಿ ಚಿತ್ರೀಕರಿಸುತ್ತಿದ್ದರೆ ಅಂತಹವರ ವಿರುದ್ಧ ದೂರು ನೀಡಲು ಸ್ಥಳೀಯ ಪೊಲೀಸ್ ಠಾಣೆಯ ವಿವರಗಳನ್ನು ಸೂಚನಾ ಫಲಕದಲ್ಲಿ ನಮೂದಿಸುವಂತೆ ಸರ್ಕಾರವು ಕಾನೂನನ್ನು ಜಾರಿ ಮಾಡಲಿ.

ಮಂಸೋರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಮಣಿಪುರ

ಜನಾಂಗೀಯ ಭಿನ್ನತೆ ಪ್ರತಿಪಾದನೆಯಲ್ಲಿ ಕಲಹ

ಆಧುನಿಕ ಭಾರತದಲ್ಲಿ ಬ್ರಿಟಿಷರ ಕಾರಣದಿಂದ ಮೈತೇಯಿ ಮತ್ತು ಕುಕಿ ಜನರ ಮಧ್ಯೆ ಮೊದಲ ಬಾರಿ ಕಲಹ ನಡೆದಿತ್ತು. ಸ್ವತಂತ್ರ ಭಾರತದಲ್ಲಿ ಎರಡೂ ಸಮುದಾಯಗಳಿಗೆ ಭಿನ್ನ ಮಾನ್ಯತೆ ನೀಡಿದ್ದು, ಪರಸ್ಪರರ ಮೇಲಿನ ಅಸಮಾಧಾನಕ್ಕೆ ಕಾರಣವಾಗಿತ್ತು. ರಾಜಕೀಯವಾಗಿ ಪ್ರಬಲರಾಗಿರುವ ಮೈತೇಯಿಗಳು, ಎಲ್ಲಾ ಸರ್ಕಾರಿ ಸವಲತ್ತುಗಳನ್ನು ಪಡೆದುಕೊಂಡು ಮುಂದುವರಿದಿದ್ದಾರೆ ಎಂಬುದು ಕುಕಿ ಜನರ ಅಸಮಾಧಾನ. ಅರಣ್ಯ ಭೂಮಿಯ ಹಕ್ಕನ್ನು ಹೊಂದಿರುವ ಕುಕಿ ಜನರು, ತಮಗೆ ಭೂಮಿಯ ಒಡೆತನ ನಿರಾಕರಿಸುತ್ತಿದ್ದಾರೆ ಎಂಬುದು ಮೈತೇಯಿಗಳ ಅಸಮಾಧಾನ. ಎರಡೂ ಸಮುದಾಯಗಳ ಮಧ್ಯೆ ಇರುವ ಈ ಒಡಕೇ ಈಗ, ದೊಡ್ಡಮಟ್ಟಕ್ಕೆ ಬೆಳೆದಿದೆ. ಸರ್ಕಾರಗಳು ತೆಗೆದುಕೊಂಡ ಕ್ರಮಗಳು ಈ ಒಡಕನ್ನು ಮುಚ್ಚುವ ಬದಲಿಗೆ, ಹೆಚ್ಚಿಸಿವೆ

● ಜಯಸಿಂಹ ಆರ್., ಸುಕೃತ ಎಸ್.

ಮಣಿಪುರದಲ್ಲಿನ ಮೈತೇಯಿ ಹಿಂದೂಗಳು ಮತ್ತು ಕುಕಿ ಬುಡಕಟ್ಟು ಸಮುದಾಯಗಳ ನಡುವಣ ಕಲಹ ಇಂದಿನದ್ದಲ್ಲ. ಈ ಕಲಹಕ್ಕೆ ಶತಮಾನಗಳ ಇತಿಹಾಸವಿದೆ. ಎರಡೂ ಸಮುದಾಯಗಳ ಜನರು ತಾವೇ ಮಣಿಪುರದ ಮೂಲನಿವಾಸಿಗಳು ಎಂದು ಹೇಳಿಕೊಳ್ಳುತ್ತಿದ್ದಾರೆ. ಜತೆಗೆ ಮಣಿಪುರದ ಸಂಪೂರ್ಣ ಭೌಗೋಳಿಕ ಪ್ರದೇಶದ ಮೂಲ ಹಕ್ಕುದಾರರು ತಾವೇ ಎಂದು ಪ್ರತಿಪಾದಿಸುತ್ತಿದ್ದಾರೆ. ಈ ಸಂಬಂಧ ಎರಡೂ ಸಮುದಾಯಗಳ ಮಧ್ಯೆ ಹಲವು ಬಾರಿ ಕಲಹ ನಡೆದಿದೆ. ಮೈತೇಯಿ ಮತ್ತು ಕುಕಿಗಳು ಸಂಪೂರ್ಣ ಭಿನ್ನ ಎಂಬ ಜನಾಂಗೀಯ ಭಿನ್ನತೆಯ ಪ್ರತಿಪಾದನೆಯೇ ಈ ಕಲಹದ ಮೂಲ ಎಂದು ವಿಶ್ಲೇಷಿಸಲಾಗಿದೆ.

ಮೈತೇಯಿ ಸಮುದಾಯದ ಜನರು ತಾವು ಮಹಾಭಾರತದ ಅರ್ಜುನ–ಚಿತ್ರಾಂಗದನ ಮಗ ಬಭ್ರುವಾಹನನ ಸಂತತಿಯವರು ಎಂದು ಹೇಳಿಕೊಳ್ಳುತ್ತಾರೆ. 18ನೇ ಶತಮಾನದ ನಂತರದ ಮಣಿಪುರಿ ಭಾಷೆಯಲ್ಲಿ ರಚನೆಯಾದ ಸಾಹಿತ್ಯ ಕೃತಿಗಳೂ ಇದನ್ನೇ ಹೇಳುತ್ತವೆ. 'ಕುಕಿಗಳು ಕಾಡು ಜನರು, ಅವರು ಹೊರಗಿನಿಂದ ಇಲ್ಲಿಗೆ ಬಂದವರು' ಎಂದು ಮೈತೇಯಿ ಜನರು ಹೇಳುತ್ತಾರೆ. ಕುಕಿ ಜನರೂ ಸಹ, 'ಮೈತೇಯಿಗಳು ನಮಗಿಂತ ಭಿನ್ನ. ನಾವೇ ಮಣಿಪುರದ ಮೂಲ ನಿವಾಸಿಗಳು' ಎಂದು ಹೇಳುತ್ತಾರೆ. ಆದರೆ ಈ ಎರಡೂ ಸಮುದಾಯಗಳು ಮೂಲತಃ ಒಂದೇ ಜನಾಂಗಕ್ಕೆ ಸೇರಿದವು ಎಂದು ಮಾನವಶಾಸ್ತ್ರಜ್ಞರು ಪ್ರತಿಪಾದಿಸಿದ್ದಾರೆ.

'ಎಲ್ಲರೂ ಒಂದೇ'

ಮೈತೇಯಿಗಳು ಹಿಂದೂಗಳು ಎಂದು 'ಮೈತೇಯಿ ಪುರಾವಾ'ಗಳು (ಪುರಾಣ) ಹೇಳುತ್ತವೆಯಾದರೂ, ಮಾನವಶಾಸ್ತ್ರೀಯ ಮತ್ತು ಭಾಷಾವಿಜ್ಞಾನದ ಪರಿಕಲ್ಪನೆಗಳು ಈ ಪ್ರತಿಪಾದನೆಯನ್ನು ನಿರಾಕರಿಸುತ್ತವೆ ಎಂದು ಮಾನವ-ಶಾಸ್ತ್ರಜ್ಞರು ಹೇಳುತ್ತಾರೆ. 1910–1970ರ ಮಧ್ಯೆ ನಡೆದ ಹಲವು ಮಾನವಶಾಸ್ತ್ರೀಯ ಅಧ್ಯಯನಗಳು ಇದನ್ನೇ ಹೇಳಿವೆ. ಕುಕಿ ಮತ್ತು ಮೈತೇಯಿ ಜನರ ಮಧ್ಯೆ ಜನಾಂಗೀಯವಾಗಿ ವ್ಯತ್ಯಾಸವೇನೂ ಇಲ್ಲ. ಎರಡೂ ಸಮುದಾಯಗಳು 'ಮಂಗೋಲಾಯ್ಡ್' ಜನಾಂಗಕ್ಕೆ ಸೇರಿದ್ದವಾಗಿವೆ. ಈ ಜನರು ಒಂದು ಕಡೆ ನೆಲೆನಿಂತು ಕೃಷಿ ಮಾಡುವುದಿಲ್ಲ. ಬದಲಿಗೆ ಕಾಡನ್ನು ಸುಡುತ್ತಾ, ತೆರವಾದ ಜಾಗದಲ್ಲಿ ಕೃಷಿ ಮಾಡುತ್ತಾರೆ. ಆ ಭೂಮಿ ಫಲವತ್ತತೆ ಕಳೆದುಕೊಂಡ ನಂತರ ಬೇರೊಂದು ಕಡೆ ಕಾಡು ಸುಟ್ಟು, ಕೃಷಿ ಮಾಡುತ್ತಾರೆ ಎಂಬುದನ್ನು ಈ ಅಧ್ಯಯನಗಳು ದಾಖಲಿಸಿವೆ.

ಮಣಿಪುರದ ಗುಡ್ಡಗಾಡು ಪ್ರದೇಶದ ತಪ್ಪಲಿನಲ್ಲಿದ್ದ ಕುಕಿ ಜನರು ಇದೇ ರೀತಿ, ಮಣಿಪುರದ ಕಣಿವೆ (ಇಂಫಾಲ್ ನದಿ ಕಣಿವೆ ಪ್ರದೇಶ) ಪ್ರದೇಶಕ್ಕೆ ಕೃಷಿಗೆಂದು ಬಂದಿದ್ದಾರೆ. ನಂತರ ಅಲ್ಲಿಯೇ ನೆಲೆ ನಿಂತಿದ್ದಾರೆ. ಬಂಗಾಳ–ಅಸ್ಸಾಂ–ಮ್ಯಾನ್ಮಾರ್‌ನ ಚಿನ್ ಪ್ರಾಂತ್ಯಕ್ಕೆ ಸಂಪರ್ಕ ಕಲ್ಪಿಸುವ ಕಣಿವೆ ಪ್ರದೇಶದಲ್ಲೇ ಇಂಫಾಲ್ ಕಣಿವೆ ಪ್ರದೇಶವೂ ಬರುತ್ತದೆ. ಆರ್ಯರು, ಮಧ್ಯಪ್ರಾಚ್ಯದ ಶಾಗಳು, ಮ್ಯಾನ್ಮಾರ್‌ನ ಬರ್ಮಾಸ್‌ಗಳು ಇತಿಹಾಸದುದ್ದಕ್ಕೂ ಇಂಫಾಲ್ ಕಣಿವೆ ಪ್ರದೇಶವನ್ನು ಹಲವು ಬಾರಿ ಹಾದುಹೋಗಿದ್ದಾರೆ. ಹೀಗಾಗಿ ಇಂಫಾಲ್ ಕಣಿವೆಯಲ್ಲಿದ್ದ ಜನರ ಸಂಸ್ಕೃತಿ ಮೇಲುನೋಟಕ್ಕೆ ಬದಲಾಗುತ್ತಾ ಬಂದಿದೆ. ಇದು ವ್ಯಾಪಕವಾಗಿ ಬದಲಾಗಿದ್ದು, 18ನೇ ಶತಮಾನದಲ್ಲಿ ವೈಷ್ಣವ ಪಂಥದ ಅನುಯಾಯಿಗಳು ಇಂಫಾಲ್ ಕಣಿವೆಗೆ ಬಂದಾಗ.

ಮಣಿಪುರಿ ಭಾಷೆಯಲ್ಲಿನ ಪುರಾಣಗಳು ಮೈತೇಯಿ ಜನರ ಸುದೀರ್ಘ ಇತಿಹಾಸವನ್ನು ದಾಖಲಿಸಿವೆ. ಕ್ರಿಸ್ತ ಪೂರ್ವ 14ನೇ ಶತಮಾನದಷ್ಟು ಹಿಂದಿನವರೆಗಿನ ಪ್ರತಿಯೊಂದು ರಾಜಮನೆತನವು ಮತ್ತು ಪ್ರತಿಯೊಬ್ಬ ರಾಜನ ಇತಿಹಾಸವನ್ನೂ ಈ ಪುರಾಣಗಳು ದಾಖಲಿಸಿವೆ. ಕ್ರಿ.ಶ.1789ರವೆಗಿನ ಪುರಾಣಗಳಲ್ಲಿ ಮಣಿಪುರವನ್ನು ಕಾಂಗ್ಲ್‌ಪೋಕ್ ಎಂದೇ ಕರೆಯಲಾಗಿದೆ. ಅಲ್ಲಿಯವರೆಗಿನ ರಾಜರ ಹೆಸರುಗಳು ಭಿನ್ನವಾಗಿಯೇ ಇವೆ. 1773ರಲ್ಲಿ ಚಿನ್–ಥಾಂಗ್–ಕೋಂಬಾ ರಾಜನಾಗುತ್ತಾನೆ. ಆತನ ಕಾಲದಲ್ಲಿಯೇ ವೈಷ್ಣವ ಪಂಥವು ಮಣಿಪುರಕ್ಕೆ ಕಾಲಿಡುತ್ತದೆ. ಆತನೊಂದಿಗೆ ಮೈತೇಯಿ ಜನರೂ ಹಿಂದೂ ಧರ್ಮಕ್ಕೆ ಮತಾಂತರವಾಗುತ್ತಾರೆ. ಆತ ತನ್ನ ಹೆಸರನ್ನು ಭಾಗ್ಯಚಂದ್ರ ಎಂದು ಬದಲಿಸಿಕೊಳ್ಳುತ್ತಾನೆ. ತನ್ನ ರಾಜಧಾನಿ ಲಮಂಗ್‌ಡಾಂಗ್‌ನ ಹೆಸರನ್ನು ಬಿಷ್ಣುಪುರ (ಈಗ ವಿಷ್ಣುಪುರ) ಎಂದು ಬದಲಿಸುತ್ತಾನೆ. ಕಾಂಗ್ಲ್‌ಪೋಕ್ ಮನೆತನವೂ ಮಣಿಪುರ ಎಂದಾಗುತ್ತದೆ. ಆದರೆ, ಕುಕಿಗಳು ಬುಡಕಟ್ಟು ಸಮುದಾಯವಾಗಿಯೇ ಉಳಿಯುತ್ತಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕ್ರೈಸ್ತ ಧರ್ಮಕ್ಕೆ ಬದಲಾಗುತ್ತಾರೆ.

ಭಾರತದ ಇತಿಹಾಸದಲ್ಲಿ ಯಾವುದೇ ಬುಡಕಟ್ಟು ಮುಖ್ಯವಾಹಿನಿಗೆ ಬಂದೊಡನೆ, ಅದು ಹಿಂದೂ ಧರ್ಮವನ್ನು ಸೇರುತ್ತದೆ ಮತ್ತು ಅದನ್ನು ಅನುಸರಿಸಲು ತೊಡಗುತ್ತದೆ. ಇದನ್ನು ಮಾನವಶಾಸ್ತ್ರಜ್ಞ ಎಂ.ಎನ್.ಶ್ರೀನಿವಾಸನ್ 'ಸಂಸ್ಕೃತೀಕರಣ' ಎಂದಿದ್ದಾರೆ. ಮೈತೇಯಿ ಜನರ ಮಾನವ ಶಾಸ್ತ್ರೀಯ ಅಧ್ಯಯನವನ್ನೂ 'ಸಂಸ್ಕೃತೀಕರಣ'ದ ಸಿದ್ಧಾಂತದಲ್ಲೇ ವಿಶ್ಲೇಷಿಸಲಾಗಿದೆ. ಬುಡಕಟ್ಟು ಸಮುದಾಯವಾಗಿದ್ದ ಮೈತೇಯಿ ಜನರು, ವೈಷ್ಣವ ಜನರ ಸಂಪರ್ಕದ ನಂತರ ಹಿಂದೂ ಧರ್ಮಕ್ಕೆ ಬಂದರು. ನಂತರ ಗುಡ್ಡಗಾಡಿನ-ಲ್ಲಿನ ಬುಡಕಟ್ಟು ಜನರಿಗಿಂತ ತಾವು ಭಿನ್ನ ಎಂದು ಪ್ರತಿಪಾದಿಸ ತೊಡಗಿದರು ಎಂದು ಮಣಿಪುರದ ಖ್ಯಾತ ಮಾನವಶಾಸ್ತ್ರಜ್ಞ ಎನ್.ಟೋಂಬಿ ಸಿಂಗ್ ಅವರು ತಮ್ಮ 'ಮಣಿಪುರ್: ಸ್ಟಡಿ' ಅಧ್ಯಯನ ಕೃತಿಯಲ್ಲಿ ಹೇಳಿದ್ದಾರೆ.

ಬ್ರಿಟಿಷರ ಆಳ್ವಿಕೆಯಲ್ಲಿ ಕಲಹ

ನಾಗಾಗಳು ಇಂಫಾಲ್ ಕಣಿವೆ ಪ್ರದೇಶಕ್ಕೆ ಬರುವುದನ್ನು ತಡೆಯಲು ಗುಡ್ಡಗಾಡು ಜನರನ್ನು (ಕುಕಿಗಳು) ಮೈತೇಯಿ ರಾಜಮನೆತನವು ಬಳಸಿಕೊಳ್ಳುತ್ತಿತ್ತು ಎಂಬುದನ್ನು ಮೈತೇಯಿ ಪುರಾಣಗಳು ದಾಖಲಿಸಿವೆ. ಕುಕಿಗಳು ನಾಗಾಗಳ ದಾಳಿಗಳನ್ನು ಎದುರಿಸುವ ಮೂಲಕ ಇಂಫಾಲ್ ಕಣಿವೆ ಪ್ರದೇಶದಲ್ಲಿ ಇದ್ದ ಮೈತೇಯಿ ಜನರನ್ನು ರಕ್ಷಿಸಿದ್ದರು ಎಂದು ಈ ಪುರಾಣ ಕಾವ್ಯಗಳು ಹೇಳುತ್ತವೆ. ಹೀಗೆ ತಮ್ಮ ರಕ್ಷಣೆಗಾಗಿ ಕುಕಿಗಳನ್ನು ತಮ್ಮ ರಕ್ಷಣೆಗೆ ಬಳಸಿಕೊಳ್ಳುತ್ತಿದ್ದ ಪರಿಪಾಟವೇ ಕುಕಿ ಮತ್ತು ಮೈತೇಯಿ ಜನರ ನಡುವಣ ಕಲಹಕ್ಕೆ ಕಾರಣವಾಯಿತು ಎಂಬುದನ್ನು ಬ್ರಿಟಿಷ್ ಅಧಿಕಾರಿಗಳು ದಾಖಲಿಸಿದ್ದಾರೆ.

19ನೇ ಶತಮಾನದ ಅಂತ್ಯದ ವೇಳೆಗೆ ಅಸೋಂ ಸಂಸ್ಥಾನ, ಮಣಿಪುರ ಸಂಸ್ಥಾನಗಳು ಬ್ರಿಟಿಷ್ ಭಾರತದ ಅಸ್ಸಾಂ ರಾಜ್ಯದ ಆಡಳಿತಕ್ಕೆ ಒಳಪಟ್ಟಿದ್ದವು. ಬ್ರಿಟಿಷರಿಗೆ ಅಗತ್ಯವಿದ್ದಾಗ ಈ ಸಂಸ್ಥಾನಗಳೆರಡೂ ಸೇನೆಯನ್ನು ಒದಗಿಸಬೇಕಿತ್ತು. 1917ರಲ್ಲಿ ಒಂದನೇ ಮಹಾಯುದ್ಧದ ಸಂದರ್ಭದಲ್ಲಿ, ಈಜಿಪ್ಟ್‌ನಲ್ಲಿ ಕಾರ್ಯಾಚರಣೆಗೆ ಹೆಚ್ಚಿನ ಸೈನಿಕರ ಅವಶ್ಯಕತೆ ಇತ್ತು. ಇದಕ್ಕಾಗಿ ಅಸ್ಸಾಂ ರಾಜ್ಯದಿಂದ ತಲಾ 2,000 ಮಂದಿಯ 15 ತುಕಡಿಗಳನ್ನು ತರಿಸುವಂತೆ ಬ್ರಿಟಿಷ್ ವೈಸ್‌ರಾಯ್ ಆದೇಶಿಸಿದ್ದರು. ಈ ಪ್ರಕಾರ ತಲಾ 2,000 ಜನರು ಇರುವ ಎರಡು ತುಕಡಿಗಳನ್ನು ಕಳುಹಿಸಲು ಮಣಿಪುರ ಸಂಸ್ಥಾನಕ್ಕೂ ಆದೇಶಿಸಲಾಗಿತ್ತು. ಮಣಿಪುರ ಸಂಸ್ಥಾನವು 4,000 ಕುಕಿ ಜನರನ್ನು ಯುದ್ಧಕ್ಕಾಗಿ ಕಳುಹಿಸುವಂತೆ ಕುಕಿ ಬುಡಕಟ್ಟು ಮಂಡಲಗಳ ಮುಖ್ಯಸ್ಥರಿಗೆ ಆದೇಶಿಸಿದ್ದರು. ಇದನ್ನು ಕುಕಿ ಬುಡಕಟ್ಟು ಮಂಡಲಗಳ ಮುಖ್ಯಸ್ಥರು ನಿರಾಕರಿಸುತ್ತಾರೆ. ಈ ಅಸಹಕಾರದ ವಿರುದ್ಧ 1919ರ ಮಾರ್ಚ್‌ನಲ್ಲಿ ಬ್ರಿಟಿಷ್ ಸೇನೆ ಮತ್ತು ಮೈತೇಯಿ ಸೇನೆಗಳು ಜಂಟಿ ಕಾರ್ಯಾಚರಣೆ ನಡೆಸುತ್ತವೆ. ಕುಕಿ ಜನರ ಮನೆಗಳು ಮತ್ತು ಹೊಲಗಳಿಗೆ ಬೆಂಕಿ ಹಚ್ಚಲಾಗುತ್ತದೆ. ಇದಕ್ಕೆ ಪ್ರತೀಕಾರವಾಗಿ ಕುಕಿ ಬುಡಕಟ್ಟು ಜನರು ಮೈತೇಯಿ ಗ್ರಾಮಗಳ ಮೇಲೆ ದಾಳಿ ನಡೆಸುತ್ತಾರೆ. ಮೈತೇಯಿ ಜನರ ಮನೆ ಮತ್ತು ಹೊಲಗಳಿಗೆ ಬೆಂಕಿ ಹಚ್ಚುತ್ತಾರೆ. ಇಂತಹ ಪರಸ್ಪರ ದಾಳಿಗಳು 1920ರವರೆಗೂ ಹಲವು ಬಾರಿ ಪುನರಾವರ್ತನೆಯಾಗುತ್ತವೆ. ಆನಂತರ ದಾಳಿಗಳು ನಿಲ್ಲುತ್ತವೆ ಎಂದು ಬ್ರಿಟಿಷ್ ಅಧಿಕಾರಿಗಳು ತಮ್ಮ ವೈಸ್‌ರಾಯ್‌ಗೆ ಸಲ್ಲಿಸಿದ ವರದಿಗಳಲ್ಲಿ ವಿವರಿಸಿದ್ದಾರೆ ಎಂದು ಎಸ್.ಎಂ.ಎ.ಡಬ್ಲ್ಯು ಷಿಸ್ತಿ ಅವರು ತಮ್ಮ 'ಕುಕಿ ಅಪ್‌ರೈಸಿಂಗ್ ಇನ್ ಮಣಿಪುರ್:1919–20' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಎರಡೂ ಸಮುದಾಯಗಳು ಪರಸ್ಪರರ ಮೇಲೆ ದಾಳಿ ನಡೆಸುವಾಗ ಈಗಲೂ ಮನೆ ಮತ್ತು ಹೊಲಗಳಿಗೆ ಬೆಂಕಿ ಹಚ್ಚುವ ವಿಧಾನವನ್ನೇ ಪ್ರಧಾನವಾಗಿ ಬಳಸುತ್ತಿವೆ.

ಬ್ರಿಟಿಷರು ಮೈತೇಯಿಗಳನ್ನೂ ಪರಿಶಿಷ್ಟ ಪಂಗಡ ಎಂದೇ ಕರೆದಿದ್ದರು. 1948–49ರಲ್ಲಿ ಮಣಿಪುರ ಸಂಸ್ಥಾನವು ಭಾರತದೊಂದಿಗೆ ವಿಲೀನವಾದ ನಂತರ ಮೈತೇಯಿಗಳನ್ನು ಪರಿಶಿಷ್ಟ ಪಂಗಡದಿಂದ ಹೊರಗಿಡಲಾಯಿತು. ಪರಿಶಿಷ್ಟ ಪಂಗಡಗಳಿಗೆ ಅರಣ್ಯ ಪ್ರದೇಶಗಳ ಒಡೆತನದ ಹಕ್ಕನ್ನು ನೀಡುವ ಸಂವಿಧಾನದ ಆರು ಮತ್ತು ಎಂಟನೇ ಪರಿಚ್ಛೇದದಲ್ಲಿ ಮಣಿಪುರವನ್ನು ಸೇರಿಸಲಾಯಿತು. ಇದರಿಂದ ಮಣಿಪುರದ ಅರಣ್ಯ ಪ್ರದೇಶಗಳಲ್ಲಿ ಭೂಮಿ ಖರೀದಿಸುವ ಹಕ್ಕನ್ನು ಮೈತೇಯಿಗಳು ಕಳೆದುಕೊಂಡರು. ಆಗ ಮೈತೇಯಿ ಜನಸಂಖ್ಯೆಗೆ ಅಗತ್ಯವಿದ್ದುದಕ್ಕಿಂತ ಹೆಚ್ಚು ಭೂಮಿ ಇಂಫಾಲ್ ಕಣಿವೆ ಪ್ರದೇಶದಲ್ಲೇ ಇತ್ತು. ಈಗ ಮೈತೇಯಿ ಜನರ ಸಂಖ್ಯೆಯೂ ಏರಿಕೆಯಾಗಿದ್ದು, ಭೂಮಿಯ ಕೊರತೆ ಉಂಟಾಗಿದೆ. ಹೀಗಾಗಿ ತಮಗೆ ಪರಿಶಿಷ್ಟ ಪಂಗಡದ ಸ್ಥಾನ ನೀಡಿ, ಆಗ ನಾವೂ ಗುಡ್ಡಗಾಡು ಪ್ರದೇಶದಲ್ಲಿ ಭೂಮಿ ಖರೀದಿಸಬಹುದು ಎಂಬುದು ಮೈತೇಯಿ ಜನರ ಬೇಡಿಕೆ. ಹೀಗೆ ಮಾಡಿದರೆ, ತಮ್ಮ ಹಕ್ಕುಗಳಿಗೆ ಧಕ್ಕೆಯಾಗುತ್ತಿದೆ ಎಂಬುದು ಕುಕಿ ಜನರ ಪ್ರತಿರೋಧ.



ಹಿಂಸಾಚಾರದ ಸುತ್ತ...

ಮೈತೇಯಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ನಿರ್ದೇಶನ ನೀಡಿ ಎಂದು ಮೈತೇಯಿ ಜನರ ಹಲವು ಸಂಘಟನೆಗಳು ಮಣಿಪುರ ಹೈಕೋರ್ಟ್‌ನ ಮೊರೆ ಹೋಗಿದ್ದವು. ಈ ಸಂಬಂಧ, 'ಮೈತೇಯಿ ಸಮುದಾಯವನ್ನು ಪರಿಶಿಷ್ಠ ಸಮುದಾಯಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿ' ಎಂದು ಹೈಕೋರ್ಟ್ ಇದೇ ಮಾರ್ಚ್ 27ರಂದು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿತ್ತು. ಇದನ್ನು ಮೈತೇಯಿ ಸಮುದಾಯವು ಸ್ವಾಗತಿಸಿತ್ತು. ಕುಕಿ ಜನರು ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ರಾಜ್ಯದ ಹಲವು ಜಿಲ್ಲೆಗಳಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವಿಗೆ ರಾಜ್ಯದ ಬಿಜೆಪಿ ಸರ್ಕಾರ ಒತ್ತು ನೀಡಿತ್ತು. ಕುಕಿ ಬುಡಕಟ್ಟು ಸಮುದಾಯಗಳ ಒಡೆತನದ ಅರಣ್ಯ ಪ್ರದೇಶಗಳಲ್ಲಿ ಸರ್ವೇಕ್ಷಣೆ ನಡೆಸಲು ಮುಖ್ಯಮಂತ್ರಿ ಬಿರೇನ್ ಸಿಂಗ್ ಆದೇಶಿಸಿದ್ದರು. ಅಂತಹ ಅರಣ್ಯ ಪ್ರದೇಶಗಳನ್ನು, 'ಸಂರಕ್ಷಿತ ಪ್ರದೇಶ' ಎಂದು ರಾಜ್ಯ ಸರ್ಕಾರ ಘೋಷಿಸಿತು. ಸರ್ಕಾರದ ಈ ಎಲ್ಲಾ ಕ್ರಮಗಳು ತಮ್ಮ ಹಕ್ಕನ್ನು ಮೊಟಕುಗೊಳಿಸುವ ಯತ್ನ ಎಂದೇ ಕುಕಿ ಬುಡಕಟ್ಟು ಸಂಘಟನೆಗಳು ಆರೋಪಿಸಿದವು. ಈ ಯತ್ನಗಳ ವಿರುದ್ಧ ಮೇ3ರಂದು ರಾಜ್ಯದ ಹಲವೆಡೆ ಪ್ರತಿಭಟನಾ ಮೆರವಣಿಗೆ ಆಯೋಜಿಸಿದರು. ಮೆರವಣಿಗೆಯಲ್ಲಿ ನಡೆದ ಹಿಂಸಾಚಾರ, ನಂತರದಲ್ಲಿ ತೀವ್ರ ಸ್ವರೂಪ ಪಡೆಯಿತು.

ಮೆರವಣಿಗೆ...

ಮೇ 3: ಆಲ್ ಟ್ರೈಬಲ್ ಸ್ಟೂಡೆಂಟ್ ಯೂನಿಯನ್ ಆಫ್ ಮಣಿಪುರವು (ಎಟಿಎಸ್‌ಯುಎಂ) ರಾಜ್ಯದಾದ್ಯಂತ ಟ್ರೈಬಲ್ ಸಾಲಿಡಾರಿಟಿ ಮಾರ್ಚ್ ನಡೆಸಲು ಕರೆ ನೀಡಿತ್ತು. ಇದಕ್ಕೆ ಸುಮಾರು 60 ಸಾವಿರ ಮಂದಿ ಸೇರಿದ್ದರು. ರ್‍ಯಾಲಿಯ ವೇಳೆಯಲ್ಲಿ ತೋರ್ಬಂಗ್ ಹಾಗೂ ಚುರಾಚಂದ್‌ಪುರ ಪ್ರದೇಶದಲ್ಲಿ ಗಲಭೆ ಉಂಟಾಯಿತು. 11 ಮಂದಿ ಗಾಯಗೊಂಡರು, ಕಾಂಗ್ಪೋಕಿ ಜಿಲ್ಲೆಯಲ್ಲಿ ಗುಂಡೇಟಿಗೆ ಇಬ್ಬರು ಮೃತಪಟ್ಟರು. ಪ್ರತಿಭಟನೆ ನಡೆಸಿದವರು ನಿಷೇಧಿತ ಕುಕಿ ಬಂಡುಕೋರರು ಎಂಬ ವದಂತಿ ಹಬ್ಬಿತು

ಬೆಂಕಿ ಹಚ್ಚಿದ ಸುಳ್ಳು ಸುದ್ದಿಗಳು

ಮೇ 4–8: ಕುಕಿಗಳು ಮೈತೇಯಿಗಳ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂಬಂತಹ ಸುಳ್ಳು ಸುದ್ದಿಗಳು ಮತ್ತು ತಿರುಚಲಾದ ವಿಡಿಯೊಗಳು ಹೆಚ್ಚಿನ ಸಂಖ್ಯೆಯಲ್ಲಿ ಹಂಚಿಕೆಯಾದವು. ಇದು ಹಿಂಸಾಚಾರ ಹೆಚ್ಚಲು ಕಾರಣವಾಯಿತು. ಆರು ಜಿಲ್ಲೆಗಳಲ್ಲಿ ಮಾತ್ರವಿದ್ದ ಗಲಭೆಯು ಇಂಫಾಲ್‌ಗೂ ಹಬ್ಬಿತು. ರಾಜ್ಯದಾದ್ಯಂತ ಅಂತರ್ಜಾಲವನ್ನು ಬಂದ್ ಮಾಡಲಾಯಿತು. ಪರಿಸ್ಥಿತಿ ಕೈ ಮೀರಿದರೆ, ಕಂಡಲ್ಲಿ ಗುಂಡು ಹಾರಿಸಲು ಸರ್ಕಾರ ಪೊಲೀಸರಿಗೆ ನಿರ್ದೇಶನ ನೀಡಿತು

ಪ್ರಧಾನಿ ಮೌನ

ಮೇ 9–14: ಮಣಿಪುರದ ಗಲಭೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಮೌನ ವಹಿಸಿರುವುದನ್ನು ಆಮ್ ಆದ್ಮಿ ಪಕ್ಷವು ಪ್ರಶ್ನಿಸಿತು. ರಾಜ್ಯದಲ್ಲಿ ಶಾಂತಿ ಕಾಪಾಡುವಲ್ಲಿ ರಾಜ್ಯ ಸರ್ಕಾರ ಸೋತಿದೆ ಎಂದು ಕಾಂಗ್ರೆಸ್ ದೂರಿತು. ಭದ್ರತಾ ಪಡೆಗಳಿಂದ, ಪೊಲೀಸ್ ಠಾಣೆಗಳಿಂದ ಶಸ್ತ್ರಾಸ್ತ್ರಗಳನ್ನು ಕದಿಯಲು ಆರಂಭಿಸಲಾಯಿತು

- ಬಿರೇನ್ ಸಿಂಗ್ ಅವರು ಬುಡಕಟ್ಟು ಸಮುದಾಯವನ್ನು ರಕ್ಷಿಸುವಲ್ಲಿ ಸಂಪೂರ್ಣ ಸೋತಿದ್ದಾರೆ. ಆದ್ದರಿಂದ ನಮ್ಮನ್ನು ಮಣಿಪುರದಿಂದ ಬೇರ್ಪಡಿಸಿ, ಪ್ರತ್ಯೇಕ ಆಡಳಿತ ವ್ಯವಸ್ಥೆಯನ್ನು ಮಾಡಿಕೊಡುವಂತೆ ಎಲ್ಲ 10 ಮಂದಿ ಕುಕಿ ಸಮುದಾಯದ ಶಾಸಕರು ಹಾಗೂ ಇಬ್ಬರು ಸಂಸದರು ಮನವಿ ಮಾಡಿದರು

ಶಾ–ಬಿರೇನ್ ಭೇಟಿ: ಬದಲಾದ ಆರೋಪ

- **ಮೇ 14**ರಂದು ಬಿರೇನ್ ಸಿಂಗ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದರು. ಮಾರನೆಯ ದಿನ ಪ್ರತಿಕಾ ಹೇಳಿಕೆ ನೀಡಿದ ಬಿರೇನ್ ಸಿಂಗ್ ಅವರು, 'ಕುಕಿ ಬಂಡುಕೋರರು ಮ್ಯಾನ್ಮಾರ್‌ನಿಂದ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಪಡೆದುಕೊಂಡು ಮಣಿಪುರದಲ್ಲಿ ದಾಳಿ ನಡೆಸುತ್ತಿದ್ದಾರೆ' ಎಂದು ಆರೋಪಿಸಿದರು
- ಕುಕಿ ಬಂಡುಕೋರರೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದು ಮಾಡುವಂತೆ ನಾಲ್ವರು ಬಿಜೆಪಿ ಶಾಸಕರು ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಮಾಡಿದರು
- 'ಶಾಂತಿ ಕಾಪಾಡಲು ಎಷ್ಟೇ ಪ್ರಯತ್ನಿಸುತ್ತಿದ್ದರೂ ಕುಕಿ ಬಂಡುಕೋರರು ದಾಳಿ ನಡೆಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಬಿರೇನ್ ಸಿಂಗ್ ಆರೋಪಿಸಿದರು

ಮಣಿಪುರಕ್ಕೆ ಶಾ ಭೇಟಿ

ಮೇ 29–ಜೂನ್ 22

- ಗೃಹ ಸಚಿವ ಅಮಿತ್ ಶಾ ಅವರು ಮಣಿಪುರಕ್ಕೆ ಭೇಟಿ ನೀಡಿದರು. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 'ಮನದ ಮಾತು' ರೇಡಿಯೊ ಕಾರ್ಯಕ್ರಮದಲ್ಲಿ ಮಣಿಪುರದ ಕುರಿತು ಪ್ರಸ್ತಾಪ ಮಾಡದೇ ಇದ್ದುದ್ದಕ್ಕೆ ಜನರು ರೇಡಿಯೊವನ್ನು ಒಡೆದು ಹಾಕಿ ಪ್ರತಿಭಟನೆ ನಡೆಸಿದರು
- ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿ ಹಲವು ಎನ್‌ಜಿಒಗಳು, ಮಣಿಪುರದ ಬಿಜೆಪಿ ಶಾಸಕ ಸೇರಿದಂತೆ ಹಲವರು ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ನ್ಯಾಯಾಲಯವು, ವಸ್ತುಸ್ಥಿತಿ ವರದಿ ನೀಡುವಂತೆ ಮಣಿಪುರ ಸರ್ಕಾರಕ್ಕೆ ಸೂಚಿಸಿತು. ಹಿಂಸಾಚಾರದಲ್ಲಿ 98 ಮಂದಿ ಮೃತಪಟ್ಟು, 310 ಮಂದಿ ಗಾಯಗೊಂಡಿದ್ದಾರೆ ಎಂದು ಮಣಿಪುರ ಸರ್ಕಾರ ಹೇಳಿತು

ಸರ್ವಪಕ್ಷಗಳ ಸಭೆ

ಜೂನ್ 24–30

- ಗೃಹ ಸಚಿವ ಅಮಿತ್ ಶಾ ಅವರು ಜೂನ್ 24ರಂದು ಸರ್ವಪಕ್ಷ ಸಭೆ ನಡೆಸಿದರು
- ಜೂನ್ 29ಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಎರಡು ದಿನಗಳ ಮಣಿಪುರ ಭೇಟಿ ಮಾಡಿದರು. 'ಕಾಂಗ್ರೆಸ್ ಒಂದು ಬೇಜವಾಬ್ದಾರಿ ಪಕ್ಷ' ಎಂದು ಬಿಜೆಪಿ ಆರೋಪಿಸಿತು

ಬೆತ್ತಲೆ ಮೆರವಣಿಗೆ: ವಿಡಿಯೊ ಬಹಿರಂಗ

ಜುಲೈ 19–28: ಇಬ್ಬರು ಕುಕಿ ಮಹಿಳೆಯರನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿ, ಲೈಂಗಿಕ ಕಿರುಕುಳ ನೀಡಿದ ವಿಡಿಯೊವೊಂದು ಜುಲೈ 19ರಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಯಿತು. ಈ ಘಟನೆಯು ದೇಶದ ಜನರನ್ನು ಬೆಚ್ಚಿಬೀಳಿಸಿತು. ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ಮಾಡಲಾಗಿದೆ ಎನ್ನುವುದೂ ಬೆಳಕಿಗೆ ಬಂದಿತು. ಈ ಘಟನೆಯು ಮೇ 4ರಂದೇ ನಡೆದಿತ್ತು. ಈ ಬಗ್ಗೆ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತವಾಗಿ ವಿಚಾರಣೆ ನಡೆಸಿತು. 'ಮಹಿಳೆಯನ್ನು ಹಿಂಸಾಚಾರಕ್ಕಾಗಿ ಅಸ್ತ್ರವನ್ನಾಗಿ ಬಳಸಿಕೊಳ್ಳಬಾರದು' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಅಭಿಪ್ರಾಯ ಪಟ್ಟರು. ಸದ್ಯ ಈ ಕೃತ್ಯದ ತನಿಖೆಯನ್ನು ಸಿಬಿಐಗೆ ನೀಡಲಾಗಿದೆ


ಆಧಾರ: ಎನ್.ಟೋಂಬಿ ಸಿಂಗ್ ಅವರ 'ಮಣಿಪುರ್: ಎ ಸ್ಟಡಿ' ಅಧ್ಯಯನ ಕೃತಿ, ಪಿ.ಲಲಿತ್ ಅವರ 'ಬ್ರೀಫ್ ಹಿಸ್ಟರಿ ಆಫ್ ದಿ ಮೈತೇಯಿ ಆಪ್ ಮಣಿಪುರ್' ಕೃತಿ, ಭಾರತ ಸರ್ಕಾರದ 'ಇಂಡಿಯನ್ ಕಲ್ಚರ್' ಇಲಾಖೆಯ 'ದಿ ಪುರೂಮ್ಸ್: ದಿ ಓಲ್ಡ್ ಕುಕಿ ಟ್ರೈಬ್ ಆಫ್ ಮಣಿಪುರ್' ಕೃತಿ, ಎಸ್.ಎಂ.ಎ.ಡಬ್ಲ್ಯು ಷಿಸ್ತಿ ಅವರ 'ಕುಕಿ ಅಪ್‌ರೈಸಿಂಗ್ ಇನ್ ಮಣಿಪುರ್:1919–20' ಕೃತಿ, ಪಿಟಿಐ, ಮಣಿಪುರ ಸರ್ಕಾರದ ಪ್ರಕಟಣೆಗಳು, ಮಣಿಪುರ ಪೊಲೀಸರ ಟ್ವೀಟ್‌ಗಳು

ನಾವು ನೋಡಿದ ಸಿನಿಮಾ

ಪುರುಷಾಹಂಕಾರ ಪ್ರಶ್ನಿಸುವ 'ರಾಮ'

ಕೌಸಲ್ಯಾ ಸುಪ್ರಜಾ ರಾಮ

- **ನಿರ್ದೇಶನ:** ಶಶಾಂಕ್
- **ನಿರ್ಮಾಣ:** ಕೌರವ ಪ್ರೊಡಕ್ಷನ್ ಹೌಸ್ ಹಾಗೂ ಶಶಾಂಕ್ ಸಿನಿಮಾಸ್
- **ತಾರಾಗಣ:** ಡಾರ್ಲಿಂಗ್ ಕೃಷ್ಣ, ಬೃಂದಾ ಆಚಾರ್ಯ, ಮಿಲನ ನಾಗರಾಜ್, ನಾಗಭೂಷಣ್, ರಂಗಾಯಣ ರಘು, ಸುಧಾ ಬೆಳವಾಡಿ, ಅಚ್ಯುತ್ ಕುಮಾರ್ ಮತ್ತಿತರರು



ಪ್ರೇಮಕಥೆಗಳೊಂದಿಗೆ ತೆರೆಯ ಮೇಲೆ ಬಂದಿದ್ದ ನಿರ್ದೇಶಕ ಶಶಾಂಕ್ ಅವರು ಈ ಬಾರಿ 'ತಾಯಿ' ಎಂಬ ಸೃಷ್ಟಿಯನ್ನು ಕೇಂದ್ರವಾಗಿಟ್ಟುಕೊಂಡು, ಪುರುಷಾಹಂಕಾರ ಪ್ರಶ್ನಿಸುವ ಕಥಾಹಂದರದ ಸಿನಿಮಾ ತಂದಿದ್ದಾರೆ. 'ತಾಯಿ'ಯ ಪ್ರೀತಿ, ಜವಾಬ್ದಾರಿ, ತ್ಯಾಗ, ಆಕೆಯ ಸಾವು ತರುವ ಬದಲಾವಣೆ ಇಂತಹ ಅಂಶಗಳನ್ನು ಇಟ್ಟುಕೊಂಡು ಈಗಾಗಲೇ ಬಂದಿರುವ ಸಿನಿಮಾಗಳಲ್ಲಿ ಕೊಂಚ ಭಿನ್ನವಾದ ಕಥೆಯ ಎಳೆಯನ್ನು ಈ ಸಿನಿಮಾ ಹೊಂದಿದೆ.

ಸಿದ್ದೇಗೌಡ(ರಂಗಾಯಣ ರಘು), ತಾನು ಒಬ್ಬ ಗಂಡಸು; ತನ್ನ ಪತ್ನಿ ಅಥವಾ ಮಹಿಳೆಯರು ಕೇವಲ ಗಂಡಸರ ಸೇವೆಗೆಂದೇ ಇರುವವರು ಎನ್ನುವ ಅಹಂಕಾರ ತುಂಬಿರುವ ವ್ಯಕ್ತಿ. ಜೊತೆಗೆ ತಾನೊಬ್ಬ ಪುರುಷ ಎಂಬ ಉಗ್ರಾಭಿಮಾನ. ತನ್ನ ಈ ವ್ಯಕ್ತಿತ್ವವನ್ನು ಬಾಲ್ಯದಲ್ಲೇ ಮಗ ರಾಮೇಗೌಡ ಅಲಿಯಾಸ್ ರಾಮನ(ಡಾರ್ಲಿಂಗ್ ಕೃಷ್ಣ) ತಲೆಗೆ ತುಂಬಿದಾತ. ಕಾಲ ಉರುಳಿದಂತೆ ಪತಿಯ ವ್ಯಕ್ತಿತ್ವ ಬದಲಾಗಬಹುದು ಎಂದು ಕಾಯುವ ಪತ್ನಿ, ರಾಮನ ಅಮ್ಮ ಕೌಸಲ್ಯಾ(ಸುಧಾ ಬೆಳವಾಡಿ). ಅಪ್ಪನಂತೇ ಪುರುಷಾಹಂಕಾರ ತುಂಬಿ ತುಳುಕುತ್ತಿರುವ 'ರಾಮ'ನ ಜೀವನಕ್ಕೆ ಕಾಲೇಜು ಜೀವನದಲ್ಲಿ 'ಶಿವಾನಿ'(ಬೃಂದಾ ಆಚಾರ್ಯ) ಬಂದ ಬಳಿಕ ಆಗುವ ಬದಲಾವಣೆಗಳೇ ಇಡೀ ಕಥೆಯ ಜೀವಾಳ. ಪುರುಷಾಹಂಕಾರವನ್ನೇ ಪ್ರಶ್ನಿಸುವ, ನಿಜವಾದ ಗಂಡಸು ಎಂದರೆ ಯಾರು? ಎಂದು ಅಪ್ಪನಿಗೇ ತಿಳಿಹೇಳುವ ಹಂತಕ್ಕೆ 'ರಾಮ' ಬದಲಾಗುವುದೇಕೆ ಎನ್ನುವುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಇಂತಹ ಘಟನೆಗಳ ನಡುವೆ ಬರುವ 'ಮುತ್ತುಲಕ್ಷ್ಮಿ'ಯೂ(ಮಿಲನ) ಕಥೆಯ ಮುಖ್ಯ ಪಾತ್ರ.

ಪ್ರತಿ ಪುರುಷರಲ್ಲೂ ಇರುವ (ಸಿದ್ದೇಗೌಡನಷ್ಟು ಇರದಿದ್ದರೂ) ಈ ಪುರುಷಾಹಂಕಾರದ ವಿಷಯವನ್ನು ಸ್ಥೂಲವಾಗಿ ತೆರೆ ಮೇಲೆ ತಂದಿದ್ದಾರೆ ನಿರ್ದೇಶಕರು. ಹಲವು ಮನೆಗಳಲ್ಲಿ ಅಡುಗೆಯಿಂದ ಹಿಡಿದು, ಮಕ್ಕಳ ಶೂಸ್ ಹಾಕುವವರೆಗೂ ಇಂದಿಗೂ ಈ ಕೆಲಸ ಮಹಿಳೆಯರದ್ದೇ. ಇದಕ್ಕೆ 'ಜವಾಬ್ದಾರಿ' ಎಂಬ ಹಣೆಪಟ್ಟಿ ಇದೆ. ಇವುಗಳನ್ನೇ ಈ ಸಿನಿಮಾ ಪ್ರಶ್ನಿಸಿದೆ. 'ಮೀಸೆ' ತಿರುವಿ, ಮತ್ತೊಮ್ಮೆ ಕೆಳಗಿಳಿಸಿ ಸಿನಿಮಾ ಮೂಲಕ ಸಂದೇಶ ನೀಡುವ ಪ್ರಯತ್ನ ನಿರ್ದೇಶಕರದ್ದು. ಈ ನಿಟ್ಟಿನಲ್ಲಿ ಸಿನಿಮಾ ಯಶಸ್ವಿಯಾಗಿದೆ. ಸಮಯದ ದೃಷ್ಟಿಯಿಂದ, ಕೆಲ ದೃಶ್ಯಗಳಿಗೆ ಕತ್ತರಿ ಹಾಕಿದ್ದರೆ ಸಿನಿಮಾ ಇನ್ನೂ ಪಕ್ವವಾಗುತ್ತಿತ್ತು.

ಡಾರ್ಲಿಂಗ್ ಕೃಷ್ಣ ಅವರಿಲ್ಲಿ ಮೂರು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಬೃಂದಾ ಆಚಾರ್ಯ ಅವರ ನಟನೆ ಲವಲವಿಕೆಯಿಂದ ಕೂಡಿದೆ. ಮಿಲನ ನಾಗರಾಜ್ ಅವರ ಪಾತ್ರ ಹಿಂದಿನ ಎಲ್ಲ ಪಾತ್ರಗಳಿಗಿಂತಲೂ ಭಿನ್ನ. ಕಥಾ ಬರವಣಿಗೆ ಕ್ಲೈಮ್ಯಾಕ್ಸ್‌ನಲ್ಲಿ ಮಂಕಾಗುತ್ತಾ ಅವರ ನಟನೆಯೂ ಒಂದೆರಡು ಕಡೆ ಅಸಹಜವೆನಿಸುತ್ತದೆ. ಕಥೆಯ ಪಾತ್ರಕ್ಕೆ ಈ ಎಲ್ಲ ನಟರೂ ನ್ಯಾಯ ಒದಗಿಸಿದ್ದಾರೆ. ರಂಗಾಯಣ ರಘು ಅವರು ಕಣ್ಣುಗಳಲ್ಲೇ ಸೋಲೊಪ್ಪಿಕೊಂಡಾಗ ಕಣ್ಣು ತೇವವಾಗುತ್ತದೆ. ಸುಧಾ ಬೆಳವಾಡಿ ಹಲವೆಡೆ ಮೌನದಲ್ಲೇ ಮಾತನಾಡಿದ್ದಾರೆ. ಮಾತುಗಳಲ್ಲೂ ಸೆಳೆಯುತ್ತಾರೆ. 'ರಾಮ'ನ ಜೊತೆಗಾರನಾಗಿ ಬರುವ 'ಸಂತು'(ನಾಗಭೂಷಣ್) 'ಲಕ್ಕಿಮ್ಯಾನ್' ನೆನಪುಗಳನ್ನು ಕೆದಕಿದ್ದಾರೆ. ನಗಿಸುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ.

ಒಂದೆರಡು ಕಡೆ ಕಥೆಯ ಬರವಣಿಗೆ ಪೇಲವವಾಗಿದೆ. ಉದಾಹರಣೆಗೆ ಕಥೆಯ ಆರಂಭದಲ್ಲಿ ನಾಯಕನಿಗೆ ಮಿದುಳು ನಿಷ್ಕ್ರಿಯವಾಗಿದೆ ಎನ್ನುವ ವೈದ್ಯರು, ಕೊನೆಯಲ್ಲಿ ಇದೊಂದು 'ಮೈನರ್ ಇಂಜ್ಯುರಿ' ಎನ್ನುವಾಗ ಆಶ್ಚರ್ಯವಾಗುವುದು ಖಚಿತ! ಹಾಡುಗಳಿಗೆ ಶಶಾಂಕ್ ಅವರು ಹೆಚ್ಚಿನ ಪ್ರಾಮುಖ್ಯ ನೀಡುತ್ತಾರೆ. ಈ ಸಿನಿಮಾದಲ್ಲೂ ಟೈಟಲ್ ಟ್ರ್ಯಾಕ್ ಹಾಗೂ 'ಪ್ರೀತಿಸುವೆ' ಹಾಡು ಗುನುಗುನುಗುವಂತಿವೆ.

ಅಭಿಲಾಷ್ ಪಿ.ಎಸ್.

ಪದಬಂಧ 5394


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪದ ಹೇಳಿ ಬಹುಮಾನವಾಗಿ ಪಡೆದ ಬಿಲ್ಲೆ (3)
3.ಇದು ಮುಖ್ಯವಾದುದು (3)
5.ಗುಂಪುಗಳನ್ನು ವಿಂಗಡಿಸುವ ಕ್ರಮ (5)
6.ಶರಧಿಯಲ್ಲಿ ಬಿದ್ದಿರುವ ಬಾಣ (2)
8.ನಾವಿಕನಿಗೆ ಪ್ರಾಪ್ತಿಯಾಗಿರುವ ಸ್ವರ್ಗ (2)
9.ಹತೋಟಿ ಸಂಖ್ಯೆಯೂ ಆದೀತು (2)
10.ಕಲಾವಿದನಿಗಾಗಿ ತೆರೆದ ಬಾಗಿಲು (2)
14.ಕೈಗೂಡದ ಆಸೆಯಿದು (5)
15.ಉಲ್ಟಾ ಕಾಣುತ್ತಿರುವ ಬೊಟ್ಟು (3)
16.ಅಪೇಕ್ಷೆಅಥವಾ ಹಂಬಲ (3)

ಮೇಲಿಂದ ಕೆಳಕ್ಕೆ

1.ಬೇರೆಯವರ ಅಧೀನದಲ್ಲಿರುವಿಕೆ (4)
2.ಎರಡಾಗಿ ಸೀಳಿದುದು (3)
3.ಓಂಕಾರವೆಂಬ ಮಂತ್ರ (3)
4.ಬೆಂಬಿಡದೆ ಕಾಡುವವನನ್ನು ಹೀಗೆನ್ನುವರು (4)
7.ಕನವರಿಕೆಯಲ್ಲಿ ಧರಿಸಿದ ಕುಪ್ಪಸ (3)
8.ನಾವೆಯನ್ನು ನಡೆಸುವವ (3)
9.ಮಂಗಳ ಗ್ರಹ ಇಲ್ಲಿ ಕಾಣುತ್ತಿದೆ (4)
11.ಬಲಾತ್ಕಾರದ ಆಡಳಿತವನ್ನು ಹೀಗನ್ನಿ(4)
12.ಸಂಗಡ ಇರುವವಳು (3)
13.ಬ್ರಾಹ್ಮಣನಿಲ್ಲಿ ತಿರುಗಿದ್ದಾನೆ (3)



5393ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಪ್ಪ 4.ಪಗಾರ
5.ಯವನಿಕೆ
6.ತಾರಾಪುಂಜ
7.ನವ 9.ನಗ
13.ವಾತಾಯನ
14.ಉಪವಾಸ
15.ಚುಂಬನ 16.ಕಂಬಿ

ಮೇಲಿಂದ ಕೆಳಕ್ಕೆ:
1.ತಾಪತ್ರಯ 2.ಕರತಾಡನ
3.ಮುನಿಸು
5.ಯಜಮಾನ
8.ವನವಾಸ
10.ಗಗನಚುಂಬಿ
11.ನಸುನಗು
12.ಮಂಪರು

ಸುಡೊಕು 5780

	4		2		9	6		1
9						2	7	4
	7	2	1		4			8
		4		3		1		2
2	8		6	9			4	
		7					6	5
	5							7
		6	8		2			
4	2			5		8		


5779 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜುಲೈ 29, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ಏಕಾದಶಿ ಗಂ. 13-02 ನಕ್ಷತ್ರ: ಜ್ಯೇಷ್ಠ ಗಂ. 23-35 ಯೋಗ: ಬ್ರಹ್ಮ ಗಂ. 09-34 ಕರಣ: ವಿಷ್ಟಿ ಗಂ. 13-06, ಕರ್ಕಾಟಕ ಮಾಸದ 12 ನೇ ದಿನ,
ಮಳೆನಕ್ಷತ್ರ: ಪುಷ್ಯ 3. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-19
ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 10 ಮೊಹರಮ್
ಅದೃಷ್ಟ ಸಂಖ್ಯೆ : 3, 8

ಮೇಷ: ಯಾವುದೇ ರೀತಿಯ ವಿದೇಶಿ ಒಪ್ಪಂದಗಳನ್ನು ಮಾಡಿಕೊಳ್ಳದಿರುವಂತೆ ತೀರ್ಮಾನಿಸುವುದು ಲೇಸು. ಪ್ರತಿಪಕ್ಷಗಳ ಆಪಾದನೆಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡುವಿರಿ. ಅನಿಶ್ಚತೆಯ ಭಾವ ದೂರಾಗಲಿದೆ.

ವೃಷಭ: ಸಿವಿಲ್ ಎಂಜಿನಿಯರ್‌ಗೆ ಹೆಚ್ಚು ಲಾಭದಾಯಕದ ದಿನ. ಲಕ್ಷ್ಮಿ ವೆಂಕಟೇಶ್ವರನನ್ನು ಅನನ್ಯ ಭಕ್ತಿಯಿಂದ ಆರಾಧಿಸಿ ದಾರಿದ್ರ್ಯ ದೂರವಾಗುವುದು ಮತ್ತು ಸಾಮಾಜಿಕವಾಗಿ ಗೌರವವು ಇಮ್ಮಡಿಗೊಳ್ಳಲಿದೆ.

ಮಿಥುನ: ಕ್ಷುಲ್ಲಕ ಕಾರಣಕ್ಕೆ ಉಂಟಾದ ಮನಸ್ತಾಪಗಳು ಬಗೆಹರಿದು ನೆಮ್ಮದಿ ಕಾಣುವಿರಿ. ಅದೃಷ್ಟ ದೇವತೆ ನಿಮ್ಮ ಕೈ ಹಿಡಿದಿದ್ದಾಳೆ. ನಿಮ್ಮ ವ್ಯಾಪಾರ ವ್ಯವಹಾರ ಅಧಿಕ ವರಮಾನಗಳನ್ನು ತರಲಿದೆ. ಆಕಸ್ಮಿಕ ಧನಲಾಭ ಉಂಟಾಗಲಿದೆ.

ಕರ್ಕಾಟಕ: ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ಅಧಿಕ ಪರಿಶ್ರಮ ಹಾಕಿದರೂ ಅದೃಷ್ಟವು ಕೈ ಕೊಡಲಿದೆ. ವನಸ್ಪತಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ. ಕೆಲಸ ಕಾರ್ಯಗಳ ಬಗ್ಗೆ ನಿಗಾ ಕೊಡುವಂತೆ ಅಧಿಕಾರಿಗಳಿಂದ ಆದೇಶವಾಗುವುದು.

ಸಿಂಹ: ಮಗಳ ಮದುವೆಯ ವಿಷಯದಲ್ಲಿ ಜವಾಬ್ದಾರಿಯ ಹಂಚಿಕೆಗೆ ಸಂಬಂಧಿಸಿದಂತೆ ಮಗನೊಡನೆ ಮುಕ್ತ ಮನಸ್ಸಿನ ಮಾತುಕತೆ ನಡೆಯುವುದು. ನೀವಿಂದು ಸ್ನೇಹಿತರಿಂದ ಅಪೇಕ್ಷಿಸುವ ಸಹಕಾರವು ಸಿಗಲಿದೆ.

ಕನ್ಯಾ: ಖರ್ಚುವೆಚ್ಚಗಳು ನಿಯಂತ್ರಣದಲ್ಲಿ ಇರಲಿಕ್ಕಾಗಿ ಹರಸಾಹಸ ಪಡಬೇಕಾಗುವುದು. ನೇರ ನಡೆ-ನುಡಿಯು ವ್ಯವಹಾರ ಕುಂಠಿತಗೊಳಿಸಬಹುದು. ಹಣದ ಅಡಚಣೆ ಇರುವುದಿಲ್ಲ. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ತುಲಾ: ಲೇಖನ ಬರೆಯುವುದರಿಂದ ಜನ ಸಂಪರ್ಕ ಅಭಿವೃದ್ಧಿಯಾಗ-ಲಿದೆ.ಮದುವೆಯ ನಿಮಿತ್ತ ಒಡವೆಗಳ ಖರೀದಿ ಮಾಡುವಿರಿ. ಸುಗಂಧದ ವ್ಯಾಪಾರದಿಂದ ಲಾಭ. ಧಾನ್ಯ ವರ್ತಕರಿಗೆ ಉತ್ತಮವಾದ ಲಾಭವಿರುವುದು.

ವೃಶ್ಚಿಕ: ವಾಣಿಜ್ಯ ವ್ಯವಹಾರಗಳ ಸಂಬಂಧಪಟ್ಟ ಮುಖ್ಯ ವ್ಯಕ್ತಿಗಳನ್ನು ಭೇಟಿ ಮಾಡುವ ನಿಮ್ಮ ಕೆಲಸದಲ್ಲಿ ವಿಘ್ನ ಇರಲಿದೆ. ಬುದ್ಧಿಶಕ್ತಿಯನ್ನು ಒಳ್ಳೆಯ ಕೆಲಸಗಳಿಗಾಗಿ ಉಪಯೋಗಿಸಿಕೊಂಡಲ್ಲಿ ಯಶಸನ್ನು ಪಡೆಯುವಿರಿ.

ಧನು: ಕೆಲಸದಲ್ಲಿ ಬದಲಾವಣೆ ಬಯಸಿದಲ್ಲಿ ಬೇರೆ ಸ್ಥಳದಲ್ಲಿ ಕಾರ್ಯ ನಿರ್ವಹಿಸಲು ಸಿದ್ಧರಾಗಿ. ಏಕಮುಖ ಪ್ರತಿಭೆಯನ್ನು ನಾಶಮಾಡಿ ಇನ್ನಿತರೇ ವಿಷಯಗಳಿಗೂ ಅಷ್ಟೇ ಪ್ರಾಮುಖ್ಯ ನೀಡಿ. ಮಗನಿಂದ ಶುಭ ಸುದ್ದಿ ಕೇಳುವಿರಿ.

ಮಕರ: ಪ್ರೀತಿಯ ಜೀವನದಲ್ಲಿ ಅನೇಕ ದೀರ್ಘಕಾಲೀನ ಬದಲಾವಣೆಗಳಾ-ಗಬಹುದು. ಆರ್ಥಿಕವಾಗಿ ಲೇವಾದೇವಿ ವ್ಯವಹಾರದಲ್ಲಿ ಜಾಗರೂಕತೆ ಇರಲಿ. ಆಫೀಸಿನ ಕೆಲಸದಲ್ಲಿ ಎಲ್ಲರ ಮಾತನ್ನು ತಾಳ್ಮೆಯಿಂದ ಕೇಳಿರಿ.

ಕುಂಭ: ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ನಿಮ್ಮ ಸಾಮರ್ಥ್ಯ ತೋರಿಬರಲಿದೆ. ನಿಮ್ಮ ತಮಾಷೆಯ ಮಾತುಗಳು ಹಿರಿಯರ ಮನಸ್ಸನ್ನು ನೋಯಿಸುವುದು, ಮಾತಿನಲ್ಲಿ ಹಿಡಿತವಿರಲಿ. ಶೀತಬಾಧೆ ಕಡಿಮೆಯಾಗಲಿದೆ.

ಮೀನ: ಸಂಗೀತಾಭ್ಯಾಸಿಗರಿಗೆ ದೊಡ್ಡ ವೇದಿಕೆಯಲ್ಲಿ ಗಾಯನ ಪ್ರದರ್ಶಿಸುವ ಅವಕಾಶ ದೊರೆಯುತ್ತದೆ. ಬೇರೆಯವರ ಸಹಾಯ ಪಡೆಯದೆ ನಿಮ್ಮ ಶ್ರಮದಿಂದಲೇ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದು ಲಾಭದಾಯಕ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1300-1400
ಹಸಿರು ಸಾಧಾರಣ	1000-1100
ಹಸಿರು ಉತ್ತಮ	1250-1350
ಹಸಿರು ಅತಿ ಉತ್ತಮ	1600-1800
ಕಾಳುಮೆಣಸು	560
ಅಡಿಕೆ	
ಕುಮಟಾ	
ಚಿಪ್ಪು	31899-34899
ಕೋಕ	22099-35699
ಫ್ಯಾಕ್ಟರಿ	14609-22849
ಹಳೆಚಾಲಿ	39019-41439
ಹೊಸಚಾಲಿ	38899-42069
ಶಿವಮೊಗ್ಗ	
ಬೆಟ್ಟೆ	50569-53830
ಗೊರಬಲು	17500-43099
ರಾಶಿ	41399-56612
ಸರಕು	58009-81100
ಸಿದ್ದಾಪುರ	
ಬಿಳಿಗೋಟು	31809-35809
ಚಾಲಿ	38899-42569
ಕೋಕ	30909-35699
ರಾಶಿ	47099-51809
ತಟ್ಟಿಬೆಟ್ಟೆ	40669-46099
ಶಿರಸಿ	
ಬೆಟ್ಟೆ	38619-48999
ಬಿಳಿಗೋಟು	24199-37300
ಚಾಲಿ	38218-43111
ಕೆಂಪುಗೋಟು	22699-39199
ರಾಶಿ	48598-52499
ಯಲ್ಲಾಪುರ	
ಬಿಳಿಗೋಟು	28612-37212
ಚಾಲಿ	37412-43201
ಕೋಕ	22313-35100
ಕೆಂಪುಗೋಟು	31542-37000
ರಾಶಿ	46403-54790
ತಟ್ಟಿಬೆಟ್ಟೆ	40219-49830

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14250	14000	163.75 ಸೆಂಟ್ಸ್
ಎಸಿ	7140	7100	7000	
ಆರ್‌ಪಿ	10100	10300	10200	ಲಂಡನ್
ಆರ್‌ಸಿ	6225	246	6000	2639 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

28-07-2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	12100-12200
ದಪ್ಪ ಗುಜರಾತ್(ಹೊಸ)	12900-13000

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1860 (1880)
ಒಂದು ವಾರದ ಡೆಲಿವರಿ	1855 (1875)
ಸೋಯಾ ಕಚ್ಚಾ	935 (945)
ಪಾಮ್ ವಾರದ ಡೆಲಿವರಿ	892 (898)
ಸೂರ್ಯಕಾಂತಿ ಎಣ್ಣೆ ಕಚ್ಚಾ	940 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,200 (59,100)
ಬೆಳ್ಳಿ ಕೆ.ಜಿ
73,400 (74,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	19,659
ಇಂದಿನ ಅಂತ್ಯ	19,646
▼	13
ದಿನದ ಕನಿಷ್ಠ	19,563

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹465

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹222-433
ದ್ವಿತಳಿ (ಬಿ.ವಿ) ₹255-603

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144.50
ಗುಡ್ ಲಾಟ್	₹127.50

(ಪ್ರತಿ ಕೆ.ಜಿಗೆ)

ಐಎಫ್‌ಎಸ್‌ಸಿ ಮೂಲಕವೂ ನೋಂದಣಿ: ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ

ವಿದೇಶದಿಂದ ಬಂಡವಾಳ ಸಂಗ್ರಹ ಅವಕಾಶ

ಮುಂಬೈ (ಪಿಟಿಐ): ಭಾರತದ ಕಂಪನಿಗಳು ವಿದೇಶಿ ಷೇರುಪೇಟೆಗಳಲ್ಲಿ ಇನ್ನು ಮುಂದೆ ನೇರವಾಗಿ ನೋಂದಾಯಿತ ಆಗಬಹುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

2020ರ ಮೇ ತಿಂಗಳಲ್ಲಿ ಕೇಂದ್ರ ಸರ್ಕಾರವು ಕೋವಿಡ್ ಪರಿಹಾರ ಪ್ಯಾಕೇಜ್‌ನ ಭಾಗವಾಗಿ, ಕಂಪನಿಗಳು ವಿದೇಶಿ ಬಂಡವಾಳ ಮಾರುಕಟ್ಟೆಗಳಲ್ಲಿ ನೇರವಾಗಿ ನೋಂದಾಯಿತ ಆಗಬಹುದು ಎಂದು ಘೋಷಿಸಿತ್ತು. ಆದರೆ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿರಲಿಲ್ಲ.

ಮುಖ್ಯಾಂಶಗಳು

- ಹೆಚ್ಚಲಿದೆ ವಿದೇಶಿ ಬಂಡವಾಳ ಮಾರುಕಟ್ಟೆಗಳ ಲಭ್ಯತೆ
- ನಿಯಮಗಳನ್ನು ಶೀಘ್ರವೇ ಪ್ರಕಟಿಸಲಿರುವ ಕೇಂದ್ರ
- ನವೋದ್ಯಮಗಳಿಗೆ ಹೆಚ್ಚಿನ ಅನುಕೂಲ ಸಾಧ್ಯತೆ

ವಿದೇಶಗಳಲ್ಲಿ ನೇರವಾಗಿ ನೋಂದಾಯಿತ ಆಗಲು ಅವಕಾಶ ಕಲ್ಪಿಸಿರುವುದರಿಂದ ಭಾರತದ ಕಂಪನಿಗಳಿಗೆ ವಿದೇಶಿ ಷೇರುಪೇಟೆಗಳ ಮೂಲಕ ಬಂಡವಾಳ ಸಂಗ್ರಹಿಸಲು ಸಾಧ್ಯವಾಗುತ್ತದೆ.

'ಭಾರತದ ಷೇರುಪೇಟೆಗಳಲ್ಲಿ ನೋಂದಾಯಿತ ಆಗಿರುವ ಹಾಗೂ ನೋಂದಾಯಿತ ಆಗಿಲ್ಲದ ಕಂಪನಿಗಳು ಗುಜರಾತ್‌ನ ಅಂತರರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರದ (ಐಎಫ್‌ಎಸ್‌ಸಿ) ಮೂಲಕ ನೇರವಾಗಿ ನೋಂದಾಯಿತವಾಗಿ ಬಂಡವಾಳ ಸಂಗ್ರಹಿಸುವ ಅವಕಾಶ ಕಲ್ಪಿಸಲು ಕೂಡ ತೀರ್ಮಾನಿಸಲಾಗಿದೆ' ಎಂದು ನಿರ್ಮಲಾ ಅವರು ತಿಳಿಸಿದ್ದಾರೆ.

ಈ ತೀರ್ಮಾನದಿಂದಾಗಿ ದೇಶದ ಕಂಪನಿಗಳಿಗೆ ಜಾಗತಿಕ ಬಂಡವಾಳ ಮಾರುಕಟ್ಟೆಗಳು ಲಭ್ಯವಾಗುತ್ತವೆ ಎಂದು ಅವರು ಹೇಳಿದ್ದಾರೆ. ಭಾರತದ ಕಂಪನಿಗಳು ವಿದೇಶಿ ಷೇರುಪೇಟೆಗಳಲ್ಲಿ ನೇರವಾಗಿ ನೋಂದಾಯಿತ ಆಗುವುದಕ್ಕೆ ಅಗತ್ಯವಿರುವ ನಿಯಮಗಳನ್ನು ಇನ್ನು ಕೆಲವು ವಾರಗಳಲ್ಲಿ ಅಧಿಸೂಚನೆಯಲ್ಲಿ ಪ್ರಕಟಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈಗಿರುವ ನಿಯಮಗಳ ಅನ್ವಯ, ದೇಶದ ಕಂಪನಿಗಳು ವಿದೇಶಿ ಬಂಡವಾಳ ಮಾರುಕಟ್ಟೆಗಳಿಂದ ಬಂಡವಾಳ ಸಂಗ್ರಹಿಸಲು ಅಮೆರಿಕನ್ ಡೆಪಾಸಿಟರಿ ರಿಸೀಪ್ಟ್ಸ್ (ಎಡಿಆರ್) ಮತ್ತು ಗ್ಲೋಬಲ್ ಡೆಪಾಸಿಟರಿ ರಿಸೀಪ್ಟ್ಸ್‌ನ (ಜಿಡಿಆರ್) ಮೊರೆ ಹೋಗುತ್ತವೆ. ಇನ್ಫೊಸಿಸ್, ವಿಪ್ರೊ ಕೂಡ ಇವುಗಳ ಮೂಲಕ ಬಂಡವಾಳ ಸಂಗ್ರಹಿಸಿವೆ.

ಕೇಂದ್ರದ ಹೊಸ ಕ್ರಮವು 1 ಬಿಲಿಯನ್ ಅಮೆರಿಕನ್ ಡಾಲರ್‌ಗಿಂತ (₹8,224 ಕೋಟಿ) ಹೆಚ್ಚಿನ ಮಾರುಕಟ್ಟೆ ಮೌಲ್ಯ ಹೊಂದಿರುವ ಭಾರತದ ನವೋದ್ಯಮಗಳಿಗೆ ನೆರವಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಎಪಿವೈ ಎಲ್ಲರನ್ನೂ ತಲುಪಲಿ: ಹರದೀಪ್ ಅಹ್ಲುವಾಲಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಟಲ್ ಪಿಂಚಣಿ ಯೋಜನೆ (ಎಪಿವೈ) ರಾಜ್ಯದ ಮೂಲೆ ಮೂಲೆಯನ್ನೂ ತಲುಪುವಂತೆ ಆಗಬೇಕು ಎಂದು ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಹರದೀಪ್ ಸಿಂಗ್ ಅಹ್ಲುವಾಲಿಯಾ ಹೇಳಿದರು.

2022–23ನೆಯ ಹಣಕಾಸು ವರ್ಷದಲ್ಲಿ ಎಪಿವೈ ಯೋಜನೆಯ ಅಡಿಯಲ್ಲಿ 7 ಲಕ್ಷ ಜನರನ್ನು ನೋಂದಾಯಿಸುವ ಗುರಿ ಹೊಂದಲಾಗಿತ್ತು. ಆದರೆ 5.92 ಲಕ್ಷ ನೋಂದಣಿ ಮಾತ್ರ ಆಗಿದೆ ಎಂದು ಅಹ್ಲುವಾಲಿಯಾ ವಿವರಿಸಿದರು.

ಎಪಿವೈ ಹೆಚ್ಚಿನ ಜನರಿಗೆ ತಲುಪುವಂತೆ ಆಗಬೇಕು ಎಂಬ ಉದ್ದೇಶದಿಂದ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯು, ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಪಿಎಫ್‌ಆರ್‌ಡಿಎ) ಜೊತೆಗೂಡಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಸಂಘಟಿತ ವಲಯದವರನ್ನು ಗುರಿಯಾಗಿಸಿಕೊಂಡು ರೂಪಿಸಿರುವ 'ಎಪಿವೈ'ಗೆ 18 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ, 40 ವರ್ಷದೊಳಗಿನ ಯಾರು ಕೂಡ ಸೇರಬಹುದು. 60 ವರ್ಷ ವಯಸ್ಸು ತುಂಬಿದ ನಂತರದಲ್ಲಿ, ನಿಶ್ಚಿತ ಮೊತ್ತ ಪಿಂಚಣಿ ರೂಪದಲ್ಲಿ ಸಿಗುತ್ತದೆ. ರಾಜ್ಯದಲ್ಲಿ ಇದುವರೆಗೆ ಒಟ್ಟು 30.66 ಲಕ್ಷ ಮಂದಿ ಎಪಿವೈ ವ್ಯಾಪ್ತಿಗೆ ಬಂದಿದ್ದಾರೆ.

ಐದು ವರ್ಷಗಳಲ್ಲಿ ₹3,300 ಕೋಟಿ ಹೂಡಿಕೆ

ಎಎಂಡಿ: ಬೆಂಗಳೂರಿನಲ್ಲಿ ಅತಿದೊಡ್ಡ ವಿನ್ಯಾಸ ಕೇಂದ್ರ

ನವದೆಹಲಿ (ಪಿಟಿಐ): ಅಮೆರಿಕದ ಎಎಂಡಿ ಕಂಪನಿಯು ಬೆಂಗಳೂರಿನಲ್ಲಿ 5 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ವಿನ್ಯಾಸ ಕೇಂದ್ರವನ್ನು ತೆರೆಯಲಿದೆ. ಇದು ಈ ಕಂಪನಿಯ ವಿಶ್ವದ ಅತಿದೊಡ್ಡ ವಿನ್ಯಾಸ ಕೇಂದ್ರವಾಗಲಿದೆ.

ಕಂಪನಿಯು ಭಾರತದಲ್ಲಿ 5 ವರ್ಷಗಳಲ್ಲಿ ₹3,300 ಕೋಟಿ ಬಂಡವಾಳ ಹೂಡಿಕೆ ಮಾಡುವುದಾಗಿ ಶುಕ್ರವಾರ ಹೇಳಿದೆ. ಎಎಂಡಿ ಕಂಪನಿಯ ಬೆಂಗಳೂರಿನ ಕೇಂದ್ರವು ವರ್ಷಾಂತ್ಯಕ್ಕೆ ಮುನ್ನ ಕಾರ್ಯ ಆರಂಭಿಸುವ ನಿರೀಕ್ಷೆ ಇದೆ.

'ಭಾರತದಲ್ಲಿ ಅತಿದೊಡ್ಡ ವಿನ್ಯಾಸ ಕೇಂದ್ರ ಸ್ಥಾಪಿಸುತ್ತಿರುವುದು ಮತ್ತು ಭಾರತದಲ್ಲಿ ಎಎಂಡಿ ಪಾಲುದಾರಿಕೆ ವಿಸ್ತರಣೆ ಆಗುತ್ತಿರುವುದು ವಿಶ್ವ ದರ್ಜೆಯ ಸೆಮಿಕಂಡಕ್ಟರ್ ವಿನ್ಯಾಸ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ನಮ್ಮ ಎಂಜಿನಿಯರ್‌ಗಳು ಮತ್ತು ಸಂಶೋಧಕರಿಗೆ ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ' ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಎಎಂಡಿ ಕಂಪನಿಯು ಬೆಂಗಳೂರು, ದೆಹಲಿ, ಮುಂಬೈ ಸೇರಿದಂತೆ 10 ಸ್ಥಳಗಳಲ್ಲಿ ಕಚೇರಿಯನ್ನು ಹೊಂದಿದೆ.

ಎರಡೂವರೆ ವರ್ಷದಲ್ಲಿ ಭಾರತದಲ್ಲಿ ಚಿಪ್ ತಯಾರಿ: ವೇದಾಂತ

ಗಾಂಧಿನಗರ (ಪಿಟಿಐ): ಭಾರತದಲ್ಲಿಯೇ ತಯಾರಾದ ಸೆಮಿಕಂಡಕ್ಟರ್ ಚಿಪ್‌ಗಳು ಇನ್ನು ಎರಡೂವರೆ ವರ್ಷಗಳಲ್ಲಿ ಸಿದ್ಧವಾಗಲಿವೆ ಎಂದು ವೇದಾಂತ ಸಮೂಹದ ಅಧ್ಯಕ್ಷ ಅನಿಲ್ ಅಗರ್ವಾಲ್ ಹೇಳಿದ್ದಾರೆ.

ವೇದಾಂತ ಸಮೂಹವು ಚಿಪ್ ತಯಾರಿಕೆಗೆ ಮೂರು ತಂತ್ರಜ್ಞಾನ ಪಾಲುದಾರರ ಜೊತೆ ಮಾತುಕತೆ ನಡೆಸುತ್ತಿದೆ ಎಂದು ಅವರು ತಿಳಿಸಿದ್ದಾರೆ. ಸೆಮಿಕಾನ್‌ಇಂಡಿಯಾ 2023 ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1850 (1870)
ಸೋಯಾ (ರಿಫೈನ್ಡ್)	₹975 (985)
ಸೂರ್ಯಕಾಂತಿ (ರಿಫೈನ್ಡ್)	₹985 (985)
ಪಾಮೋಲಿನ್	₹894 (900)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8500-9710
ತುಮಕೂರು	---
ತುರುವೇಕೆರೆ	₹9500-9800

ಕಾರು ಸಾಲ: 'ಬಿಒಬಿ'ಯಿಂದ ಸ್ಥಿರ ಬಡ್ಡಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡ (ಬಿಒಬಿ), ಕಾರು ಸಾಲ ಪಡೆಯುವ ಗ್ರಾಹಕರಿಗೆ ಸ್ಥಿರ ಬಡ್ಡಿದರದ ಆಯ್ಕೆಯನ್ನೂ ನೀಡಲು ಆರಂಭಿಸಿದೆ. ಕಾರು ಸಾಲ ಪಡೆಯುವಾಗಸ್ಥಿರಬಡ್ಡಿದರಅಥವಾಬದಲಾಗುವ ಬಡ್ಡಿದರದ ಆಯ್ಕೆ ಮಾಡಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಎಂಐ ಮೊತ್ತವನ್ನು ತಿಂಗಳ ಬಾಕಿ ಬದಲಾಗಿ ಪ್ರತಿ ದಿನದ ಬಾಕಿಯ ಆಧಾರದ ಮೇಲೆ ಲೆಕ್ಕಹಾಕುವ ಸೌಲಭ್ಯವನ್ನು ಕೂಡ ನೀಡಲಾಗುತ್ತಿದೆ ಎಂದು ಬ್ಯಾಂಕ್ ಹೇಳಿದೆ. ಈ ಕೊಡುಗೆಗಳು ವಿದ್ಯುತ್ ಚಾಲಿತ ವಾಹನ ಖರೀದಿಸುವವರಿಗೆ ಕೂಡ ಲಭ್ಯವಾಗಲಿವೆ.

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1400-1600
ಮಧ್ಯಮ	₹1000-1200
ಸಣ್ಣ	₹800-1000

ಐಒಸಿಗೆ ₹13,750 ಕೋಟಿ ಲಾಭ

ನವದೆಹಲಿ (ಪಿಟಿಐ): ತೈಲೋತ್ಪನ್ನ ವಲಯದ ದೇಶದ ಪ್ರಮುಖ ಕಂಪನಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹13,750 ಕೋಟಿಗೆ ತಲುಪಿದೆ.

ಜೂನ್ ತ್ರೈಮಾಸಿಕದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆ ಕಂಡಿದ್ದರೂ ಕಂಪನಿಯು ಮಾರಾಟ ದರದಲ್ಲಿ ಪರಿಷ್ಕರಣೆ ಮಾಡಿರಲಿಲ್ಲ. ಹೀಗಾಗಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದಿಂದ ಬರುವ ಗಳಿಕೆ ಹೆಚ್ಚಾಯಿತು. ಇದು ಈ ಪ್ರಮಾಣದ ಲಾಭ ಗಳಿಸಲು ಕಾರಣವಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹1,992.53 ಕೋಟಿಯಷ್ಟು ನಷ್ಟ ಅನುಭವಿಸಿತ್ತು. ಮಾರ್ಚ್ ತ್ರೈಮಾಸಿಕದಲ್ಲಿ ಆಗಿದ್ದ ಲಾಭಕ್ಕೆ ಹೋಲಿಸಿದರೆ (₹10,058 ಕೋಟಿ) ಶೇ 37ರಷ್ಟು ಏರಿಕೆ ಕಂಡುಬಂದಿದೆ ಎಂದು ಐಒಸಿ ಷೇರುಪೇಟೆಗೆ ಮಾಹಿತಿ ನೀಡಿದೆ.

2021ರ ಏಪ್ರಿಲ್‌ನಿಂದ 2022ರ ಮಾರ್ಚ್ ಅವಧಿಯಲ್ಲಿ ಆಗಿದ್ದ ₹24,184 ಕೋಟಿಯಷ್ಟು ಲಾಭದ ಅರ್ಧದಷ್ಟು ಲಾಭ ಈ ತ್ರೈಮಾಸಿಕದಲ್ಲಿ ಆಗಿದೆ.

ಕಾರ್ಯಾಚರಣೆ ವರಮಾನವು ಶೇ 2.36ರಷ್ಟು ಇಳಿಕೆ ಕಂಡಿದ್ದು ₹2.21 ಲಕ್ಷ ಕೋಟಿಗೆ ತಲುಪಿದೆ.

ನೆಸ್ಲೆ: ₹4,200 ಕೋಟಿ ಹೂಡಿಕೆ

ಎಫ್‌ಎಂಸಿಜಿ ಕಂಪನಿ ನೆಸ್ಲೆ ಇಂಡಿಯಾ ಭಾರತದಲ್ಲಿ 2025ರ ಒಳಗಾಗಿ ₹4,200 ಕೋಟಿ ಹೂಡಿಕೆ ಮಾಡಲಿದ್ದು, ಒಡಿಶಾದಲ್ಲಿ 10ನೇ ತಯಾರಿಕಾ ಘಟಕವನ್ನೂ ತೆರೆಯಲಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾರಾಯಣನ್ ಶುಕ್ರವಾರ ತಿಳಿಸಿದ್ದಾರೆ.

2023ರಿಂದ 2025ರ ನಡುವಿನ ಅವಧಿಯಲ್ಲಿ ಒಟ್ಟು ₹4,200 ಕೋಟಿ ಹೂಡಿಕೆ ಮಾಡಲು ಉದ್ದೇಶಿಸಲಾಗಿದೆ. ಅದರಲ್ಲಿ ₹900 ಕೋಟಿ ಮೊತ್ತದ ಹೊಸ ಘಟಕವು ಒಡಿಶಾದಲ್ಲಿ ಸ್ಥಾಪನೆ ಆಗಲಿದೆ ಎಂದು ಹೇಳಿದ್ದಾರೆ.

ಎಚ್–1ಬಿ ವೀಸಾ: 2ನೇ ಸುತ್ತಿನ ಲಾಟರಿ ಆಯ್ಕೆ ಪ್ರಕ್ರಿಯೆ ಶೀಘ್ರ

ವಾಷಿಂಗ್ಟನ್ (ಪಿಟಿಐ): 2024ನೇ ಆರ್ಥಿಕ ವರ್ಷದಲ್ಲಿ ಎಚ್–1ಬಿ ವೀಸಾ ಹಂಚಿಕೆಗಾಗಿ ಎರಡನೇ ಸುತ್ತಿನ ಲಾಟರಿ ಆಯ್ಕೆ ಪ್ರಕ್ರಿಯೆ ಶೀಘ್ರದಲ್ಲಿಯೇ ನಡೆಯಲಿದೆ ಎಂದು ಅಮೆರಿಕದ ಇಮಿಗ್ರೇಷನ್ ಏಜೆನ್ಸಿಯು ಗುರುವಾರ ಪ್ರಕಟಿಸಿದೆ.

ಈ ವರ್ಷಕ್ಕೆ ನಿಗದಿಯಾಗಿರುವ ಗುರಿ ತಲುಪಲು 'ಹೆಚ್ಚುವರಿ ನೋಂದಣಿ'ಯಿಂದ ಆಯ್ಕೆ ಪ್ರಕ್ರಿಯೆಯು ಅಗತ್ಯವಾಗಿದೆ ಎಂದು ಏಜೆನ್ಸಿಯು ಅಭಿಪ್ರಾಯಪಟ್ಟಿದೆ. ಈ ನಿರ್ಧಾರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾರತ ಮೂಲದ ವೃತ್ತಿಪರರಿಗೆ ನೆರವಾಗಲಿದೆ.

ಅಮೆರಿಕ ಪೌರತ್ವ ಮತ್ತು ವಲಸಿಗರ ಸೇವೆ (ಯುಎಸ್‌ಸಿಐಎಸ್) ವಿಭಾಗವು ಈ ಕುರಿತ ಹೇಳಿಕೆಯಲ್ಲಿ, ಈಗಾಗಲೇ ವಿದ್ಯುನ್ಮಾನ ನೋಂದಣಿ ಪ್ರಕ್ರಿಯೆ ಮೂಲಕ ಸಲ್ಲಿಸಿರುವ ಅರ್ಜಿಗಳಲ್ಲಿ ರ್‍ಯಾಂಡಮ್ ಮಾದರಿಯಲ್ಲಿ ಹೆಚ್ಚುವರಿ ನೋಂದಣಿಗಳ ಆಯ್ಕೆ ನಡೆಯಲಿದೆ ಎಂದು ತಿಳಿಸಿದೆ. ಮಾರ್ಚ್ ತಿಂಗಳಲ್ಲಿ ಮೊದಲ ಸುತ್ತಿನ ಆಯ್ಕೆ ಪ್ರಕ್ರಿಯೆ ನಡೆದಿತ್ತು. 2024ನೇ ಹಣಕಾಸು ವರ್ಷಕ್ಕಾಗಿ ನೋಂದಣಿ ಮಾಡಿರುವವರು ಮಾತ್ರ ಎಚ್–1ಬಿ ವೀಸಾಗೆ ಅರ್ಹರಾಗಿದ್ದಾರೆ. ನೋಂದಣಿ ಪ್ರಕ್ರಿಯೆಯು ಏಪ್ರಿಲ್ 1, 2023ರಿಂದ ಜೂನ್ 30, 2023ರವರೆಗೆ ನಡೆದಿತ್ತು.

ನಿಯಂತ್ರಣಕ್ಕೆ ಬಾರದ ಹಡಗಿನ ಬೆಂಕಿ

ಆ್ಯಮ್ಲೆಂಡ್, ಆಮಸ್ಟರ್‌ಡಾಮ್ (ಎಎಫ್‌ಪಿ, ಎನ್‌ವೈಟಿ): ನೆದರ್ಲೆಂಡ್ಸ್‌ನ ಆ್ಯಮ್ಲೆಂಡ್ ದ್ವೀಪದ ಬಳಿ ಅವಘಡಕ್ಕೀಡಾಗಿರುವ ಸರಕು ಸಾಗಣೆ ಹಡಗು 'ಫ್ರೀಮೆಂಟಲ್ ಹೈವೆ'ಯಲ್ಲಿನ ಬೆಂಕಿ ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ.

3 ಸಾವಿರ ಕಾರುಗಳನ್ನು ಹೊತ್ತು ಜರ್ಮನಿಯಿಂದ ಸಿಂಗಪುರಕ್ಕೆ ಸಾಗುತ್ತಿದ್ದ ಹಡಗು ಹೊತ್ತಿ ಉರಿಯಲು ಎಲೆಕ್ಟ್ರಿಕ್ ಕಾರೊಂದರಲ್ಲಿನ ಬೆಂಕಿಯೇ ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ. 25 ಎಲೆಕ್ಟ್ರಿಕ್ ಕಾರುಗಳಿದ್ದವೆಂದು ಈ ಮೊದಲು ಹೇಳಲಾಗಿತ್ತು. ಆದರೆ, 489 ಎಲೆಕ್ಟ್ರಿಕ್ ಕಾರುಗಳಿವೆ ಎಂದು ಮೂಲಗಳ ಮಾಹಿತಿ ಉಲ್ಲೇಖಿಸಿ ಸುದ್ದಿ ಸಂಸ್ಥೆ ಎಎನ್‌ಪಿ ವರದಿ ಮಾಡಿದೆ.

ಮಹಿಳೆಗೆ ಗಲ್ಲು: 19 ವರ್ಷಗಳ ನಂತರ ಮೊದಲ ಪ್ರಕರಣ

ಕ್ವಾಲಾಲಂಪುರ (ಎಪಿ): 31 ಗ್ರಾಂ ಮಾದಕವಸ್ತು ಕಳ್ಳಸಾಗಣೆ ಮಾಡಿದ್ದ ಪ್ರಕರಣದ ಅಪರಾಧಿ ಮಹಿಳೆಯನ್ನು ಶುಕ್ರವಾರ ಸಿಂಗಪುರದಲ್ಲಿ ಗಲ್ಲಿಗೇರಿಸಲಾಗಿದ್ದು, 19 ವರ್ಷಗಳಲ್ಲಿ ಮಹಿಳೆಗೆ ನೇಣು ಶಿಕ್ಷೆ ವಿಧಿಸಿದ ಮೊದಲ ಪ್ರಕರಣ ಇದಾಗಿದೆ.

ಸಾರಿದೇವಿ ಜಮಾನಿ (45) ಗಲ್ಲಿಗೇರಿದ ಮಹಿಳೆ. 31 ಗ್ರಾಂ (1 ಔನ್ಸ್) ಹೆರಾಯಿನ್ ಅನ್ನು ಕಳ್ಳಸಾಗಣೆ ಮಾಡಿದ ಪ್ರಕರಣದಲ್ಲಿ ಈಕೆ 2018ರಲ್ಲಿ ಶಿಕ್ಷೆಗೆ ಗುರಿಯಾಗಿದ್ದಳು ಎಂದು ಸೆಂಟ್ರಲ್ ನಾರ್ಕೊಟಿಕ್ಸ್ ಬ್ಯೂರೊ ಹೇಳಿದೆ.

ಗಲ್ಲು ಶಿಕ್ಷೆ ನಿಷೇಧಕ್ಕೆ ಮಾನವ ಹಕ್ಕುಗಳ ಸಂಘಟನೆಗಳು ಮತ್ತು ಸಾಮಾಜಿಕ ಹೋರಾಟಗಾರರ ಒತ್ತಡಗಳ ನಡುವೆಯೂ ಮಾದಕ ವಸ್ತು ಕಳ್ಳಸಾಗಣೆ ಅಪರಾಧದ ಅಪರಾಧಿಗಳಿಗೆ ಸಿಂಗಪುರದಲ್ಲಿ ಗಲ್ಲು ಶಿಕ್ಷೆ ಜಾರಿಗೊಳಿಸಿರುವುದು ವಾರದಲ್ಲಿ ಇದು ಎರಡನೇ ಪ್ರಕರಣ.

ಸಿಂಗಪುರದ ಮೊಹಮ್ಮದ್ ಅಜೀಜ್ ಹುಸೇನ್ (56) ಎಂಬಾತನನ್ನು 50 ಗ್ರಾಂ ಹೆರಾಯಿನ್ ಕಳ್ಳಸಾಗಣೆ ಮಾಡಿದ ಅಪರಾಧಕ್ಕೆ ನೇಣಿಗೇರಿಸಲಾಗಿತ್ತು. ಮುಂದಿನ ವಾರದಲ್ಲಿ ಮತ್ತೊಬ್ಬ ಅಪರಾಧಿಯನ್ನು ಗಲ್ಲಿಗೇರಿಸಲು ಸಿದ್ಧತೆ ನಡೆದಿದೆ ಎಂದು ಮಾನವ ಹಕ್ಕುಗಳ ಹೋರಾಟಗಾರರೊಬ್ಬರು ಹೇಳಿದ್ದಾರೆ.

ಮಾದಕದ್ರವ್ಯ ಕಳ್ಳಸಾಗಣೆ ಅಪರಾಧಕ್ಕೆ 2004ರಲ್ಲಿ ಯೆನ್ ಮೇ ವೋಯೆನ್ (36) ಎಂಬ ಮಹಿಳೆಯನ್ನು ಗಲ್ಲಿಗೇರಿಸಲಾಗಿತ್ತು. 2022ರ ಮಾರ್ಚ್‌ನಿಂದ ಈವರೆಗೆ ಸಿಂಗಪುರದಲ್ಲಿ ತಿಂಗಳಿಗೆ ಒಬ್ಬರಂತೆ 15 ಜನರನ್ನು ಗಲ್ಲಿಗೇರಿಸಲಾಗಿದೆ ಎಂದು ಮಾನವ ಹಕ್ಕುಗಳ ಸಂಘಟನೆ ಹೇಳಿವೆ.

ಚೀನಾ ಕ್ರಮ ವಿರೋಧಿಸಿ ಹಿಂದೆಸರಿದ ವುಶು ತಂಡ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದ ಮೂವರು ವುಶು ಆಟಗಾರ್ತಿಯರಿಗೆ ಚೀನಾ 'ಸ್ಟೇಪಲ್ಡ್ ವೀಸಾ' ನೀಡಿರುವುದನ್ನು ಪ್ರತಿಭಟಿಸಿ ಭಾರತದ ವುಶು ತಂಡ ವಿಶ್ವ ವಾರ್ಸಿಟಿ ಕ್ರೀಡಾಕೂಟ (ಡಬ್ಲ್ಯುಯುಜಿ) ದಿಂದ ಗುರುವಾರ ಹಿಂದೆ ಸರಿದಿದೆ.

'ಚೆಂಗ್ಡುವನಲ್ಲಿ ನಡೆಯುವ ಈ ಬಹು ರಾಷ್ಟ್ರಗಳ ಕೂಟದಲ್ಲಿ ಭಾರತದ ವುಶುಪಟುಗಳು ಸ್ಪರ್ಧಿಸಿದಲ್ಲಿ ಏಷ್ಯನ್ ಗೇಮ್ಸ್‌ಗೆ ಆಯ್ಕೆ ಆಗಿರುವವರಿಗೆ ಇದು ಪರೀಕ್ಷೆಯಾಗುತಿತ್ತು' ಎಂದು ಭಾರತ ವುಶು ಫೆಡರೇಷನ್‌ನ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ. ಹೆಸರು ಬಹಿರಂಗಪಡಿಸಬಾರದೆಂಬ ಷರತ್ತಿನ ಮೇಲೆ ಮಾತನಾಡಿದ ಅವರು, 'ಭಾರತದ ಕೆಲ ಸ್ಪರ್ಧಿಗಳ ಸಾಧನೆಯ ಮಟ್ಟವನ್ನು ಇಲ್ಲಿ ಅಳೆಯಲು ಫೆಡರೇಷನ್ ಉತ್ಸುಕವಾಗಿತ್ತು' ಎಂದರು.

ಭಾರತ ತಂಡದಲ್ಲಿದ್ದ ಎಂಟು ಆಟಗಾರರ ಪೈಕಿ ನಾಲ್ಕು ಮಂದಿ ಹಾಂಗ್ ಝೌ ಏಷ್ಯನ್ ಕ್ರೀಡಾಕೂಟಕ್ಕೂ ಆಯ್ಕೆ ಆಗಿದ್ದಾರೆ. ಏಷ್ಯನ್ ಕ್ರೀಡಾಕೂಟ ಸೆಪ್ಟೆಂಬರ್ 23 ರಿಂದ ಅಕ್ಟೋಬರ್ 8ರವರೆಗೆ ನಡೆಯಲಿದೆ.

ಎಂಟು ಆಟಗಾರರು ಮತ್ತು ನಾಲ್ಕು ಮಂದಿ ಸಿಬ್ಬಂದಿ ಒಳಗೊಂಡ ಭಾರತ ವುಶು ತಂಡ ಹಿಂದೆ ಸರಿಯುವಂತೆ ಕೇಂದ್ರ ಸರ್ಕಾರ ಸೂಚಿಸಿತ್ತು. ಸ್ಟೇಪಲ್ಡ್ ವೀಸಾ ನೀಡಿದ ಚೀನಾ ರಾಯಬಾರ ಕಚೇರಿಯ ಕ್ರಮ 'ಸ್ವೀಕಾರಾರ್ಹವಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿತ್ತು. ನ್ಯೇಮನ್ ವಾಂಗ್ಸೂ, ಒನಿಲು ತೆಗಾ ಮತ್ತು ಮೆಪುಂಗ್ ಲಮ್ಗು ಅವರು ಅರುಣಾಚಲ ಪ್ರದೇಶದ ಸ್ಪರ್ಧಿಗಳು.

'ಈ ಮೂವರನ್ನು ಬಿಟ್ಟು ಉಳಿದ ಐವರಿಗೆ ಶನಿವಾರ ಆರಂಭವಾಗುವ ಈ ವಾರ್ಸಿಟಿ ಕೂಟದಲ್ಲಿ ಭಾಗವಹಿಸಲು ಅವಕಾಶ ನೀಡಬಹುದಿತ್ತು' ಎಂದು ತರಬೇತುದಾರ ರಾಘವೇಂದ್ರ ಸಿಂಗ್ ಹೇಳಿದರು. ಆದರೆ ಸರ್ಕಾರ ಒಮ್ಮೆ ಬೇಡ ಎಂದ ಮೇಲೆ ಅದರ ವಿರುದ್ಧ ಮಾತನಾಡುವುದಿಲ್ಲ ಎಂದರು.

ಸ್ಟೇಪಲ್ಡ್ ವೀಸಾ

ಮೊಹರನ್ನು ಹಾಕದ ಖಾಲಿ ಕಾಗದವನ್ನು ಪಾಸ್‌ಪೋರ್ಟ್‌ಗೆ ಪಿನ್ ಮಾಡುವ ವ್ಯವಸ್ಥೆ ಇದು. ಈ ಕಾಗದವನ್ನು ಪಾಸ್‌ಪೋರ್ಟ್‌ನಿಂದ ಸುಲಭವಾಗಿ ತೆಗೆದುಹಾಕಬಹುದು. ಅನಪೇಕ್ಷಿತರಿಗೆ ಈ ರೀತಿ ಮಾಡಲಾಗುತ್ತದೆ. ಸಾಮಾನ್ಯ ವೀಸಾ ನೀಡುವಾಗ ಪಾಸ್‌ಪೋರ್ಟ್ ಮೇಲೆ ಆಯಾ (ಹೋಗಬೇಕಾದ) ದೇಶದ ಮೊಹರು ಇರುವ ವೀಸಾ ಅಂಟಿಸಲಾಗುವುದು.

ಬೆಳೆ ವಿಮೆ: ತೊಡಕಾದ 'ಫ್ರೂಟ್ಸ್'

ಒಂದನೇ ಪುಟದಿಂದ

ನಿಗದಿಪಡಿಸಿದ ವಿಮಾ ಮೊತ್ತದ ಶೇ 2ರಷ್ಟು ಕಂತನ್ನು ರೈತರು ಪಾವತಿಸಬೇಕು. ಪ್ರಸ್ತುತ ಪ್ರತಿ ಹೆಕ್ಟೇರ್ ನೀರಾವರಿ ಭತ್ತಕ್ಕೆ ₹ 1,865, ಮಳೆ ಆಶ್ರಿತ ಭತ್ತಕ್ಕೆ ₹ 1,275, ನೀರಾವರಿ ಮೆಕ್ಕೆಜೋಳಕ್ಕೆ ₹ 1,290, ಮಳೆ ಆಶ್ರಿತ ಬೆಳೆಗೆ ₹1,130, ಜೋಳಕ್ಕೆ ₹765, ರಾಗಿಗೆ ₹ 850 ಪಾವತಿಸಬೇಕು. ಪ್ರಕೃತಿ ವಿಕೋಪದಿಂದ ಬೆಳೆ ನಷ್ಟವಾದರೆ ನಿಗದಿತ ವಿಮಾ ಮೊತ್ತದ ಶೇ 80ರಿಂದ 90ರಷ್ಟು ಹಣ ರೈತರಿಗೆ ದೊರೆಯುತ್ತದೆ.

'ಬೆಳೆ ಸಾಲ ಪಡೆದ ರೈತರ ದಾಖಲೆಗಳು ಬ್ಯಾಂಕ್, ಸಹಕಾರ ಸಂಘಗಳಲ್ಲಿ ಲಭ್ಯವಿರುತ್ತವೆ. ಹಾಗಾಗಿ, ಅವರು ಅರ್ಜಿ ಸಲ್ಲಿಸದೆ ಇದ್ದರೂ, ವಿಮಾ ಯೋಜನೆ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ. ಬಹುತೇಕ ರೈತರು ಬೆಳೆ ಸಾಲ ಪಡೆದಿರುತ್ತಾರೆ. ಅದಕ್ಕಾಗಿ ಅವರು ಪ್ರತ್ಯೇಕ ಅರ್ಜಿ ಸಲ್ಲಿಸಬೇಕಾದ ಅವಶ್ಯ ಇಲ್ಲ. ಸಾಲ ಪಡೆಯದವರು ಅರ್ಜಿ ಸಲ್ಲಿಸಬೇಕು. ಈ ಕುರಿತು ಜೂನ್ 20ರಂದೇ ಪ್ರಕಟಣೆ ಹೊರಡಿಸಲಾಗಿದೆ. ಮುಸುಕಿನ ಜೋಳ ಮತ್ತಿತರ ಬೆಳೆಗಳನ್ನು ಮೇ ತಿಂಗಳಿನಲ್ಲೇ ಬಿತ್ತನೆ ಮಾಡುವ ಕಾರಣ ಕಂತು ಪಾವತಿಯ ಅವಧಿ ಜುಲೈ 31ಕ್ಕೆ ಇದೆ. ಉಳಿದ ಬೆಳೆಗಳಿಗೆ ಸಮಸ್ಯೆ ಇಲ್ಲ. ಭತ್ತ, ಜೋಳ, ರಾಗಿ ಸೇರಿದಂತೆ ಹಲವು ಬೆಳೆಗಳಿಗೆ ವಿಮಾಕಂತು ಪಾವತಿಸಲು ಆ.16ರವರೆಗೆ ಅವಕಾಶವಿದೆ' ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

'ಸುಪ್ರೀಂ'ಗೆ ಕೇಂದ್ರದ ಪ್ರಮಾಣಪತ್ರ, ಮಣಿಪುರ ಹಿಂಸಾಕೃತ್ಯದ ವಿಚಾರಣೆ ಅನ್ಯ ರಾಜ್ಯಕ್ಕೆ ವರ್ಗಾವಣೆಗೆ ಮನವಿ

'ಮಹಿಳೆಯರ ಮೇಲಿನ ಅಪರಾಧ ಸಹಿಸೆವು'

ನವದೆಹಲಿ (ಪಿಟಿಐ): 'ಮಹಿಳೆಯರ ವಿರುದ್ಧ ನಡೆಯುವ ಯಾವುದೇ ರೀತಿಯ ಅಪರಾಧ ಕೃತ್ಯಗಳನ್ನು ಕೇಂದ್ರ ಸರ್ಕಾರ ಸಹಿಸುವುದಿಲ್ಲ' ಎಂದು ಗೃಹ ಸಚಿವಾಲಯವು ಗುರುವಾರ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರವನ್ನು ಸಲ್ಲಿಸಿದೆ.

ಸಚಿವಾಲಯದ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರು ಪ್ರಮಾಣಪತ್ರ ಸಲ್ಲಿಸಿದ್ದಾರೆ.

'ಮಣಿಪುರದಲ್ಲಿ ನಡೆದಿದ್ದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಲಾಗಿದೆ. ಕೃತ್ಯಕ್ಕೆ ಸಂಬಂಧಿಸಿದಂತೆ ಇದುವರೆಗೆ ಏಳು ಜನರನ್ನು ಬಂಧಿಸಲಾಗಿದೆ. ಕೃತ್ಯದ ವಿಚಾರಣೆಯನ್ನು ಮಣಿಪುರದ ಹೊರಗೆ ನಡೆಸಲು ಪ್ರಕರಣ ವರ್ಗಾಯಿಸಬೇಕು' ಎಂದು ಸರ್ಕಾರ ಮನವಿ ಮಾಡಿದೆ.

ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆಗೆ ಸಂಬಂಧಿಸಿದ ವಿಡಿಯೊ ಸೋರಿಕೆ ಆಗುವ ಮೂಲಕ ಕೃತ್ಯವು ಕಳೆದ ವಾರ ಬಹಿರಂಗಗೊಂಡಿತ್ತು.

ಜುಲೈ 20ರಂದು ಈ ಕೃತ್ಯವನ್ನು ಉಲ್ಲೇಖಿಸಿದ್ದ ಕೋರ್ಟ್, 'ವಿಡಿಯೊದ ದೃಶ್ಯಗಳು ತೀವ್ರವಾಗಿ ನಮ್ಮನ್ನು ಕಲಕಿವೆ. ಹಿಂಸೆಗೆ ಪ್ರಚೋದನೆ ನೀಡಲು ಮಹಿಳೆಯರನ್ನು ಅಸ್ತ್ರವಾಗಿ ಬಳಸುವುದನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಪ್ಪಲಾಗದು' ಎಂದು ಅಭಿಪ್ರಾಯಪಟ್ಟಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು, 'ಕೇಂದ್ರ ಮತ್ತು ಮಣಿಪುರ ಸರ್ಕಾರಗಳು ಈ ಕುರಿತು ಕೂಡಲೇ ಪರಿಹಾರ, ಪುನರ್ವಸತಿ, ಹಿಂಸೆ ತಡೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ಸಲ್ಲಿಸಬೇಕು' ಎಂದು ಸೂಚಿಸಿತ್ತು. ಇದಕ್ಕೆ ಪ್ರತಿಕ್ರಿಯೆ ದಾಖಲಿಸಿರುವ ಕೇಂದ್ರ, 'ಮಣಿಪುರ ಸರ್ಕಾರವು ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸುವಂತೆ ಜುಲೈ 26ರಂದು ಪತ್ರ ಬರೆದಿದೆ. ಇದನ್ನು ಆಧರಿಸಿ ಕೇಂದ್ರ ಸರ್ಕಾರ ತನಿಖೆಯನ್ನು ಜುಲೈ 27ರಂದು ಸಿಬಿಐಗೆ ಒಪ್ಪಿಸಿದೆ' ಎಂದು ತಿಳಿಸಿದೆ.

'ತನಿಖೆಯು ತ್ವರಿತಗತಿಯಲ್ಲಿ ಪೂರ್ಣಗೊಳ್ಳಬೇಕು ಹಾಗೂ ಕಾಲಮಿತಿಯಲ್ಲಿ ವಿಚಾರಣೆ ನಡೆಯಬೇಕು. ಬೆತ್ತಲೆ ಮೆರವಣಿಗೆ ಸೇರಿದಂತೆ ಇಡೀ ಪ್ರಕರಣದ ವಿಚಾರಣೆಯನ್ನು ಮಣಿಪುರದ ಹೊರಗೆ ಯಾವುದಾದರೂ ರಾಜ್ಯಕ್ಕೆ ವರ್ಗಾಯಿಸಲು ಸರ್ಕಾರ ಬಯಸಿದೆ' ಎಂದು ತಿಳಿಸಲಾಗಿದೆ.

ಅನ್ಯ ರಾಜ್ಯಕ್ಕೆ ಪ್ರಕರಣದ ವಿಚಾರಣೆಯನ್ನು ವರ್ಗಾಯಿಸುವ ಅಧಿಕಾರ ಈ ಕೋರ್ಟ್‌ಗೆ ಇದೆ. ಹೀಗಾಗಿ, ಕೇಂದ್ರ ಸರ್ಕಾರ ಮನವಿ ಸಲ್ಲಿಸುತ್ತಿದೆ. ಸಿಬಿಐ ಆರೋಪಪಟ್ಟಿ ಸಲ್ಲಿಸಿದ ಆರು ತಿಂಗಳಲ್ಲಿ ವಿಚಾರಣೆಯನ್ನು ಪೂರ್ಣಗೊಳಿಸಬೇಕು. ಈ ಸಂಬಂಧ ಆದೇಶ ಹೊರಡಿಸಬೇಕು ಎಂದು ಪ್ರಮಾಣಪತ್ರದಲ್ಲಿ ಮನವಿ ಮಾಡಿದೆ.

ಹಿಂಸಾಕೃತ್ಯಗಳಿಗೆ ಸಂಬಂಧಿಸಿದಂತೆ ಶಂಕಿತ ಆರೋಪಿಗಳನ್ನು ಬಂಧಿಸಲು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ದರ್ಜೆಯ ಅಧಿಕಾರಿಗಳ ನೇತೃತ್ವದಲ್ಲಿ ಹಲವು ತಂಡಗಳನ್ನು ರಚಿಸಲಾಗಿದೆ ಎಂದು ಕೋರ್ಟ್‌ಗೆ ಮಾಹಿತಿ ನೀಡಿದೆ. ವಿವಿಧ ಶಿಬಿರಗಳಲ್ಲಿರುವ ಸಂತ್ರಸ್ತರಿಗೆ ಮಾನಸಿಕ ಸ್ಥೈರ್ಯ ತುಂಬಲು ಮಣಿಪುರ ಸರ್ಕಾರವು ಜಿಲ್ಲಾ ಆಪ್ತ ಸಮಾಲೋಚಕರ ತಂಡವನ್ನು ರಚಿಸಿದೆ. 'ಇಂತಹ ಕೃತ್ಯಗಳ ತಡೆ ಕ್ರಮವಾಗಿ ಭವಿಷ್ಯದಲ್ಲಿ ಇಂತಹ ಕೃತ್ಯಗಳ ಮಾಹಿತಿಯನ್ನು ಆಯಾ ಪೊಲೀಸ್ ಠಾಣೆಗಳ ಅಧಿಕಾರಿಗಳು ಡಿಜಿಪಿ ಅವರಿಗೆ ಕಡ್ಡಾಯವಾಗಿ ವರದಿ ಮಾಡಬೇಕು ಎಂದು ಸೂಚಿಸಲಾಗಿದೆ. ಡಿಜಿಪಿ ಮೇಲ್ವಿಚಾರಣೆಯಲ್ಲಿ ಐಜಿ ದರ್ಜೆಯ ಅಧಿಕಾರಿಯು ಇಂಥ ಪ್ರಕರಣಗಳ ತನಿಖೆಯನ್ನು ನಡೆಸಲಿದ್ದಾರೆ' ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.



ಮಣಿಪುರದ ಗುಡ್ಡಗಾಡು ಜಿಲ್ಲೆಗಳಲ್ಲಿ ವಾಸಿಸುವ ಬುಡಕಟ್ಟು ಜನರಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆಯನ್ನು ರೂಪಿಸುವಂತೆ ಒತ್ತಾಯಿಸಿ ನವದೆಹಲಿಯಲ್ಲಿ ಶುಕ್ರವಾರ ಕುಕಿ ಮಹಿಳಾ ವೇದಿಕೆ ಸದಸ್ಯರು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಮಣಿಪುರ ಸಂತ್ರಸ್ತರಿಂದ ಮಾಹಿತಿ ಸಂಗ್ರಹಿಸಿದ ಪೊಲೀಸರು

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ನಡೆದ ಬೆತ್ತಲೆ ಮೆರವಣಿ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣದ ಇಬ್ಬರು ಸಂತ್ರಸ್ತ ಮಹಿಳೆಯರನ್ನು ಸ್ಥಳೀಯ ಪೊಲೀಸರು ಭೇಟಿಯಾಗಿದ್ದು, ಅವರಿಂದ ಹೇಳಿಕೆ ಸಂಗ್ರಹಿಸುವ ಕಾರ್ಯ ನಡೆಯುತ್ತಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಪ್ರಕರಣ ಸಂಬಂಧ ಮಹಿಳಾ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ತಂಡವನ್ನು ರಚಿಸಲಾಗಿದ್ದು ತನಿಖೆ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

'ತನಿಖಾ ತಂಡದ ಸದಸ್ಯರು ಸಂತ್ರಸ್ತ ಮಹಿಳೆಯರು ಮತ್ತು ಅವರ ಕುಟುಂಬಸ್ಥರನ್ನು ಭೇಟಿಯಾಗಿದ್ದಾರೆ. ಅವರಿಂದ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಪ್ರತ್ಯಕ್ಷದರ್ಶಿಗಳನ್ನು ಗುರುತಿಸುವ ಮತ್ತು ಅವರಿಂದ ಹೇಳಿಕೆ ಸಂಗ್ರಹಿಸುವ ಕಾರ್ಯವೂ ನಡೆಯುತ್ತಿದೆ' ಎಂದು ಅಧಿಕಾರಿಗಳು ಹೇಳಿದರು.

'ಸಿಬಿಐ ತನಿಖೆ ಆರಂಭ, ಈವರೆಗೆ ಯಾರನ್ನೂ ಬಂಧಿಸಿಲ್ಲ'

ನವದೆಹಲಿ (ಪಿಟಿಐ): ಮಣಿಪುರದಲ್ಲಿ ನಡೆದಿರುವ ಆರು ವಿವಿಧ ಅಪರಾಧ ಕೃತ್ಯಗಳ ತನಿಖೆಯನ್ನು ಆರಂಭಿಸಿರುವ ಸಿಬಿಐ, ಈ ಸಂಬಂಧ ಇದುವರೆಗೆ ಯಾರನ್ನೂ ಬಂಧಿಸಿಲ್ಲ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಆರು ಕೃತ್ಯಗಳಿಗೆ ಸಂಬಂಧಿಸಿ ಕೇಂದ್ರ ತನಿಖಾ ಸಂಸ್ಥೆಯು ಮಣಿಪುರದ ಪೊಲೀಸರಿಂದ ಎಫ್‌ಐಆರ್ ಪಡೆದುಕೊಂಡಿದೆ. ಈ ಸಂಬಂಧ ಪುನಃ ಮೊಕದ್ದಮೆ ದಾಖಲಿಸಿದ ತಿಂಗಳ ನಂತರವೂ ಪ್ರಕರಣದ ಸೂಕ್ಷ್ಮತೆ ಹಿನ್ನೆಲೆಯಲ್ಲಿ ಎಫ್‌ಐಆರ್ ಅನ್ನು ಸಿಬಿಐ ಬಹಿರಂಗಪಡಿಸಿಲ್ಲ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಉಲ್ಲೇಖಿಸಿರುವ ಆರು ಪ್ರಕರಣಗಳ ತನಿಖೆಗಾಗಿ ಡಿಐಜಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ಸಿಬಿಐ ವಿಶೇಷ ತನಿಖಾ ತಂಡವನ್ನು ರಚಿಸಿದೆ. ಕಠಿಣ ಪರಿಸ್ಥಿತಿಯಲ್ಲಿ ತಂಡವು ತನಿಖೆಯನ್ನು ಕೈಗೊಂಡಿದೆ. ಪ್ರತಿಭಟನನಿರತ ಗುಂಪುಗಳ ಪ್ರತಿರೋಧ, ಅಡ್ಡಿ ಎದುರಾಗುತ್ತಿದೆ. ಸಾಕ್ಷಿಗಳನ್ನು ಗುರುತಿಸುವುದು ಕಷ್ಟವಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

'ಇಂಡಿಯಾ' ನಿಯೋಗ ಭೇಟಿ ಇಂದು

ನವದೆಹಲಿ(ಪಿಟಿಐ): ಮಣಿಪುರದಲ್ಲಿನ ಪರಿಸ್ಥಿತಿಯ ಅವಲೋಕನ ನಡೆಸಲಿರುವ 'ಇಂಡಿಯಾ' ಮೈತ್ರಿಕೂಟದ ನಿಯೋಗ, ಸಮಸ್ಯೆಗಳ ಪರಿಹಾರಕ್ಕೆ ಕೇಂದ್ರ ಸರ್ಕಾರ ಮತ್ತು ಸಂಸತ್ತಿಗೆ ಶಿಫಾರಸುಗಳನ್ನು ಮಾಡಲಿದೆ ಎಂದು ವಿರೋಧ ಪಕ್ಷದ ನಾಯಕರು ಶುಕ್ರವಾರ ಹೇಳಿದ್ದಾರೆ.

ನಿಯೋಗವು ಶನಿವಾರ ಮಣಿಪುರಕ್ಕೆ ಭೇಟಿ ನೀಡಲಿದೆ. ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಗೌರವ್ ಗೊಗೊಯ್, ಟಿಎಂಸಿಯ ಸುಶ್ಮಿತಾ ದೇವ್, ಜೆಎಂಎಂನ ಮಹುವಾ ಮಜ್ಜಿ, ಡಿಎಂಕೆಯ ಕನಿಮೊಳಿ, ಎನ್‌ಸಿಪಿಯ ವಂದನಾ ಚೌಹಾಣ್, ಆರ್‌ಎಲ್‌ಡಿಯ ಜಯಂತ್ ಚೌದರಿ, ಆರ್‌ಜೆಡಿಯ ಮನೋಜ್ ಕುಮಾರ್, ಆರ್‌ಎಸ್‌ಪಿಯ ಎನ್. ಕೆ ಪ್ರೇಮಚಂದ್ರನ್ ಮತ್ತು ವಿಸಿಕೆಯ ತಿರುಮಾವಳನ್ ನಿಯೋಗದಲ್ಲಿ ಇರಲಿದ್ದಾರೆ.

ಲಂಡನ್‌ನಲ್ಲಿ ಮೌನ ಪ್ರತಿಭಟನೆ

ಲಂಡನ್ (ಪಿಟಿಐ): ಮಣಿಪುರ ಹಿಂಸಾಚಾರ ಖಂಡಿಸಿ ಭಾರತೀಯ ಸಂಜಾತ ಮಹಿಳೆಯರ ಸಂಘಟನೆಯ ನೇತೃತ್ವದಲ್ಲಿ ಇಲ್ಲಿನ ಭಾರತೀಯ ರಾಯಭಾರ ಕಚೇರಿ ಮುಂಭಾಗ ಮೌನ ಪ್ರತಿಭಟನೆ ನಡೆಸಲಾಯಿತು.

'ದ ವುಮೆನ್ ಆಫ್ ನಾರ್ಥ್ ಈಸ್ಟ್ ಇಂಡಿಯಾ ಸಪೋರ್ಟ್ ನೆಟ್‌ವರ್ಕ್ (ಡಬ್ಲ್ಯುಎನ್‌ಇಐಎಸ್ಎನ್)' ಸಂಘಟನೆ ಬುಧವಾರ ಹಮ್ಮಿಕೊಂಡಿದ್ದ ಮೌನ ಪ್ರತಿಭಟನೆಯಲ್ಲಿ ಪುರುಷರು ಹಾಗೂ ಮಹಿಳೆಯರು ಮುಖಗವಸು ಧರಿಸಿ ಪಾಲ್ಗೊಂಡಿದ್ದರು.

ಪ್ರತಿಭಟನಕಾರರು ಸಂಸತ್ ಚೌಕದಿಂದ ಬಳಿಯ ಮಹಾತ್ಮ ಗಾಂಧಿ ಪ್ರತಿಮೆವರೆಗೂ ಸಾಗಿ ಪ್ರತಿಭಟನೆ ಅಂತ್ಯಗೊಳಿಸಿದರು.

ಪರಿಹಾರ ಶಿಬಿರ: 319 ಗರ್ಭಿಣಿಯರಿಗೆ ಆರೈಕೆ, 139 ಶಿಶುಗಳ ಜನನ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಹಿಂಸಾಕೃತ್ಯಗಳು ಆರಂಭವಾದ ಬಳಿಕ ಜುಲೈ 24ರವರೆಗೆ ಒಟ್ಟು 319 ಗರ್ಭಿಣಿಯರಿಗೆ ಪ್ರಸವಪೂರ್ವ ಅವಧಿಯ ಗಂಭೀರ ಸಂದರ್ಭದಲ್ಲಿ ಆರೈಕೆಯನ್ನು ನೀಡಲಾಗಿದೆ. ಈ ಅವಧಿಯಲ್ಲಿ 139 ಗರ್ಭಿಣಿಯರು ಶಿಶುವಿಗೆ ಜನ್ಮನೀಡಿದ್ದಾರೆ.

ಕೇಂದ್ರ ಆರೋಗ್ಯ ಇಲಾಖೆಯ ರಾಜ್ಯ ಸಚಿವೆ ಭಾರತಿ ಪ್ರವೀಣ್ ಪವಾರ್ ಅವರು ಶುಕ್ರವಾರ ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ಈ ಮಾಹಿತಿಯನ್ನು ನೀಡಿದ್ದಾರೆ.

ಲಾಟರಿ: ₹10 ಕೋಟಿ ಬಹುಮಾನ ಗೆದ್ದ ಪೌರಕಾರ್ಮಿಕ ಮಹಿಳೆಯರು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಮಲಪ್ಪುರ ಜಿಲ್ಲೆಯ 11 ಮಂದಿ ಮಹಿಳಾ ಪೌರಕಾರ್ಮಿಕರಿಗೆ ಸರ್ಕಾರದ ಮುಂಗಾರು ಬಂಪರ್ ಲಾಟರಿಯ ₹10 ಕೋಟಿ ಬಹುಮಾನ ಒಲಿದಿದೆ.

ಪರಪ್ಪನಂಗಡಿಯಲ್ಲಿ ಮನೆ ಮನೆಗೆ ತೆರಳಿ ಕಸ ಸಂಗ್ರಹಿಸುವ ಮಹಿಳೆಯರ ತಂಡ ಹಣ ಒಟ್ಟುಗೂಡಿಸಿ ₹250ರ ಲಾಟರಿ ಟಿಕೆಟ್ ಖರೀದಿಸಿತ್ತು. ಈ ಟಿಕೆಟ್‌ಗೆ ಬಹುಮಾನ ಲಭಿಸಿದೆ.

ಈ ಹಿಂದೆಯೂ ನಾವು ಎಲ್ಲರೂ ಹಣ ಹಾಕಿ ಲಾಟರಿ ಟಿಕೆಟ್ ಖರೀದಿಸಿದ್ದೆವು. ₹1000 ಬಹುಮಾನ ಲಭಿಸಿತ್ತು ಎಂದು ಪೌರಕಾರ್ಮಿಕ ಮಹಿಳೆಯರು ತಿಳಿಸಿದ್ದಾರೆ.

ಬಹುಮಾನದ ಮೊತ್ತದಲ್ಲಿ ಶೇ 35ರಷ್ಟು ಹಣ ಲಾಟರಿ ಏಜೆಂಟ್ ಕಮಿಷನ್‌ಗೆ ಮತ್ತು ತೆರಿಗೆಗೆ ಕಡಿತಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ರೀಲ್ಸ್ ಗೀಳು: ಐಫೋನ್‌ಗಾಗಿ ಮಗುವನ್ನೇ ಮಾರಿದ ದಂಪತಿ!

ಕೋಲ್ಕತ್ತ (ಪಿಟಿಐ): ರೀಲ್ಸ್ ಮಾಡಲು ಐಫೋನ್– 14 ಖರೀದಿಸುವುದಕ್ಕಾಗಿ ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ದಂಪತಿ ತಮ್ಮ ಎಂಟು ತಿಂಗಳ ಗಂಡು ಮಗುವನ್ನೇ ಮಾರಾಟ ಮಾಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ರಾಜ್ಯದಾದ್ಯಂತ ಪ್ರಯಾಣ ಬೆಳೆಸಿ ರೀಲ್ಸ್ ಮಾಡಬೇಕೆನ್ನುವ ಉದ್ದೇಶದಿಂದ ಪಾನಿಹಟಿಯ ಗಂಗಾನಗರ ಪ್ರದೇಶದ ಈ ದಂಪತಿ ಇಂತಹ ಹೇಯ ಕೆಲಸ ಮಾಡಿರುವುದಾಗಿ ಹೇಳಿದ್ದಾರೆ.

ಮಗುವಿನ ತಾಯಿಯನ್ನು ಬಂಧಿಸಿದ್ದು, ತಂದೆ ಜಯದೇವ್ ಘೋಷ್ ತಲೆಮರೆಸಿಕೊಂಡಿದ್ದಾರೆ ಎಂದೂ ವಿವರಿಸಿದ್ದಾರೆ.

ತುಂಬಾ ದಿನಗಳಿಂದ ಮಗು ಕಾಣೆಯಾಗಿದ್ದರೂ ತಂದೆ, ತಾಯಿಯಲ್ಲಿ ದುಃಖದ ಛಾಯೆ ಕಾಣದಿರುವುದು ಮತ್ತು ಅಲ್ಪಆದಾಯದಿಂದ ಜೀವನ ಸಾಗಿಸುತ್ತಿದ್ದ ಈ ಕುಟುಂಬವು ಐಫೋನ್ ಖರೀದಿಸಿರುವುದು ನೆರೆಹೊರೆಯವರಲ್ಲಿ ಸಂಶಯ ಮೂಡಿಸಿತ್ತು. ಈ ಕುರಿತು ಅವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಅವರು ವಿಚಾರಿಸಿದಾಗ ಮಗುವನ್ನು ಮಾರಾಟ ಮಾಡಿರುವ ಸಂಗತಿಯನ್ನು ಮಹಿಳೆ ಬಾಯ್ಬಿಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಮಗು ಮಾರಾಟ ಪ್ರಕರಣ ಒಂದು ತಿಂಗಳ ಹಿಂದೆ ನಡೆದಿದ್ದರೂ ಪೊಲೀಸರಿಗೆ ಜುಲೈ 24ರಂದು ದೂರು ನೀಡಲಾಗಿದೆ. 'ಮಗುವಿನ ತಾಯಿಯನ್ನು ವಿಚಾರಣೆಗೆ ಒಳಪಡಿಸಿದ್ದೇವೆ. ಮಗುವನ್ನು ಖರೀದಿಸಿದವರ ಪತ್ತೆಗಾಗಿ ಶೋಧ ನಡೆಸುತ್ತಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ದಂಪತಿ ವಿರುದ್ಧ ಹಾಗೂ ಮಗುವನ್ನು ಖರೀದಿಸಿರುವವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆ. 2ಕ್ಕೆ ಸಂಸದರ ಜತೆ ಮೋದಿ ಸಭೆ

ನವದೆಹಲಿ: ಲೋಕಸಭಾ ಚುನಾವಣೆಗೆ ಪೂರ್ವತಯಾರಿಯ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಆಗಸ್ಟ್ 2ರಂದು ಕರ್ನಾಟಕದ ಸಂಸದರ ಜತೆಗೆ ಸಭೆ ನಡೆಸಲಿದ್ದಾರೆ. ಜುಲೈ 31ರಿಂದ ಆಗಸ್ಟ್ 10ರವರೆಗೆ ಎನ್‌ಡಿಎ ಮೈತ್ರಿಕೂಟದ ಎಲ್ಲ ಸಂಸದರ ಜತೆಗೆ ಸರಣಿ ಸಭೆಗಳು ನಡೆಯಲಿವೆ.

ಜುಲೈ 31ರಿಂದ ಆಗಸ್ಟ್ 10ರವರೆಗೆ ಎನ್‌ಡಿಎ ಮೈತ್ರಿಕೂಟದ ಎಲ್ಲ ಸಂಸದರ ಜತೆಗೆ ಸರಣಿ ಸಭೆಗಳು ನಡೆಯಲಿವೆ.

ರಾಜ್ಯದ ಸಂಸದರ ಜತೆಗೆ ತೆಲಂಗಾಣ, ಆಂಧ್ರ, ತಮಿಳುನಾಡು, ಕೇರಳ, ಪುದುಚೇರಿ, ಅಂಡಮಾನ್ ಹಾಗೂ ನಿಕೋಬಾರ್, ಲಕ್ಷದ್ವೀಪದ ಸಂಸದರು, ಆಯಾ ರಾಜ್ಯಗಳ ಉಸ್ತುವಾರಿಗಳು ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಸಂಸತ್ ಅಧಿವೇಶನ ಮುಗಿದ ಬಳಿಕ ಪ್ರತಿದಿನ ಸಂಜೆ ಮೈತ್ರಿಕೂಟದ ಸಂಸದರ ಜತೆಗೆ ಸಭೆ ನಡೆಯಲಿದೆ.

ತಣಿಯದ ಶಾಸಕರ ಮುನಿಸು

ಒಂದನೇ ಪುಟದಿಂದ...

ಸಭೆಯುದ್ದಕ್ಕೂ ವಾಕ್ಸಮರ: ಸಭೆಯ ಆರಂಭದಲ್ಲಿ ಶಾಸಕರ ಪತ್ರದ ವಿಷಯ ಪ್ರಸ್ತಾಪಿಸಿದ ಮುಖ್ಯಮಂತ್ರಿ, ಅಸಮಾಧಾನ ಹೊರಹಾಕಿದರು. ತಕ್ಷಣವೇ ಎದ್ದು ನಿಂತ ಬಿ.ಆರ್. ಪಾಟೀಲ, 'ಅಪರಾಧಿ ಸ್ಥಾನದಲ್ಲಿ ಇರುವವರು ಕೆಲವು ಸಚಿವರು. ನನ್ನನ್ನು ಏಕೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿದ್ದೀರಿ' ಎಂದು ಪ್ರಶ್ನಿಸಿದರು. ನಂತರ ಹಲವು ಶಾಸಕರು ಸಮರೋಪಾದಿಯಲ್ಲಿ ಸಚಿವರ ವಿರುದ್ಧ ದೂರುಗಳ ಸುರಿಮಳೆಗೈದರು. ಶಾಸಕರ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗಿದೆ ಎಂದು ಕಳವಳವನ್ನೂ ವ್ಯಕ್ತಪಡಿಸಿದರು ಎಂದು ಶಾಸಕರೊಬ್ಬರು ತಿಳಿಸಿದರು.

ಕೆಲವು ಸಚಿವರು ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ಶಾಸಕರ ಪತ್ರಗಳನ್ನು ಕಡೆಗಣಿಸುತ್ತಿರುವುದು, ವಯಸ್ಸಿನಲ್ಲಿ ಕಿರಿಯರಾದ ಸಚಿವರು ಹಿರಿಯ ಶಾಸಕರನ್ನು ಏಕವಚನದಲ್ಲಿ ಮಾತನಾಡಿಸುತ್ತಿರುವುದು, ಬಿಜೆಪಿ ಆಡಳಿತದ ಅವಧಿಯಲ್ಲಿ ನೇಮಿಸಿದ್ದ ಅಧಿಕಾರಿಗಳನ್ನೇ ಆಯಕಟ್ಟಿನ ಸ್ಥಾನಗಳಲ್ಲಿ ಮುಂದುವರಿಸಿರುವುದು, ಕೆಲವು ಸಚಿವರು ಶಾಸಕರ ಅಧಿಕಾರದ ವ್ಯಾಪ್ತಿಯಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು, ತಾಲ್ಲೂಕು ಮಟ್ಟದ ವಿಚಾರಗಳಿಗೂ ಬೆಂಗಳೂರಿನ ಕೆಲವು ಸಚಿವರ ಕಚೇರಿಯಿಂದ ಟಿಪ್ಪಣಿ ರವಾನೆಯಾಗುತ್ತಿರುವ ಬಗ್ಗೆ ಹಲವು ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಿದ್ದರಾಮಯ್ಯನವರ ನಡವಳಿಕೆ ಬಗ್ಗೆ ಯಾವ ಶಾಸಕರು ತಕರಾರು ಎತ್ತಲಿಲ್ಲ. ಕಿರಿಯ ಸಚಿವರು ಹಿರಿಯರಿಗೆ ಗೌರವ ಕೊಡದೇ ದುರಹಂಕಾರ ಪ್ರದರ್ಶಿಸುತ್ತಿರುವುದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

'ಪ್ರಜಾವಾಣಿ' ಜತೆಗೆ ಶುಕ್ರವಾರ ಮಾತನಾಡಿದ ಕೆಲವು ಶಾಸಕರು, 'ನಾವೂ ಸೇರಿದಂತೆ 135 ಜನ ಗೆದ್ದಿದ್ದಕ್ಕೆ ಇವರು ಸಚಿವರಾಗಿದ್ದಾರೆ. ನಮಗೆ ಫಲಾಪೇಕ್ಷೆಯಿಲ್ಲ. ಸಚಿವರು ತಮ್ಮ ಧೋರಣೆ ಸರಿಪಡಿಸಿಕೊಳ್ಳದೇ ಇದ್ದರೆ, ಬುದ್ಧಿ ಕಲಿಸದೇ ಬಿಡುವುದಿಲ್ಲ. ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಲು ಹಿಂದೇಟು ಹಾಕುವುದಿಲ್ಲ' ಎಂದು ಹೇಳಿದರು.

ಸಭೆಯ ಆರಂಭದಲ್ಲಿ ಶಾಸಕರ ವಿರುದ್ಧ ಕೋಪ ಹೊರಹಾಕಿದ್ದ ಸಿದ್ದರಾಮಯ್ಯ, ಕೊನೆಯಲ್ಲಿ ಎಲ್ಲರನ್ನೂ ಮನವೊಲಿಸುವ ಪ್ರಯತ್ನ ಮಾಡಿದರು.

ರಾಜೀನಾಮೆಗೆ ಮುಂದಾಗಿದ್ದ ಶಾಸಕ ಬಿ.ಆರ್. ಪಾಟೀಲ

ಸಿದ್ದರಾಮಯ್ಯ ಅವರು ಶಾಸಕರ ಪತ್ರ ಕುರಿತು ಅಸಮಾಧಾನ ಹೊರಹಾಕುತ್ತಿದ್ದಂತೆಯೇ ಸಿಟ್ಟಿಗೆದ್ದ ಶಾಸಕ ಬಿ.ಆರ್. ಪಾಟೀಲ, 'ನನ್ನನ್ನು ಅಪರಾಧಿಯಂತೆ ಬಿಂಬಿಸಬೇಡಿ. ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಇಲ್ಲಿರುವುದಿಲ್ಲ. ರಾಜೀನಾಮೆ ಸಲ್ಲಿಸಿ ನಡೆಯುತ್ತೇನೆ' ಎಂದು ಸಭೆಯಿಂದ ಹೊರ ನಡೆಯಲು ಮುಂದಾಗಿದ್ದರು. ಸಚಿವ ಡಾ. ಶರಣ ಪ್ರಕಾಶ ಪಾಟೀಲ ತಡೆದರು ಎಂದು ಮೂಲಗಳು ತಿಳಿಸಿವೆ.

ಎರಡು ಬಾರಿ ರಾಜೀನಾಮೆ ಇಂಗಿತ ವ್ಯಕ್ತಪಡಿಸಿದ ಪಾಟೀಲ, 'ನನಗೆ 75 ವರ್ಷ ಆಯಿತು. ದಶಕಗಳ ಕಾಲದಿಂದ ರಾಜಕಾರಣದಲ್ಲಿದ್ದೇನೆ. ಮೌಲ್ಯಾಧಾರಿತ ರಾಜಕಾರಣಕ್ಕಾಗಿ ಇಲ್ಲಿ ಉಳಿದಿದ್ದೇನೆ. ವರ್ಗಾವಣೆ ದಂಧೆಗೆ ಅಧಿಕಾರ ಬಳಸಿಲ್ಲ. ಪತ್ರ ಕೊಟ್ಟರೆ ಸಚಿವರು ತೆಗೆದುಕೊಳ್ಳುವುದಕ್ಕೂ ಹಿಂದು–ಮುಂದು ನೋಡುತ್ತಾರೆ. ನಮ್ಮ ವಯಸ್ಸಿಗೂ ಮರ್ಯಾದೆ ಬೇಡವೆ' ಎಂದು ಪ್ರಶ್ನಿಸಿದ್ದಾಗಿ ಗೊತ್ತಾಗಿದೆ.

ನಿಗಮ– ಮಂಡಳಿ ನೇಮಕಕ್ಕೆ ಸಮಿತಿ

ನಿಗಮ, ಮಂಡಳಿ, ಪ್ರಾಧಿಕಾರ ಸೇರಿದಂತೆ ನಾಮನಿರ್ದೇಶನದ ಮೂಲಕ ಅಧಿಕಾರ ನೀಡುವ ಪ್ರಕ್ರಿಯೆಯನ್ನು ನ್ಯಾಯಸಮ್ಮತವಾಗಿ ನಡೆಸುವಂತೆ ಹಲವು ಶಾಸಕರು ಸಭೆಯಲ್ಲಿ ಆಗ್ರಹಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನೇಮಕಾತಿಗಾಗಿ ಆಯ್ಕೆ ಸಮಿತಿ ರಚಿಸುವುದಾಗಿ ಪ್ರಕಟಿಸಿದ್ದಾರೆ.

ದುಡ್ಡು ಕೊಟ್ಟರೆ ಮಂತ್ರಿ ಆಗಬಹುದಾ?

ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನೇ ಸೋಲಿಸಲು ಪ್ರಯತ್ನಿಸಿದ ಆರೋಪದ ಮೇಲೆ ಎನ್.ಎಸ್. ಬೋಸರಾಜು ಅವರ ವಿರುದ್ಧ ರಾಯಚೂರಿನ ಶಾಸಕರು ದೂರು ನೀಡಿದ್ದರೂ, ಅದನ್ನು ಕಡೆಗಣಿಸಿ ಅವರಿಗೆ ಸಚಿವ ಸ್ಥಾನ ನೀಡಿರುವುದಕ್ಕೆ ಶಾಸಕ ಹಂಪನಗೌಡ ಬಾದರ್ಲಿ ಸಭೆಯಲ್ಲೇ ಅಸಮಾಧಾನ ಹೊರಹಾಕಿದ್ದಾರೆ.

'ಚುನಾವಣೆಯಲ್ಲಿ ಒಬ್ಬರು ನಮ್ಮನ್ನೇ ಸೋಲಿಸಲು ಪ್ರಯತ್ನಿಸಿದ್ದರು. ಅವರನ್ನೇ ನೀವು ಮಂತ್ರಿ ಮಾಡಿದ್ದೀರಿ. ಏನಿದರ ಅರ್ಥ' ಎಂದು ಮುಖ್ಯಮಂತ್ರಿಯವರನ್ನು ಹಂಪನಗೌಡ ಪ್ರಶ್ನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಅವರಿಗೆ ದನಿಗೂಡಿಸಿದ ಕೆಲವು ಶಾಸಕರು, 'ಕೆಲವರು ದುಡ್ಡು ಕೊಟ್ಟು ಮಂತ್ರಿ ಆಗಿದ್ದಾರೆ. ಈಗ ವಿಧಾನ ಪರಿಷತ್ ಸ್ಥಾನವನ್ನೂ ದುಡ್ಡಿದ್ದವರಿಗೆ ಕೊಡಲು ತಯಾರಿ ನಡೆದಿದೆ. ದುಡ್ಡಿದ್ದರೆ ಎಲ್ಲವನ್ನೂ ಪಡೆಯಬಹುದಾ' ಎಂಬುದಾಗಿ ಪ್ರಶ್ನಿಸಿದ್ದಾರೆ ಎಂದು ಗೊತ್ತಾಗಿದೆ.

ಸಭೆಯಲ್ಲಿ ಶಾಸಕರು ಹೇಳಿದ್ದೇನು?

ನೀವು ಅನುದಾನ ಕೊಡಲು ಸಾಧ್ಯವೇ ಇಲ್ಲ ಎನ್ನುತ್ತೀರಿ. ಆದರೆ, ಕಮಿಷನ್ ಕೊಟ್ಟರೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ಅನುದಾನ ಕೊಡಿಸುವುದಾಗಿ ಮಧ್ಯವರ್ತಿಗಳು ನಮ್ಮ ಬಳಿ ಬರುತ್ತಿದ್ದಾರೆ. ಹೀಗಿರುವಾಗ ನಾವು ಶಾಸಕರಾಗಿ ಆಯ್ಕೆಯಾಗಿರುವುದು ಏಕೆ?

ಯಶವಂತರಾಯಗೌಡ ಪಾಟೀಲ, ಇಂಡಿ

ಡಿ.ಕೆ. ಶಿವಕುಮಾರ್ ಮತ್ತು ನಾನು ಒಟ್ಟಿಗೆ ವಿಧಾನಸಭೆಗೆ ಬಂದವರು. ಆರನೇ ಬಾರಿ ಶಾಸಕನಾದರೂ ಕಾರಣಾಂತರಗಳಿಂದ ನಾನು ಹೀಗೆ ಉಳಿದಿರಬಹುದು. ನನ್ನ ಕ್ಷೇತ್ರದಲ್ಲಿ ಬಿಜೆಪಿ ಅವಧಿಯಲ್ಲಿ ನೇಮಿಸಿದ್ದ ಅಧಿಕಾರಿಗಳ ಬದಲಾವಣೆ ಆಗುತ್ತಿಲ್ಲ. ಪಕ್ಷ ಕಾರ್ಯಕರ್ತರು ನನ್ನನ್ನೇ ಅಣಕಿಸುವಂತಾಗಿದೆ.

ಸಿ.ಎಸ್. ನಾಡಗೌಡ, ಮುದ್ದೇಬಿಹಾಳ

ನನ್ನ ಕ್ಷೇತ್ರದಲ್ಲಿ ಶಾಸಕರ ಅಧಿಕಾರದ ವ್ಯಾಪ್ತಿಯ ವಿಚಾರಗಳಿಗೂ ಮುಖ್ಯಮಂತ್ರಿ ಕಚೇರಿ ಹೆಸರಿನಲ್ಲಿ ಟಿಪ್ಪಣಿಗಳು ಬಂದಿವೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಶಾಸಕನಾಗಿ ಏನು ಮಾಡಬೇಕು?

ವಿಜಯಾನಂದ ಕಾಶಪ್ಪನವರ, ಹುನಗುಂದ

ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿದ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ₹ 12 ಲಕ್ಷ ಅನುದಾನ ಬೇಕಿದೆ. ಅದನ್ನು ಕೇಳಲು ಹೋದರೆ ಸಚಿವರು ಸ್ಪಂದಿಸುತ್ತಿಲ್ಲ. ಕಾಂಗ್ರೆಸ್ ಸರ್ಕಾರ ಬಂದು ಹೀಗಾದರೆ ಗತಿ ಏನು?

ಜೆ.ಎನ್. ಗಣೇಶ್, ಕಂಪ್ಲಿ

ಕಟ್ಟಪಟ್ಟು ಗೆದ್ದು ಬಂದವರು ನಾವು. ಕೆಲವು ಸಚಿವರು ಶಾಸಕರಿಗೆ ಮರ್ಯಾದೆ ಕೊಡುತ್ತಿಲ್ಲ.

ಪಿ.ಎಂ. ನರೇಂದ್ರಸ್ವಾಮಿ, ಮಳವಳ್ಳಿ

ದೆಹಲಿ ಸೇವಾ ವಿಷಯಗಳ ನಿಯಂತ್ರಣಕ್ಕೆ ಹೊರಡಿಸಿದ್ದ ಸುಗ್ರೀವಾಜ್ಞೆ ಬದಲಿಸುವ ವಿಚಾರ

ಮುಂದಿನ ವಾರ ಮಸೂದೆ ಮಂಡನೆ

ನವದೆಹಲಿ(ಪಿಟಿಐ): ಆಮ್ ಆದ್ಮಿ ಪಕ್ಷ (ಎಎಪಿ) ಮತ್ತು ಕೇಂದ್ರ ಸರ್ಕಾರದ ನಡುವೆ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿರುವ ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಸಂಬಂಧ ಹೊರಡಿಸಿರುವ ಸುಗ್ರೀವಾಜ್ಞೆ ಬದಲಾಯಿಸುವ ಮಸೂದೆಯನ್ನು ಮುಂದಿನ ವಾರ ಲೋಕಸಭೆಯಲ್ಲಿ ಮಂಡಿಸಲಾಗುವುದು ಎಂದು ಕಾನೂನು ಸಚಿವ ಅರ್ಜುನರಾಮ್ ಮೆಘವಾಲ್ ಶುಕ್ರವಾರ ತಿಳಿಸಿದ್ದಾರೆ.

ಅಧಿವೇಶನ ಹಿನ್ನೆಲೆಯಲ್ಲಿ ಮುಂದಿನ ವಾರದ ಕಲಾಪದ ವೇಳೆ ಕೈಗೆತ್ತಿಕೊಳ್ಳಲಾಗುವ ವಿಷಯಗಳ ಕುರಿತು ಅವರು ಸದನಕ್ಕೆ ಮಾಹಿತಿ ನೀಡುವ ವೇಳೆ ಈ ವಿಷಯ ತಿಳಿಸಿದರು.

ಮಂಗಳವಾರವಷ್ಟೆ, 'ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ (ತಿದ್ದುಪಡಿ) ಮಸೂದೆ'ಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಮೇ 19ರಂದು ಕೇಂದ್ರ ಸರ್ಕಾರ ಹೊರಡಿಸಿದ್ದ ಸುಗ್ರೀವಾಜ್ಞೆಯನ್ನು ಈ ಮಸೂದೆ ಬದಲಿಸುತ್ತದೆ.

ಸದನದಲ್ಲಿ ಮಂಡನೆಯಾಗಲಿರುವ ಈ ಮಸೂದೆಯನ್ನು ವಿರೋಧಿಸಿ ನಿರ್ಣಯ ಕೈಗೊಳ್ಳುವ ಕುರಿತು ಕಾಂಗ್ರೆಸ್‌ನ ಅಧಿರ್ ರಂಜನ್ ಚೌಧರಿ, ಡೀನ್ ಕುರಿಯಾಕೋಸ್, ಟಿಎಂಸಿಯ ಸೌಗತ ರಾಯ್, ಡಿಎಂಕೆಯ ಎ.ರಾಜಾ, ಆರ್‌ಎಸ್‌ಪಿಯ ಎನ್.ಕೆ.ಪ್ರೇಮಚಂದ್ರನ್ ನೋಟಿಸ್ ನೀಡಿದ್ದಾರೆ.

ಹಲವು ಮಸೂದೆಗಳ ಅಂಗೀಕಾರ: ಮಣಿಪುರ ವಿದ್ಯಮಾನ ಮುಂದಿಟ್ಟುಕೊಂಡು ವಿರೋಧ ಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗುತ್ತಿರುವ ನಡುವೆಯೇ, ಲೋಕಸಭೆಯಲ್ಲಿ ಶುಕ್ರವಾರ ಹಲವು ಮಸೂದೆಗಳನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ರಾಷ್ಟ್ರೀಯ ನರ್ಸಿಂಗ್ ಮತ್ತು ಪ್ರಸೂತಿ ವಿಜ್ಞಾನ ಆಯೋಗ ಮಸೂದೆ–2023, ರಾಷ್ಟ್ರೀಯ ದಂತ ಆಯೋಗ ಮಸೂದೆ–2023 ಅನ್ನು ಅಂಗೀಕರಿಸಲಾಯಿತು. ಶುಶ್ರೂಷೆ ಮತ್ತು ದಂತ ವೈದ್ಯ ಶಿಕ್ಷಣದಲ್ಲಿ ಗುಣಮಟ್ಟ ವೃದ್ಧಿಗೆ ಸಂಬಂಧಿಸಿದ ಅಂಶಗಳನ್ನು ಈ ಮಸೂದೆಗಳು ಒಳಗೊಂಡಿವೆ.

ಪ್ರಮುಖ ಖನಿಜಗಳ ಸಮೀಕ್ಷೆ ನಡೆಸಲು ಖಾಸಗಿ ವಲಯದ ಕಂಪನಿಗಳಿಗೆ ಪರವಾನಗಿ ನೀಡಲು ಅನುವು ಮಾಡಿಕೊಡುವ ಗಣಿ ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆಯನ್ನೂ ಅಂಗೀಕರಿಸಲಾಯಿತು.

ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ ಜೋಶಿ ಮಂಡಿಸಿದ ಈ ಮಸೂದೆಯನ್ನು ವಿಪಕ್ಷಗಳ ಸದಸ್ಯರ ಗದ್ದಲದ ನಡುವೆಯೇ ಅಂಗೀಕರಿಸಲಾಯಿತು.

'ಈ ತಿದ್ದುಪಡಿ ಮಸೂದೆಯು ಭಾರಿ ಬದಲಾವಣೆಗೆ ಕಾರಣವಾಗಲಿದೆ. ಶತಕೋಟಿ ಟನ್‌ಗಳಷ್ಟು ಕಲ್ಲಿದ್ದಲನ್ನು ಉತ್ಪಾದಿಸುವ ಮೂಲಕ ಇಂಧನ ಕ್ಷೇತ್ರದಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲಾಗುವುದು' ಎಂದು ಜೋಶಿ ಹೇಳಿದರು.

'2025–26ರ ವೇಳೆಗೆ ಕಲ್ಲಿದ್ದಲು ಆಮದನ್ನು ನಿಲ್ಲಿಸಲು ನಾವು ನಿರ್ಧರಿಸಿದ್ದೇವೆ' ಎಂದೂ ಅವರು ಸದನಕ್ಕೆ ತಿಳಿಸಿದರು.

ಮಂಡನೆ: ವಿಪಕ್ಷಗಳ ಸದಸ್ಯರ ಗದ್ದಲದ ನಡುವೆಯೇ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು 'ಇಂಡಿಯನ್ ಇನ್‌ಸ್ಟಿಟ್ಯೂಟ್ಸ್ ಆಫ್ ಮ್ಯಾನೇಜ್‌ಮೆಂಟ್ ಆ್ಯಕ್ಟ್,2017'ಕ್ಕೆ ತಿದ್ದುಪಡಿ ಉದ್ದೇಶದ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದರು. ಮುಂಬೈನಲ್ಲಿ ಐಐಎಂ ಸ್ಥಾಪಿಸಲು ಈ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.


ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ ಜೋಶಿ ಲೋಕಸಭೆಯಲ್ಲಿ ಶುಕ್ರವಾರ ಮಾತನಾಡಿದರು —ಪಿಟಿಐ ಚಿತ್ರ

ವೈದ್ಯಕೀಯ ಕಾಲೇಜು, ಎಂಬಿಬಿಎಸ್ ಸೀಟುಗಳ ದ್ವಿಗುಣ: ಮಾಂಡವಿಯಾ

ನವದೆಹಲಿ(ಪಿಟಿಐ): 2014ರ ನಂತರ ದೇಶದಲ್ಲಿ ವೈದ್ಯಕೀಯ ಕಾಲೇಜುಗಳ ಸಂಖ್ಯೆಯಲ್ಲಿ ಶೇ 82ರಷ್ಟು, ಎಂಬಿಬಿಎಸ್ ಸೀಟುಗಳ ಸಂಖ್ಯೆಯಲ್ಲಿ ಶೇಕಡ 110ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಶುಕ್ರವಾರ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಮಾಂಡವಿಯಾ, ಇದಕ್ಕೆ ಸಂಬಂಧಿಸಿದ ಅಂಕಿ– ಅಂಶಗಳನ್ನು ಸದನದಲ್ಲಿ ನೀಡಿದರು.

2014ರಲ್ಲಿ ದೇಶದಲ್ಲಿ 387 ವೈದ್ಯಕೀಯ ಕಾಲೇಜುಗಳಿದ್ದವು. ಈಗ 704 ಕಾಲೇಜುಗಳಿವೆ. ಇದೇ ಅವಧಿಯಲ್ಲಿ ಎಂಬಿಬಿಎಸ್ ಸೀಟುಗಳ ಸಂಖ್ಯೆ 51,348ರಿಂದ 1,07,948ಕ್ಕೆ (ಶೇ 110ರಷ್ಟು ಹೆಚ್ಚಳ) ಏರಿದೆ. 2014ಕ್ಕೂ ಮೊದಲು 31,185 ಸ್ನಾತಕೋತ್ತರ ವೈದ್ಯಕೀಯ ಸೀಟು ಗಳಿದ್ದವು. ಈಗ 67,802ಕ್ಕೆ (ಶೇ 117ರಷ್ಟು ಹೆಚ್ಚಳ) ಏರಿವೆ ಎಂದರು.

ಮಸೂದೆ ಸೋಲಿಸಲು ಜೋಶಿ ಸವಾಲು

'ಲೋಕಸಭೆಯಲ್ಲಿ ಅಗತ್ಯದಷ್ಟು ಸಂಖ್ಯಾಬಲ ಹೊಂದಿರುವ ವಿಶ್ವಾಸವಿದ್ದಲ್ಲಿ ಕೇಂದ್ರ ಸರ್ಕಾರ ಮಂಡಿಸಲಿರುವ ಮಸೂದೆಗಳನ್ನು ಸೋಲಿಸಿ' ಎಂದು ಸಚಿವ ಪ್ರಲ್ಹಾದ ಜೋಶಿ ಅವರು ವಿರೋಧ ಪಕ್ಷಗಳ ಸದಸ್ಯರಿಗೆ ಸವಾಲು ಹಾಕಿದರು.

ಅವಿಶ್ವಾಸ ನಿರ್ಣಯ ಕುರಿತ ಸೂಚನೆ ಲೋಕಸಭೆಯಲ್ಲಿ ಚರ್ಚೆಗೆ ಬಾಕಿ ಇರುವಾಗ ಕಲಾಪ ನಡಾವಳಿ ಕೈಗೆತ್ತಿಕೊಳ್ಳುತ್ತಿರುವುದಕ್ಕೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದಾಗ ಜೋಶಿ ಅವರಿಂದ ಈ ತೀಕ್ಷ್ಣ ಪ್ರತಿಕ್ರಿಯೆ ಕಂಡುಬಂತು. ಬಳಿಕ ಸಂಸತ್ ಹೊರಗಡೆ ಸುದ್ದಿಗಾರರೊಂದಿಗೆ ಮಾತನಾಡಿದ ಜೋಶಿ, 'ವಿಪಕ್ಷಗಳು ಏಕಾಏಕಿ ಅವಿಶ್ವಾಸ ನಿರ್ಣಯ ಮಂಡಿಸಿವೆ ಎಂದ ಮಾತ್ರಕ್ಕೆ ಸರ್ಕಾರ ಇತರ ವಿಷಯಗಳನ್ನು ಕೈಗೆತ್ತಿಕೊಳ್ಳಬಾರದು ಎಂದರ್ಥವೇ' ಎಂದು ಪ್ರಶ್ನಿಸಿದರು.

ವಿರೋಧ ಪಕ್ಷಗಳ ಸಂಸದರು ಮಣಿಪುರಕ್ಕೆ ಭೇಟಿ ನೀಡಲು ನಿರ್ಧರಿಸಿರುವ ಕುರಿತ ಪ್ರಶ್ನೆಗೆ, 'ಅವರು ಮಣಿಪುರಕ್ಕೆ ಹೋಗಿ, ವರದಿ ಸಿದ್ಧಪಡಿಸಲಿ. ಅವರು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ, ಮಣಿಪುರ ಪರಿಸ್ಥಿತಿ ಕುರಿತ ಎಲ್ಲ ವಿಷಯವನ್ನು ಸದನದಲ್ಲಿ ಮಂಡಿಸಲು ನಾವು ಸಿದ್ಧ' ಎಂದು ಉತ್ತರಿಸಿದರು.

ಡೆರೆಕ್– ಧನಕರ್ ವಾಗ್ವಾದ

ನವದೆಹಲಿ(ಪಿಟಿಐ): ಮಣಿಪುರದಲ್ಲಿನ ಹಿಂಸಾಚಾರದ ಬಗ್ಗೆ ಸದನದಲ್ಲಿ ಚರ್ಚೆ ನಡೆಸುವ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಸಭೆಯಲ್ಲಿ ಶುಕ್ರವಾರ ಟಿಎಂಸಿ ಸದಸ್ಯ ಡೆರಿಕ್ ಓಬ್ರಿಯಾನ್ ಮತ್ತು ಸಭಾಪತಿ ಜಗದೀಪ್ ಧನಕರ್ ನಡುವೆ ಮಾತಿನ ಚಕಮಕಿ ನಡೆಯಿತು.

ನಿಯಮ 267ರ ಅಡಿಯಲ್ಲಿ ಮಣಿಪುರದಲ್ಲಿನ ಪರಿಸ್ಥಿತಿಯ ಬಗ್ಗೆ ಚರ್ಚೆಗೆ ಅವಕಾಶ ನೀಡುವಂತೆ ವಿರೋಧ ಪಕ್ಷಗಳ ಸದಸ್ಯರು ನೀಡಿದ ನೋಟಿಸ್ ಸ್ವೀಕರಿಸದಿರುವ ಬಗ್ಗೆ ಪ್ರಸ್ತಾಪಿಸುವಾಗ ಓಬ್ರಿಯಾನ್ ಅವರು ಮೇಜು ಕುಟ್ಟಿ, ಸಭಾಪತಿ ಅವರೊಂದಿಗೆ ವಾಗ್ವಾದಕ್ಕೆ ಇಳಿದರು. ಇದರಿಂದ ವಿಚಲಿತರಾದಂತೆ ಕಂಡುಬಂದ ಧನಕರ್ ಅವರು 'ನಿಮ್ಮ ವರ್ತನೆ ನಾಟಕೀಯವಾಗಿದೆ. ಇದನ್ನು ಸಹಿಸಲಾಗದು' ಎಂದು ಹೇಳಿ, ಕಲಾಪವನ್ನು ಹಠಾತ್ತನೆ ಸೋಮವಾರಕ್ಕೆ ಮುಂದೂಡಿದರು.

ಮುಸ್ಲಿಮರ ವಿರುದ್ಧದ ಹಿಂಸಾಚಾರ ನಿಗ್ರಹ ಅರ್ಜಿ ವಿಚಾರಣೆಗೆ ಒಪ್ಪಿಗೆ



ನವದೆಹಲಿ(ಪಿಟಿಐ): ಗೋರಕ್ಷಕರಿಂದ ಮುಸ್ಲಿಮರ ಹತ್ಯೆ ಹಾಗೂ ಅವರ ವಿರುದ್ಧದ ಹಿಂಸಾಚಾರ ಪ್ರಕರಣಗಳ ಕುರಿತು ತಕ್ಷಣ ಕ್ರಮ ಕೈಗೊಳ್ಳಲು ಎಲ್ಲ ರಾಜ್ಯಗಳಿಗೆ ನಿರ್ದೇಶನ ನೀಡುವಂತೆ ಕೋರಿ ಮಹಿಳಾ ಸಂಘಟನೆ ಸಲ್ಲಿಸಿ ರುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿತು.

ಸಿಪಿಐ ಜೊತೆ ನಂಟು ಹೊಂದಿರುವ ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಐಡಬ್ಲ್ಯು) ಈ ಮನವಿ ಸಲ್ಲಿಸಿದೆ.

'ಇದೇ ವಿಚಾರವಾಗಿ 2018ರಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿಗೆ ಅನುಸಾರವಾಗಿ ಪರಿಣಾಮಕಾರಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಬೇಕು' ಎಂದು ಒಕ್ಕೂಟ ಮನವಿ ಮಾಡಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಜೆ.ಬಿ.ಪಾರ್ದೀವಾಲಾ ಅವರಿದ್ದ ನ್ಯಾಯಪೀಠವು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರ, ಮಹಾರಾಷ್ಟ್ರ, ಒಡಿಶಾ, ರಾಜಸ್ಥಾನ, ಬಿಹಾರ, ಮಧ್ಯಪ್ರದೇಶ ಮತ್ತು ಹರಿಯಾಣ ರಾಜ್ಯಗಳ ಡಿಜಿಪಿಗಳಿಗೆ ನೋಟಿಸ್ ಜಾರಿ ಮಾಡಿತು.

ಒಕ್ಕೂಟ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, ಇಂತಹ ಪ್ರಕರಣಗಳಲ್ಲಿ ನ್ಯಾಯ ಕೇಳಿ ಹೈಕೋರ್ಟ್‌ಗಳಿಗೆ ಮನವಿ ಸಲ್ಲಿಸುವಂತೆ ಸೂಚಿಸಲಾಗುತ್ತದೆ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಈ ರೀತಿ ಸೂಚನೆ ಇದ್ದಾಗ ನಾನು ಹಲವು ಹೈಕೋರ್ಟ್‌ಗಳ ಕದ ತಟ್ಟಬೇಕಾಗುತ್ತದೆ. ಆಗ, ಹತ್ತು ವರ್ಷಗಳ ನಂತರ ₹ 2 ಲಕ್ಷ ಪರಿಹಾರ ನೀಡುವುದನ್ನು ಬಿಟ್ಟರೆ ಸಂತ್ರಸ್ತರಿಗೆ ಏನು ಸಿಗುತ್ತದೆ? ಗುಂಪು ಹಿಂಸಾಚಾರ ಕುರಿತ ತೆಹಸೀನ್ ಪೂನಾವಾಲಾ ಪ್ರಕರಣಕ್ಕೆ ಸಂಬಂಧಿಸಿ 2018ರಲ್ಲಿ ತೀರ್ಪು ನೀಡಿದ್ದಾಗ್ಯೂ, ನನಗೆ ಏನು ಪರಿಹಾರ ಸಿಕ್ಕಿದೆ? ನಾನು ಎಲ್ಲಿಗೆ ಹೋಗಬೇಕು' ಎಂದು ಸಿಬಲ್ ನ್ಯಾಯಪೀಠಕ್ಕೆ ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಸಂಬಂಧಪಟ್ಟ ಕಕ್ಷಿದಾರರಿಗೆ ನೋಟಿಸ್ ನೀಡಲಾಗುತ್ತದೆ ಎಂದು ಹೇಳಿತು.

ಎಲ್ಗಾರ್ ಪರಿಷತ್ ಪ್ರಕರಣ ಇಬ್ಬರಿಗೆ ಜಾಮೀನು

ನವದೆಹಲಿ (ಪಿಟಿಐ): ಎಲ್ಗಾರ್ ಪರಿಷತ್–ಮಾವೋವಾದಿಗಳ ಜೊತೆ ಸಂಪರ್ಕ ಪ್ರಕರಣದಲ್ಲಿ ಹೋರಾಟಗಾರರಾದ ವೆರ್ನನ್ ಗೊನ್ಸಾಲ್ವೆಸ್ ಮತ್ತು ಅರುಣ್ ಫೆರೀರಾ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ಇಬ್ಬರೂ 5 ವರ್ಷಗಳಿಂದ ಪೊಲೀಸರ ವಶದಲ್ಲಿದ್ದಾರೆ ಎಂಬ ಅಂಶವನ್ನು ಪರಿಗಣಿಸಿದ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠವು ಜಾಮೀನು ಮಂಜೂರು ಮಾಡಿತು.

'ಇಬ್ಬರೂ ಮಹಾರಾಷ್ಟ್ರದಿಂದ ಹೊರಗೆ ಹೋಗಬಾರದು, ಪೊಲೀಸರಿಗೆ ಪಾಸ್‌ಪೋರ್ಟ್ ಒಪ್ಪಿಸಬೇಕು. ಇಬ್ಬರ ವಿಳಾಸದ ಮಾಹಿತಿ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರಿಗೆ ತಿಳಿದಿರಬೇಕು' ಎಂದೂ ನಿರ್ದೇಶಿಸಿತು. ಇಬ್ಬರಿಗೂ ಮೊಬೈಲ್ ಫೋನ್ ಬಳಸಲು ಅವಕಾಶ ನೀಡಲಾಗಿದೆ

ಬಾಂಬೆ ಹೈಕೋರ್ಟ್ ಈ ಮುಂಚೆ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಇಬ್ಬರೂ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಈ ಪ್ರಕರಣ 2017ರ ಡಿ.31ರಂದು ಪುಣೆಯಲ್ಲಿ ನಡೆದಿದ್ದ ಎಲ್ಗಾರ್ ಪರಿಷತ್ ಸಭೆಗೆ ಸಂಬಂಧಿಸಿದ್ದಾಗಿದೆ. 'ಸಭೆಗೆ ಮಾವೋವಾದಿಗಳು ಹಣ ನೆರವು ನೀಡಿದ್ದರು. ಅಲ್ಲಿನ ಪ್ರಚೋದನಕಾರಿ ಭಾಷಣದಿಂದಾಗಿ ಭೀಮಾ– ಕೋರೆಗಾಂವ್ ಯುದ್ಧ ಸ್ಮಾರಕದ ಬಳಿ ಮಾರನೆ ದಿನ ಹಿಂಸಾತ್ಮಕ ಕೃತ್ಯಗಳು ನಡೆದಿದ್ದವು' ಎಂದು ಪೊಲೀಸರು ಆರೋಪಿಸಿದ್ದರು.

ಸರಣಿ ಗೆಲುವಿನ ವಿಶ್ವಾಸ

ವಿಂಡೀಸ್ ವಿರುದ್ಧದ 2ನೇ ಏಕದಿನ ಪಂದ್ಯ ಇಂದು; ಭಾರತಕ್ಕೆ ಜಯದ ಗುರಿ

ಬಾರ್ಬಡೋಸ್ (ಪಿಟಿಐ): 'ನಿಶ್ಶಕ್ತಗೊಂಡಿರುವ' ವೆಸ್ಟ್ ಇಂಡೀಸ್ ವಿರುದ್ಧ ಶನಿವಾರ ನಡೆಯುವ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಸುಧಾರಿತ ಬ್ಯಾಟಿಂಗ್ ಪ್ರದರ್ಶನ ನೀಡುವ ಗುರಿ ಹೊಂದಿರುವ ಭಾರತ, 'ಮೂಲ ಬ್ಯಾಟಿಂಗ್ ಸರದಿ'ಗೆ ಮರಳುವ ನಿರೀಕ್ಷೆಯಿದೆ. ಜೊತೆಗೆ ಈ ಪಂದ್ಯ ಗೆದ್ದು ಮೂರು ಪಂದ್ಯಗಳ ಸರಣಿಯಲ್ಲಿ ಗೆಲುವಿನ ಮುನ್ನಡೆ ಸಾಧಿಸುವ ವಿಶ್ವಾಸದಲ್ಲಿದೆ.

ಮೊದಲ ಏಕದಿನ ಪಂದ್ಯದಲ್ಲಿ ಮಧ್ಯಮ ಕ್ರಮಾಂಕದ ಆಟಗಾರರನ್ನು ಮುನ್ನೆಲೆಗೆ ತಂದು ಮಾಡಿದ ಪ್ರಯೋಗ, ರೋಹಿತ್ ಶರ್ಮಾ ಮತ್ತು ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಸ್ವಲ್ಪ ಮಟ್ಟಿಗೆ ಹಿನ್ನಡೆ ಉಂಟು ಮಾಡಿತ್ತು. ಆದರೆ, 115 ರನ್‌ಗಳ ಸಣ್ಣ ಗುರಿ ಎದುರಾಗಿದ್ದ ಕಾರಣ ಅಪಾಯ ಎದುರಾಗಿರಲಿಲ್ಲ.

ಎರಡನೇ ಪಂದ್ಯದಲ್ಲಿ ಮತ್ತೊಮ್ಮೆ ಸಣ್ಣ ಗುರಿ ಎದುರಾದರೂ, ಪ್ರವಾಸಿ ತಂಡ ಪ್ರಯೋಗಕ್ಕೆ ಹೋಗುವ ಸಾಧ್ಯತೆ ಕಡಿಮೆ. ನಾಯಕ ರೋಹಿತ್ ಶರ್ಮಾ, ಶುಭಮನ್ ಗಿಲ್ ಜೊತೆ ಇನಿಂಗ್ಸ್ ಆರಂಭಿಸಬಹುದು. ಕೊಹ್ಲಿ ಮೂರನೇ ಕ್ರಮಾಂಕದಲ್ಲೇ ಆಡಲು ಇಳಿಯಬಹುದು.



ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ವೆಸ್ಟ್ ಇಂಡೀಸ್ ತಂಡದ ನಾಯಕ ಶಾಯ್ ಹೋಪ್ –ಎಎಫ್‌ಪಿ ಚಿತ್ರ

ವಿಶ್ವಕಪ್‌ಗೆ ಮೊದಲು ಭಾರತಕ್ಕೆ 11 ಏಕದಿನ ಪಂದ್ಯಗಳನ್ನು ಆಡಲು ಇದ್ದು, ಸ್ಥಿರ ಬ್ಯಾಟಿಂಗ್ ಕ್ರಮಾಂಕಕ್ಕೇ ಒತ್ತು ನೀಡುವ ಸಾಧ್ಯತೆ ಕಾಣುತ್ತಿದೆ.

ಬಾರ್ಬಡೋಸ್‌ನ ಕೆನ್ಸಿಂಗ್ಟನ್ ಓವಲ್ ಮೈದಾನ, ವೆಸ್ಟ್ ಇಂಡೀಸ್‌ನ ಪ್ರಸಿದ್ಧ ವೇಗಿಗಳಾದ ಜೋಲ್ ಗಾರ್ನರ್, ಮಾಲ್ಕಂ ಮಾರ್ಷಲ್ ಅವರ ತವರು. ಅವರು ವೇಗದಿಂದ ಎಂಥವರನ್ನೂ ನಡುಗಿಸಬಲ್ಲ ಬೌಲರ್‌ಗಳಾಗಿದ್ದರು. ಆದರೆ, ತದ್ವಿರುದ್ಧ ಎಂಬಂತೆ, ಗುರುವಾರ ಇದೇ ಮೈದಾನದಲ್ಲಿ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ ಮತ್ತು ರವೀಂದ್ರ ಜಡೇಜ ಉತ್ತಮ ಬೌನ್ಸ್, ತಿರುವು ಪಡೆದು ಆತಿಥೇಯ ಬ್ಯಾಟರ್‌ಗಳನ್ನು ಕಾಡಿದರು.

ಭಾರತದ ಬ್ಯಾಟರ್‌ಗಳ ಪೈಕಿ ಸೂರ್ಯಕುಮಾರ್ ಯಾದವ್ ಮೇಲೆ ಒತ್ತಡವಿದೆ. ಟಿ–20ಯಲ್ಲಿ ಇರುವ ಲಯವನ್ನು ಅವರು ಏಕದಿನ ಪಂದ್ಯಗಳಲ್ಲಿ ಪ್ರದರ್ಶಿಸಿಲ್ಲ. ಮೊದಲ ಪಂದ್ಯದಲ್ಲಿ ಕುದುರಿಕೊಳ್ಳುವಂತೆ ಕಾಣುವಾಗಲೇ ಗುಡಾಕೇಶ್ ಮೋತಿ ಬೌಲಿಂಗ್‌ನಲ್ಲಿ ಸ್ವೀಪ್‌ಗೆ ಹೋಗಿ ಮತ್ತೊಮ್ಮೆ ಅಲ್ಪಮೊತ್ತಕ್ಕೆ ಮರಳಿದ್ದರು.

ಶ್ರೇಯಸ್ ಅಯ್ಯರ್ 'ಫಿಟ್' ಆದಲ್ಲಿ, ಜೊತೆಗೆ ಕೆ.ಎಲ್. ರಾಹುಲ್ ತಂಡಕ್ಕೆ ಮರಳಿದಲ್ಲಿ ಸೂರ್ಯ ಅವರ ಸ್ಥಾನ ಅಲುಗಾಡಬಹುದು. ಹೀಗಾಗಿ ಸಿಗುವ ಅವಕಾಶಗಳನ್ನು ಬಳಸಿಕೊಳ್ಳಬೇಕಾಗಿದೆ.

ಮೊಹಮ್ಮದ್ ಶಮಿ, ಬೂಮ್ರಾ, ಸಿರಾಜ್ ಮತ್ತು ಶಾರ್ದೂಲ್ ಠಾಕೂರ್ ನಂತರ ಮುಕೇಶ್ ಕುಮಾರ್ ಅವರಿಗೆ (ಮೀಸಲು) ಐದನೇ ಬೌಲರ್ ಆಗಿ ತಂಡದಲ್ಲಿ ಉಳಿಯುವ ಅವಕಾಶವಿದೆ. ಅವರು ಟೆಸ್ಟ್ ಮತ್ತು ಏಕದಿನ ಪಂದ್ಯದ ಬೌಲಿಂಗ್‌ನಲ್ಲಿ ಶಿಸ್ತು ಪ್ರದರ್ಶಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 7
ನೇರ ಪ್ರಸಾರ: ಡಿ.ಡಿ. ಸ್ಪೋರ್ಟ್ಸ್

ಟಿ–20 ವಿಶ್ವಕಪ್‌ಗೆ ಅರ್ಹತೆ ಪಡೆದ ಪಾಪುವಾ ನ್ಯೂಗಿನಿ

ಪೋರ್ಟ್ ಮೊರೆಸ್ಬಿ (ಪಿಟಿಐ): ಆತಿಥೇಯ ಪಾಪುವಾ ನ್ಯೂಗಿನಿ ತಂಡ, ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯಲಿರುವ ಮುಂದಿನ ಐಸಿಸಿ ಟಿ–20 ವಿಶ್ವಕಪ್‌ನಲ್ಲಿ ಆಡಲು ಅರ್ಹತೆ ಪಡೆದಿದೆ. ಪೂರ್ವ ಏಷ್ಯಾ ಪೆಸಿಫಿಕ್ ವಲಯ ಅರ್ಹತಾ ಟೂರ್ನಿಯಲ್ಲಿ ಶುಕ್ರವಾರ ಈ ತಂಡ 100 ರನ್‌ಗಳಿಂದ ಫಿಲಿಪೀನ್ಸ್ ತಂಡವನ್ನು ಸುಲಭವಾಗಿ ಸೋಲಿಸಿತು.

ಇದು ವಿಶ್ವಕಪ್‌ಗೆ ಅರ್ಹತೆ ಪಡೆದ 15ನೇ ತಂಡವಾಗಿದೆ. ಮೊದಲು ಬ್ಯಾಟ್ ಮಾಡಿದ ನ್ಯೂಗಿನಿ ತಂಡ 6 ವಿಕೆಟ್‌ಗೆ 229 ರನ್‌ಗಳ ಭಾರಿ ಒತ್ತ ಗಳಿಸಿತು. ಟೊನಿ ಉರ, ನಾಯಕ ಅಸದ್ ವಲಾ ಮತ್ತು ಚಾರ್ಲ್ಸ್ ಅಮಿನಿ ಕ್ರಮವಾಗಿ 61, 59 ಮತ್ತು 51 ರನ್ ಗಳಿಸಿದರು. ಫಿಲಿಪೀನ್ಸ್ ತಂಡ ಆಲೌಟ್ ಆಗದಿದ್ದರೂ 20 ಓವರುಗಳಲ್ಲಿ 7 ವಿಕೆಟ್‌ಗೆ 129 ರನ್ ಗಳಿಸಲಷ್ಟೇ ಶಕ್ತವಾಯಿತು.

ಪಾಪುವಾ ನ್ಯೂಗಿನಿ ಇದುವರೆಗೆ ಆಡಿದ ಐದೂ ಪಂದ್ಯಗಳನ್ನು ಗೆದ್ದುಕೊಂಡಿದೆ. ಜಪಾನ್ ವಿರುದ್ಧ ಶನಿವಾರ ಒಂದು ಪಂದ್ಯ ಬಾಕಿಯಿದ್ದರೂ, ಅದರ ಫಲಿತಾಂಶ ಅರ್ಹತೆಯ ಮೇಲೆ ಪರಿಣಾಮ ಬೀರದು.

ವಿಶ್ವಕಪ್‌ಗೆ ಇನ್ನೂ ಐದು ತಂಡಗಳಿಗೆ ಅರ್ಹತೆ ಪಡೆಯಲು ಅವಕಾಶವಿದೆ. ಒಟ್ಟು 20 ತಂಡಗಳು ಟಿ–20 ವಿಶ್ವಕಪ್‌ನಲ್ಲಿ ಆಡಲಿವೆ.

ಜಪಾನ್ ಓಪನ್: ಸಾತ್ವಿಕ್– ಚಿರಾಗ್ ಜೋಡಿಗೆ ನಿರಾಸೆ


ಸೆಮಿಫೈನಲ್‌ಗೆ ಲಕ್ಷ್ಯ ಸೇನ್

ಟೋಕಿಯೊ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಜಪಾನ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಯಶಸ್ಸಿನ ಓಟ ಮುಂದುವರಿಸಿದ್ದು, ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಆದರೆ, ಎಚ್.ಎಸ್. ಪ್ರಣಯ್ ಅವರು ಹಾಲಿ ವಿಶ್ವ ಚಾಂಪಿಯನ್ ವಿಕ್ಟರ್ ಆಕ್ಸೆಲ್ಸನ್ ಅವರಿಗೆ ಮಣಿದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರೂ ನಿರಾಸೆ ಅನುಭವಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ, ವಿಶ್ವದ 13ನೇ ಕ್ರಮಾಂಕದ ಸೇನ್ ಅವರು ಶುಕ್ರವಾರ ನಡೆದ ಪಂದ್ಯದಲ್ಲಿ ಸ್ಥಳೀಯ ಆಟಗಾರ ಕೋಕಿ ವಟನಾಬೆ ಅವರನ್ನು 21–15, 21–19 ರಿಂದ ಪರಾಭವಗೊಳಿಸಿದರು. ಈ ಮೂಲಕ 21 ವರ್ಷದ ಭಾರತದ ಆಟಗಾರ ಸತತ ಮೂರು ಟೂರ್ನಿಗಳಲ್ಲಿ (ಕೆನಡಾ ಓಪನ್, ಅಮೆರಿಕ ಓಪನ್) ನಾಲ್ಕರ ಘಟ್ಟಕ್ಕೆ ಪ್ರವೇಶ ಪಡೆದಂತಾಗಿದೆ.

ಈ ತಿಂಗಳ ಆರಂಭದಲ್ಲಿ ಕೆನಡಾ ಓಪನ್ ಚಾಂಪಿಯನ್ ಆಗಿದ್ದ ಸೇನ್, ಪಂದ್ಯದ ಮೊದಲ ಗೇಮ್ ಅನ್ನು ಅನಾಯಾಸವಾಗಿ ಗೆದ್ದರು. ಆದರೆ, ಎರಡನೇ ಗೇಮ್‌ನಲ್ಲಿ ಜಪಾನ್ ಆಟಗಾರನ ವಿರುದ್ಧ 7–14ರಿಂದ ಹಿನ್ನಡೆ ಅನುಭವಿಸಿದರು. ಈ ವೇಳೆ ಡ್ರಾಪ್‌ಶಾಟ್, ನಿಖರ ರಿಟರ್ನ್ ಹೊಡೆತಗಳ ಮೂಲಕ ಸೇನ್ ಮತ್ತೆ ಹಿಡಿತ ಸಾಧಿಸಿದರು. ಅವರು ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕದ ಇಂಡೋನೇಷ್ಯಾದ ಜೊನಾಥನ್ ಕ್ರಿಸ್ಟಿ ಅವರ ಸವಾಲನ್ನು ಎದುರಿಸುವರು.



ಲಕ್ಷ್ಯ ಸೇನ್ ಆಟದ ವೈಖರಿ– ಎಎಫ್‌ಪಿ ಚಿತ್ರ

ವಿಶ್ವದ 10ನೇ ಕ್ರಮಾಂಕದ ಎಚ್.ಎಸ್. ಪ್ರಣಯ್ ಅವರು ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವಿಶ್ವದ ಅಗ್ರ ಕ್ರಮಾಂಕದ ವಿಕ್ಟರ್ ಆಕ್ಸೆಲ್ಸನ್ (ಡೆನ್ಮಾರ್ಕ್) ವಿರುದ್ಧ 21–19, 18–21, 8–21ರಿಂದ ಸೋಲು ಅನುಭವಿಸಿದರು.

ಕೊರಿಯಾ ಮತ್ತು ಇಂಡೋನೇಷ್ಯಾ ಓಪನ್ ಚಾಂಪಿಯನ್, ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಪುರುಷರ ಡಬಲ್ಸ್‌ನಲ್ಲಿ ಆಘಾತ ಅನುಭವಿಸಿದರು. ಒಲಿಂಪಿಕ್ ಚಾಂಪಿಯನ್ನರಾದ ಚೀನಾ ತೈಪೆಯ ಲೀ ಯಾಂಗ್ ಮತ್ತು ವಾಂಗ್ ಚಿ-ಲಾನ್ ಎದುರು ಎಂಟರ ಘಟ್ಟದ ಪಂದ್ಯದಲ್ಲಿ 15–21, 25–23, 16–21ರಿಂದ ಪರಾಭವಗೊಂಡರು. ಈ ಮೂಲಕ ಸತತ 12 ಪಂದ್ಯಗಳ ಗೆಲುವಿನ ಓಟಕ್ಕೆ ತಡೆಬಿತ್ತು.

ಹಾಕಿ: ಇಂಗ್ಲೆಂಡ್ ಎದುರು ಡ್ರಾ ಸಾಧಿಸಿದ ಭಾರತ

ಬಾರ್ಸಿಲೋನಾ (ಪಿಟಿಐ): ಸ್ಫೂರ್ತಿಯುತ ಆಟದ ಪ್ರದರ್ಶನ ನೀಡಿದ ಭಾರತ ತಂಡ, ಸ್ಪ್ಯಾನಿಷ್ ಹಾಕಿ ಫೆಡರೇಷನ್ ಶತಮಾನೋತ್ಸವ ಅಂತರರಾಷ್ಟ್ರೀಯ ಹಾಕಿ ಟೂರ್ನಿಯ ತನ್ನ ಮೂರನೇ ಪಂದ್ಯದಲ್ಲಿ ಶುಕ್ರವಾರ ಇಂಗ್ಲೆಂಡ್ ಎದುರು ಡ್ರಾ ಸಾಧಿಸಿತು.

ಪಂದ್ಯದ ಐದನೇ ನಿಮಿಷ ಸ್ಯಾಮ್ ವಾರ್ಡ್, ಇಂಗ್ಲೆಂಡ್ ತಂಡಕ್ಕೆ ಮುನ್ನಡೆ ಒದಗಿಸಿಕೊಟ್ಟರೆ, ನಾಯಕ ಹರ್ಮನ್‌ಪ್ರೀತ್ ಸಿಂಗ್ 29ನೇ ನಿಮಿಷ ಗಳಿಸಿದ ಗೋಲಿನಿಂದ ಭಾರತ ಸಮಬಲ ಮಾಡಿಕೊಂಡಿತು. ಈ 'ಡ್ರಾ'ದಿಂದಾಗಿ ಭಾನುವಾರ ನಡೆಯುವ ಫೈನಲ್‌ಗೆ ಸ್ಥಾನ ಪಡೆಯುವ ಭಾರತ ತಂಡದ ಕನಸು ಭಗ್ನಗೊಂಡಿತು.

ಭಾರತ ತಂಡವು ಲೀಗ್‌ನ ಮೊದಲ ಪಂದ್ಯದಲ್ಲಿ ಆತಿಥೇಯ ಸ್ಪೇನ್ ವಿರುದ್ಧ 1–2 ಗೋಲುಗಳಿಂದ ಸೋತಿತ್ತು. ಎರಡನೇ ಪಂದ್ಯದಲ್ಲಿ ನೆದರ್ಲೆಂಡ್ ವಿರುದ್ಧ 1–1ರಿಂದ ಡ್ರಾ ಸಾಧಿಸಿತ್ತು. ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಭಾರತವು ಗೆಲುವು ಸಾಧಿಸಿದಲ್ಲಿ ಭಾರತಕ್ಕೆ ಫೈನಲ್ ತಲುಪುವ ಅವಕಾಶವಿತ್ತು.

ತಂಡವು ತನ್ನ ಮುಂದಿನ ಪಂದ್ಯವನ್ನು ಸ್ಥಾನ ನಿರ್ಧಾರಕ್ಕಾಗಿ ಆಡಲಿದೆ. ಇದರಲ್ಲಿ ಸ್ಪೇನ್–ನೆದರ್ಲೆಂಡ್ಸ್ ನಡುವಣ ಪಂದ್ಯದಲ್ಲಿ ಸೋತ ತಂಡವನ್ನು ಎದುರಿಸಲಿದೆ.

ದಕ್ಷಿಣ ವಲಯ ತಂಡಕ್ಕೆ ಭರ್ಜರಿ ಜಯ

ದೇವಧರ್ ಟ್ರೋಫಿ ಕ್ರಿಕೆಟ್ ಟೂರ್ನಿ: ಮತ್ತೆ ಮಿಂಚಿದ ವಿದ್ವತ್ ಕಾವೇರಪ್ಪ

ಪುದುಚೇರಿ (ಪಿಟಿಐ): ಮತ್ತೊಮ್ಮೆ ತನ್ನ ಆಲ್‌ರೌಂಡ್ 'ಪರಾಕ್ರಮ' ಮೆರೆದ ದಕ್ಷಿಣ ವಲಯ ತಂಡ, ದೇವಧರ್ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಈಶಾನ್ಯ ವಲಯ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಈಶಾನ್ಯ ವಲಯವನ್ನು ದಕ್ಷಿಣ ವಲಯ ಬೌಲರ್‌ಗಳು 136 ರನ್‌ಗಳಿಗೆ ಕಟ್ಟಿಹಾಕಿದರು. ಅದ್ಭುತ ಲಯವನ್ನು ಮುಂದುವರಿಸಿದ ಕರ್ನಾಟಕದ ವೇಗಿ ವಿದ್ವತ್ ಕಾವೇರಪ್ಪ (27ಕ್ಕೆ 3) ಮತ್ತು ತಮಿಳುನಾಡಿನ ಸಾಯಿ ಕಿಶೋರ್ (22ಕ್ಕೆ 3) ಅವರು ಈಶಾನ್ಯ ವಲಯದ ಪತನಕ್ಕೆ ಕಾರಣರಾದರು.

ದಕ್ಷಿಣ ವಲಯ ತಂಡ ಸುಲಭ ಗುರಿಯನ್ನು 19.3 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ಗಳಿಸಿತು. ರೋಹನ್ ಕುನ್ನುಮ್ಮಲ್ (ಔಟಾಗದೆ 87 ರನ್, 58 ಎ., 8X4, 5X6) ಅಬ್ಬರದ ಅರ್ಧಶತಕದ ಮೂಲಕ ಗಮನ ಸೆಳೆದರು. ರೋಹನ್ ಮತ್ತು ಮಯಂಕ್ ಅಗರವಾಲ್ (32 ರನ್, 46 ಎ.) ಮೊದಲ ವಿಕೆಟ್‌ಗೆ 95 ರನ್ ಸೇರಿಸಿದರು. ಮಯಂಕ್ ಔಟಾದ ಬಳಿಕ ಬಂದ ಜಗದೀಶನ್ (ಔಟಾಗದೆ 15) ಅವರೊಂದಿಗೆ ಸೇರಿ, ರೋಹನ್ ತಂಡವನ್ನು ಜಯದತ್ತ ಮುನ್ನಡೆಸಿದರು.



ಮೂರು ವಿಕೆಟ್ ಪಡೆದ ಕರ್ನಾಟಕದ ವೇಗಿ ವಿದ್ವತ್ ಕಾವೇರಪ್ಪ

ಈ ಗೆಲುವಿನ ಮೂಲಕ ದಕ್ಷಿಣ ವಲಯ ತಂಡ 12 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡಿತು.

ಈ ಪಂದ್ಯದಲ್ಲಿ ದಕ್ಷಿಣ ವಲಯ ತಂಡವು ವಾಸುಕಿ ಕೌಶಿಕ್ ಬದಲು ಅರ್ಜುನ್ ತೆಂಡೂಲ್ಕರ್ ಅವರನ್ನು ಕಣಕ್ಕಿಳಿಸಿತು. ಎಡಗೈ ವೇಗಿ ಅರ್ಜುನ್, ಆರಂಭಿಕ ಬ್ಯಾಟರ್ ಅನುಪ್ ಅಹ್ಲಾವತ್ (2) ಅವರ ವಿಕೆಟ್ ಪಡೆದರು. ಅದಕ್ಕೂ ಮುನ್ನ ವಿದ್ವತ್, ಇನ್ನೊಬ್ಬ ಆರಂಭಿಕ ಬ್ಯಾಟರ್ ನೀಲೇಶ್ ಲಮಿಚಾನೆ (9) ಅವರನ್ನು ಪೆವಿಲಿಯನ್‌ಗಟ್ಟಿದ್ದರು. ಆರಂಭದಲ್ಲೇ ಆಘಾತ ಅನುಭವಿಸಿದ ತಂಡಕ್ಕೆ ಚೇತರಿಸಿಕೊಳ್ಳಲು ಎದುರಾಳಿ ಬೌಲರ್‌ಗಳು ಅವಕಾಶವನ್ನೇ ನೀಡಲಿಲ್ಲ.

ವಿದ್ವತ್ ಅವರು ಮೂರು ಪಂದ್ಯಗಳಿಂದ 12 ವಿಕೆಟ್‌ಗಳ ಮೂಲಕ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಪೂರ್ವ ವಲಯಕ್ಕೆ ಜಯ: ದಿನದ ಮತ್ತೊಂದು ಪಂದ್ಯದಲ್ಲಿ ರಿಯಾನ್ ಪರಾಗ್ (131 ರನ್ ಹಾಗೂ 57ಕ್ಕೆ 4) ಅವರ ಆಲ್‌ರೌಂಡ್ ಆಟದ ನೆರವಿನಿಂದ ಪೂರ್ವ ವಲಯ ತಂಡ 88 ರನ್‌ಗಳಿಂದ ಉತ್ತರ ವಲಯ ತಂಡವನ್ನು ಮಣಿಸಿತು.

ಇನ್ನೊಂದು ಪಂದ್ಯದಲ್ಲಿ ಪಶ್ಚಿಮ ವಲಯ 1 ವಿಕೆಟ್‌ನಿಂದ ಕೇಂದ್ರ ವಲಯ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರ್: ಈಶಾನ್ಯ ವಲಯ 49.2 ಓವರ್‌ಗಳಲ್ಲಿ 136 (ಕಂಗಬಮ್ ಪ್ರಿಯೋಜಿತ್ 40, ವಿದ್ವತ್ ಕಾವೇರಪ್ಪ 27ಕ್ಕೆ 3, ಸಾಯಿ ಕಿಶೋರ್ 22ಕ್ಕೆ 3, ಅರ್ಜುನ್ ತೆಂಡೂಲ್ಕರ್ 21ಕ್ಕೆ 1, ವೈಶಾಖ್ ವಿಜಯಕುಮಾರ್ 29ಕ್ಕೆ 1) ದಕ್ಷಿಣ ವಲಯ 19.3 ಓವರ್‌ಗಳಲ್ಲಿ 1 ವಿಕೆಟ್‌ಗೆ 137 (ರೋಹನ್ ಕುನ್ನುಮ್ಮಲ್ ಔಟಾಗದೆ 87, ಮಯಂಕ್ ಅಗರವಾಲ್ 32, ನಾರಾಯಣ ಜಗದೀಶನ್ ಔಟಾಗದೆ 15) ಫಲಿತಾಂಶ: ದಕ್ಷಿಣ ವಲಯಕ್ಕೆ 9 ವಿಕೆಟ್ ಜಯ

ಪೂರ್ವ ವಲಯ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 337 (ರಿಯಾನ್ ಪರಾಗ್ 131, ಕುಮಾರ್ ಕುಶಾಗ್ರ 98, ಮಯಂಕ್ ಯಾದವ್ 63ಕ್ಕೆ 4, ಹರ್ಷಿತ್ ರಾಣಾ 54ಕ್ಕೆ 3) ಉತ್ತರ ವಲಯ: 45.3 ಓವರ್‌ಗಳಲ್ಲಿ 249 (ಅಭಿಷೇಕ್ ಶರ್ಮಾ 44, ಹಿಮಾಂಶು ರಾಣಾ 40, ಮನ್‌ದೀಪ್ ಸಿಂಗ್ 50, ರಿಯಾನ್ ಪರಾಗ್ 57ಕ್ಕೆ 4, ಶಹಬಾಜ್ ಅಹಮದ್ 41ಕ್ಕೆ 3) ಫಲಿತಾಂಶ: ಪೂರ್ವ ವಲಯಕ್ಕೆ 88 ರನ್ ಗೆಲುವು

ಏಷ್ಯಾಡ್: ಫೈನಲ್ ತಲುಪಿದರಷ್ಟೇ ಹರ್ಮನ್‌ಗೆ ಆಡುವ ಅವಕಾಶ

ನವದೆಹಲಿ (ಪಿಟಿಐ): ಐಸಿಸಿಯಿಂದ ಎರಡು ಪಂದ್ಯಗಳ ನಿಷೇಧಕ್ಕೆ ಒಳಗಾಗಿರುವ ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ತಂಡವು ಫೈನಲ್ ತಲುಪಿದರೆ ಮಾತ್ರ ಆಡಲು ಸಾಧ್ಯವಾಗುತ್ತದೆ.

ಚೀನಾದ ಹ್ಯಾಂಗ್‌ಝೌನಲ್ಲಿ ಸೆ.23ರಂದು ಏಷ್ಯನ್ ಗೇಮ್ಸ್ ಆರಂಭವಾಗಲಿದೆ. ಇದೇ ಮೊದಲ ಬಾರಿ ಪುರುಷರ ಮತ್ತು ಮಹಿಳೆಯರ ಕ್ರಿಕೆಟ್ ಅನ್ನು ಸೇರ್ಪಡೆಗೊಳಿಸಲಾಗಿದೆ. ಜೂನ್ 1ರ ಟಿ20 ರ‍್ಯಾಂಕಿಂಗ್ ಅನ್ವಯ ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ತಂಡಗಳು ನೇರವಾಗಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶ ಪಡೆದಿವೆ.

ಬಾಂಗ್ಲಾದೇಶದ ವಿರುದ್ಧ ಅಂತಿಮ ಏಕದಿನ ಪಂದ್ಯದ ವೇಳೆ ಅನುಚಿತ ವರ್ತನೆ ತೋರಿದ ಹರ್ಮನ್‌ಪ್ರೀತ್ ಕೌರ್ ಅವರಿಗೆ ಐಸಿಸಿ ಎರಡು ಪಂದ್ಯಗಳ ನಿಷೇಧ ಶಿಕ್ಷೆ ವಿಧಿಸಿದೆ. ಹೀಗಾಗಿ, ಅವರು ಕ್ವಾರ್ಟರ್ ಫೈನಲ್ ಮತ್ತು ಸೆಮಿಫೈನಲ್ ಪಂದ್ಯಗಳನ್ನು ಆಡುವಂತಿಲ್ಲ.

ಭಾರತದ ಪುರುಷರ ತಂಡವನ್ನು ಋತುರಾಜ್ ಗಾಯಕವಾಡ್ ಮುನ್ನಡೆಸಲಿದ್ದಾರೆ. ಪುರುಷರ ವಿಭಾಗದಲ್ಲಿ 18 ತಂಡಗಳು ಮತ್ತು ಮಹಿಳೆಯರ ವಿಭಾಗದಲ್ಲಿ 14 ತಂಡಗಳು ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲಿವೆ.



ಹರ್ಮನ್‌ಪ್ರೀತ್ ಕೌರ್

ಮಹಿಳೆಯರ ಕ್ರಿಕೆಟ್ ಪಂದ್ಯ ಸೆ.19ರಂದು ಆರಂಭವಾಗಲಿದ್ದು, ಸೆ. 26ರಂದು ಚಿನ್ನ ಮತ್ತು ಕಂಚಿನ ಪದಕಕ್ಕಾಗಿ ಹಣಾಹಣಿ ನಡೆಯಲಿದೆ.

ಪುರುಷರ ಕ್ರಿಕೆಟ್ ಪಂದ್ಯ ಸೆ.28ರಂದು ಆರಂಭವಾಗಲಿದ್ದು, ಅ.7ರಂದು ಅಂತಿಮ ಪಂದ್ಯಗಳು ನಡೆಯಲಿವೆ. ಭಾರತ ತಂಡ ಫೈನಲ್ ಪ್ರವೇಶಿಸಿದರೆ ಸತತ ಮೂರು ದಿನ ಪಂದ್ಯಗಳನ್ನು ಆಡಬೇಕಿದೆ. ಅ.5ರಂದು ಕ್ವಾರ್ಟರ್ ಫೈನಲ್, 6ರಂದು ಸೆಮಿಫೈನಲ್, 7ರಂದು ಫೈನಲ್ ಪಂದ್ಯಕ್ಕೆ ದಿನ ನಿಗದಿಯಾಗಿದೆ. ಈ ಮಧ್ಯೆ ಅ.5ರಂದು ಐಸಿಸಿ ಏಕದಿನ ವಿಶ್ವಕಪ್ ಟೂರ್ನಿ ಭಾರತದಲ್ಲಿ ಆರಂಭವಾಗಲಿದೆ.

ಸಂಕ್ಷಿಪ್ತ ಸುದ್ದಿ

ಈಜು: ಚೀನಾದ ಕ್ವಿನ್ ವಿಶ್ವದಾಖಲೆ



ಕ್ವಿನ್

ಫುಕೊವೊಕಾ (ಜಪಾನ್) (ರಾಯಿಟರ್ಸ್): ಚೀನಾದ ಕ್ವಿನ್ ಹೈಯಾಂಗ್ ಅವರು ವಿಶ್ವ ಈಜು ಚಾಂಪಿಯನ್‌ಷಿಪ್‌ನ ಪುರುಷರ 200 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ವಿಶ್ವದಾಖಲೆ ಸಹಿತ ಚಿನ್ನ ಗೆದ್ದರು. ಅವರು ಶುಕ್ರವಾರ ಈ ಸ್ಪರ್ಧೆಯನ್ನು 2ನಿ.05.48 ಸೆ.ಗಳಲ್ಲಿ ಪೂರೈಸಿದರು.

ಕ್ವಿನ್ 2022ರಲ್ಲಿ ಆಸ್ಟ್ರೇಲಿಯಾದ ಝೂಕ್ ಸ್ಟಬ್ಲೆಟ ಕುಕ್ ಅಡಿಲೇಡ್‌ನಲ್ಲಿ ಸ್ಥಾಪಿಸಿದ (2ನಿ.05.95 ಸೆ.) ದಾಖಲೆಯನ್ನು ಮುಳುಗಿಸಿದರು. ಝೂಕ್ ಇಲ್ಲಿ 0.92 ಸೆ.ಗಳಿಂದ ಹಿಂದೆಬಿದ್ದು ಬೆಳ್ಳಿ ಪದಕ ಪಡೆದರು. ಅಮೆರಿಕದ ಮ್ಯಾಟ್ ಫಾಲೊನ್ ಕಂಚಿನ ಪದಕ ಪಡೆದರು.

30ಕ್ಕೆ ಸಭೆ ಕರೆದಿರುವ ಬ್ರಿಜ್‌ಭೂಷಣ್

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಚುನಾವಣೆಗೆ ನಾಮಪತ್ರ ಸಲ್ಲಿಸಲು ಅಂತಿಮ ದಿನಕ್ಕೆ ಒಂದು ದಿನ ಮೊದಲು ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರು ಸಭೆ ಕರೆದಿದ್ದಾರೆ. ಅವರು ಪದಾಧಿಕಾರಿಗಳಾಗಿ ಸ್ಪರ್ಧಿಸಲಿರುವ ತಮ್ಮ ನಿಷ್ಠ ಗುಂಪಿನ ಅಭ್ಯರ್ಥಿಗಳ ಹೆಸರು ತಿಳಿಸುವ ಸಾಧ್ಯತೆಯಿದೆ.

ಬ್ರಿಜ್ ಭೂಷಣ್ ಮತ್ತು ಅವರ ಪುತ್ರ ಕರಣ್ ಈ ಬಾರಿ ಕಣದಲ್ಲಿರುವುದಿಲ್ಲ. ಬ್ರಿಜ್ ಈಗಾಗಲೇ 12 ವರ್ಷ ಅಧಿಕಾರ ಪೂರೈಸಿರುವ ಕಾರಣ ನಿಯಮದಂತೆ ಸ್ಪರ್ಧಿಸುವಂತಿಲ್ಲ. ಆದರೆ ಬಿಜೆಪಿ ನಾಯಕನ ಅಳಿಯ ವಿಶಾಲ್ ಸಿಂಗ್ ಅವರು ಬಿಹಾರದ ಪ್ರತಿನಿಧಿಯಾಗಿ ಉನ್ನತ ಹುದ್ದೆಗೆ ಸ್ಪರ್ಧಿಸುವ ಸಾಧ್ಯತೆ ಇದೆ.

ಬ್ರಿಜ್‌ಭೂಷಣ್ ಅವರು 30ರಂದು ಸಭೆ ಕರೆದಿರುವುದನ್ನು ಖಚಿತಪಡಿಸಿರುವ ಫೆಡರೇಷನ್‌ನ ನಿರ್ಗಮಿತ ಸಹಾಯಕ ಕಾರ್ಯದರ್ಶಿ ವಿನೋದ್ ತೋಮಾರ್ ಅವರು, ಸ್ಥಳ ಸಭೆಯ ತಿಳಿಸಿಲ್ಲ. ಆಗಸ್ಟ್ 12ರಂದು ಚುನಾವಣೆ ನಿಗದಿ ಆಗಿದ್ದು, ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ ಜುಲೈ 31.

ವೇಟ್‌ಲಿಫ್ಟಿಂಗ್: ಜ್ಯೋಷ್ನಾಗೆ ಕಂಚು

ನವದೆಹಲಿ (ಪಿಟಿಐ): ಭಾರತದ ಜ್ಯೋಷ್ನಾ ಸಬರ್ ಅವರು ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 40 ಕೆ.ಜಿ. ವಿಭಾಗದಲ್ಲಿ ಶುಕ್ರವಾರ ಎರಡು ಕಂಚಿನ ಪದಕಗಳನ್ನು ಗೆದ್ದರು.

ಗ್ರೇಟರ್ ನೋಯ್ಡಾದ ಗೌತಮ್ ಬುದ್ಧ ವಿಶ್ವವಿದ್ಯಾಲಯದಲ್ಲಿ ಚಾಂಪಿಯನ್‌ಷಿಪ್ ಗುರುವಾರ ಆರಂಭಗೊಂಡಿದ್ದು, ಆಗಸ್ಟ್ 5ರವರೆಗೆ ನಡೆಯಲಿದೆ. ಜ್ಯೋಷ್ನಾ ಅವರು ಕ್ಲೀನ್ ಮತ್ತು ಜರ್ಕ್ ಹಾಗೂ ಸ್ನ್ಯಾಚ್ ವಿಭಾಗದಲ್ಲಿ ಕಂಚು ಗೆದ್ದರು.

ಪುರುಷರ 49 ಕೆ.ಜಿ ಯೂತ್ ವಿಭಾಗದಲ್ಲಿ ಫಿಲಿಪೀನ್ಸ್‌ನ ಡೆಲೋಸ್ ಸ್ಯಾಂಟೋಸ್ ಮತ್ತು ಬೊರೆಸ್ ಎರಾನ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದರು. ಏಷ್ಯಾದ 18 ದೇಶಗಳ 220 ವೇಟ್‌ಲಿಫ್ಟರ್‌ಗಳು ಭಾಗವಹಿಸಿದ್ದಾರೆ.




ಪದಕದೊಂದಿಗೆ ಜ್ಯೋಷ್ನಾ

ಲಾರೆನ್ ಗೋಲು; ಇಂಗ್ಲೆಂಡ್‌ಗೆ ಜಯ

ಸಿಡ್ನಿ (ಎಎಫ್‌ಪಿ): ಲಾರೆನ್ ಜೇಮ್ಸ್ ಅವರ ಗೋಲಿನ ನೆರವಿನಿಂದ ಇಂಗ್ಲೆಂಡ್ ತಂಡ, ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 1–0 ಯಿಂದ ಡೆನ್ಮಾರ್ಕ್ ತಂಡವನ್ನು ಮಣಿಸಿತು.

'ಡಿ' ಗುಂಪಿನಲ್ಲಿ ಎರಡು ಗೆಲುವುಗಳೊಂದಿಗೆ ಆರು ಪಾಯಿಂಟ್ಸ್ ಕಲೆಹಾಕಿರುವ ಇಂಗ್ಲೆಂಡ್, ನಾಕೌಟ್ ಪ್ರವೇಶಿಸುವತ್ತ ದಿಟ್ಟ ಹೆಜ್ಜೆಯಿಟ್ಟಿದೆ. ಡೆನ್ಮಾರ್ಕ್, ಮೂರು ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಲಾರೆನ್ ಅವರು ಆರನೇ ನಿಮಿಷದಲ್ಲಿ ಗೆಲುವಿನ ಗೋಲು ತಂದಿತ್ತರು. ಪ್ರಮುಖ ಮಿಡ್‌ಫೀಲ್ಡರ್ ಕೀರಾ ವಾಲ್ಶ್ ಗಾಯಗೊಂಡಿರುವುದು ಈ ಟೂರ್ನಿಯಲ್ಲಿ ಇಂಗ್ಲೆಂಡ್‌ಗೆ ಹಿನ್ನಡೆ ಉಂಟುಮಾಡಿದೆ. ಮೊದಲ ಅವಧಿಯ ಆಟದಲ್ಲಿ ಅವರು ಗಾಯಗೊಂಡು ಹೊರನಡೆದರು.



ಗೋಲು ಗಳಿಸಿದ ಸಂಭ್ರಮದಲ್ಲಿ ಲಾರೆನ್ ಜೇಮ್ಸ್ –ಎಎಫ್‌ಪಿ ಚಿತ್ರ

ಡ್ರಾ ಸಾಧಿಸಿದ ಅರ್ಜೆಂಟೀನಾ: ನ್ಯೂಜಿಲೆಂಡ್‌ನ ಡನೇಡಿನ್‌ನಲ್ಲಿ ನಡೆದ ಪಂದ್ಯದಲ್ಲಿ ಅರ್ಜೆಂಟೀನಾ ತಂಡ, ದಕ್ಷಿಣ ಆಫ್ರಿಕಾ ಜತೆ 2–2 ಗೋಲುಗಳ ಡ್ರಾ ಸಾಧಿಸಿತು. ಈ ಮೂಲಕ ದಕ್ಷಿಣ ಆಫ್ರಿಕಾಕ್ಕೆ ವಿಶ್ವಕಪ್ ಟೂರ್ನಿಯಲ್ಲಿ ಚೊಚ್ಚಲ ಗೆಲುವಿನ ಅವಕಾಶವನ್ನು ನಿರಾಕರಿಸಿತು.

ಲಿಂಡಾ ಮೊಟ್ಲಾಲೊ (30) ಮತ್ತು ತೆಂಬಿ ಗಾಟ್ಲನಾ (66) ಅವರ ಗೋಲುಗಳ ನೆರವಿನಿಂದ ದಕ್ಷಿಣ ಆಫ್ರಿಕಾ, ಐತಿಹಾಸಿಕ ಗೆಲುವಿನತ್ತ ಹೆಜ್ಜೆಯಿಟ್ಟಿತ್ತು. ಆದರೆ ಸೋಫಿಯಾ ಬ್ರಾನ್ (74) ಮತ್ತು ರೊಮಿನಾ ನುನೆಜ್ (79) ಅವರು ಅರ್ಜೆಂಟೀನಾ ಪರ ಗೋಲು ಗಳಿಸಿ ಸಮಬಲಕ್ಕೆ ಕಾರಣರಾದರು.

ಚೀನಾ ಆಸೆ ಜೀವಂತ: ಚೀನಾ ತಂಡ 1–0 ಗೋಲಿನಿಂದ ಹೈಟಿ ವಿರುದ್ಧ ಗೆದ್ದು, ನಾಕೌಟ್ ಪ್ರವೇಶದ ಕನಸನ್ನು ಜೀವಂತವಾಗಿರಿಸಿಕೊಂಡಿದೆ. ವಾಂಗ್ ಶುವಾಂಗ್ ಅವರು 74ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಗೆಲುವಿನ ಗೋಲು ತಂದಿತ್ತರು.



ಪ್ರಶಸ್ತಿಯೊಂದಿಗೆ ಯುಕ್ತಾ ಹರ್ಷ ಮತ್ತು ಸುದರ್ಶನ್ ಎ. ರಾಜ್

ಟಿಟಿ: ಸುದರ್ಶನ್, ಯುಕ್ತಾಗೆ ಪ್ರಶಸ್ತಿ

ಬೆಂಗಳೂರು: ಸುದರ್ಶನ್ ಎ. ರಾಜ್ ಮತ್ತು ಯುಕ್ತಾ ಹರ್ಷ ಅವರು ಮಲ್ಲೇಶ್ವರದ ಕೆನರಾ ಯೂನಿಯನ್ ಆಶ್ರಯದಲ್ಲಿ ಶುಕ್ರವಾರ ಆರಂಭಗೊಂಡ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 11 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ಸುದರ್ಶನ್ ಎ. ರಾಜ್ 11-9, 5-11, 11-7, 11-5 ರಿಂದ ಅಂಕುಶ್ ಬಾಳಿಗ ಅವರನ್ನು ಪರಾಭವಗೊಳಿಸಿದರು. ಸೆಮಿಫೈನಲ್‌ನಲ್ಲಿ ಸುದರ್ಶನ್ ಅವರು ಎಂ.ಸಿದ್ಧಾಂತ್ ಅವರನ್ನು, ಅಂಕುಶ್ ಬಾಳಿಗ ಅವರು ಎಂ.ಸಾತ್ವಿಕ್ ಅವರನ್ನು ಸೋಲಿಸಿದ್ದರು.

ಬಾಲಕಿಯರ ವಿಭಾಗದ ಫೈನಲ್ ಪಂದ್ಯದಲ್ಲಿ ಯುಕ್ತಾ ಹರ್ಷ 11- 6, 11- 3, 11- 6 ರಿಂದ ಕ್ರಿಶಾ ಪಿ. ಕರ್ಕೇರ ಅವರನ್ನು ಮಣಿಸಿದರು.

ಆ್ಯಷಸ್ ಟೆಸ್ಟ್: ಸ್ಮಿತ್ ಆಸರೆ ಆಸ್ಟ್ರೇಲಿಯಾಕ್ಕೆ ಅಲ್ಪ ಮುನ್ನಡೆ

ಲಂಡನ್ (ಎಎಫ್‌ಪಿ): ಸ್ಟೀವ್ ಸ್ಮಿತ್ (71) ಅವರ ತಾಳ್ಮೆಯ ಅರ್ಧಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡ, ಆ್ಯಷಸ್ ಟೆಸ್ಟ್ ಸರಣಿಯ ಐದನೇ ಮತ್ತು ಅಂತಿಮ ಟೆಸ್ಟ್‌ನಲ್ಲಿ ಅಲ್ಪ ಮುನ್ನಡೆ ಸಾಧಿಸಿದೆ.

ದಿ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರವಾರ, ಪ್ರವಾಸಿ ತಂಡ ಮೊದಲ ಇನಿಂಗ್ಸ್‌ನಲ್ಲಿ 295 ರನ್‌ಗಳಿಗೆ ಆಲೌಟಾಗಿ 12 ರನ್‌ಗಳ ಮುನ್ನಡೆ ಸಾಧಿಸಿತು. ಇಂಗ್ಲೆಂಡ್, ಮೊದಲ ಇನಿಂಗ್ಸ್‌ನಲ್ಲಿ 283 ರನ್ ಗಳಿಸಿತ್ತು.

ಪ್ಯಾಟ್ ಕಮಿನ್ಸ್ ಬಳಗ 1 ವಿಕೆಟ್‌ಗೆ 61 ರನ್‌ಗಳಿಂದ ಎರಡನೇ ದಿನದಾಟ ಆರಂಭಿಸಿತ್ತು. ಅಸಾಧ್ಯ ತಾಳ್ಮೆಯಿಂದ ಆಡುತ್ತಿದ್ದ ಲಾಬುಷೇನ್ (82 ಎಸೆತಗಳಲ್ಲಿ 9) ಅವರನ್ನು ದಿನದ ಮೊದಲ ಅವಧಿಯಲ್ಲಿ ಕಳೆದುಕೊಂಡಿತು. ಲಂಚ್ ವೇಳೆ (2 ವಿಕೆಟ್‌ಗೆ 115) ಉತ್ತಮ ಸ್ಥಿತಿಯಲ್ಲೇ ಇತ್ತು.

ಆದರೆ ಇದೇ ಮೊತ್ತಕ್ಕೆ ಉಸ್ಮಾನ್ ಖ್ವಾಜಾ (47) ಅವರು ಬ್ರಾಡ್‌ಗೆ ಬಲಿಯಾದರು. ಟ್ರಾವಿಸ್ ಹೆಡ್ (4), ಮಿಚೆಲ್ ಮಾರ್ಷ್ (16), ಅಲೆಕ್ಸ್ ಕ್ಯಾರಿ (10) ಹೆಚ್ಚು ಹೊತ್ತು ನಿಲ್ಲಲಿಲ್ಲ.

ಲಂಚ್ ಮತ್ತು ಚಹಾ ವಿರಾಮದ ನಡುವೆ 5 ವಿಕೆಟ್‌ಗಳನ್ನು ಕಳೆದುಕೊಂಡ ಆಸ್ಟ್ರೇಲಿಯಾ, ಹಿನ್ನಡೆಯ ಆತಂಕ ಎದುರಿಸಿತ್ತು.



ಎರಡು ವಿಕೆಟ್ ಪಡೆದ ಸ್ಟುವರ್ಟ್ ಬ್ರಾಡ್ –ಎಎಫ್‌ಪಿ ಚಿತ್ರ

ಆದರೆ ಸ್ಮಿತ್ ಮತ್ತು ಕಮಿನ್ಸ್ (36) ಅವರು ಎಂಟನೇ ವಿಕೆಟ್‌ಗೆ 54 ರನ್ ಸೇರಿಸಿದರು. ಕೊನೆಯಲ್ಲಿ ಟಾಡ್ ಮರ್ಫಿ (34) ಉಪಯುಕ್ತ ಕೊಡುಗೆ ನೀಡಿದ್ದರಿಂದ ತಂಡಕ್ಕೆ ಮುನ್ನಡೆ ಲಭಿಸಿತು. ಇಂಗ್ಲೆಂಡ್ ಕಡೆ ಕ್ರಿಸ್ ವೋಕ್ಸ್ 3 ವಿಕೆಟ್ ಪಡೆದರೆ ಸ್ಟುವರ್ಟ್ ಬ್ರಾಡ್, ಮಾರ್ಕ್ ವುಡ್ ಮತ್ತು ಜೋ ರೂಟ್ ತಲಾ ಎರಡು ವಿಕೆಟ್ ಗಳಿಸಿದರು.

ನಿಷೇಧ ಶಿಕ್ಷೆ ಪೂರ್ಣ: ಕಣಕ್ಕೆ ಮರಳಿದ ಪೂವಮ್ಮ

ಕೊಲಂಬೊ (ಪಿಟಿಐ): ಎರಡು ವರ್ಷಗಳ ನಿಷೇಧ ಶಿಕ್ಷೆ ಪೂರೈಸಿರುವ ಕರ್ನಾಟಕದ ಅಥ್ಲೀಟ್ ಎಂ.ಆರ್. ಪೂವಮ್ಮ ಅವರು ಕಣಕ್ಕೆ ಮರಳಿದ್ದು, ಇಲ್ಲಿ ನಡೆಯುತ್ತಿರುವ ಶ್ರೀಲಂಕಾ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿದ್ದಾರೆ.

ಶುಕ್ರವಾರ ನಡೆದ 400 ಮೀ. ಓಟದ ಸ್ಪರ್ಧೆಯಲ್ಲಿ ಎರಡನೇ ಹೀಟ್‌ನಲ್ಲಿ ಪಾಲ್ಗೊಂಡ ಅವರು 55.84 ಸೆ.ಗಳೊಂದಿಗೆ ಕ್ರಮಿಸಿ ಎರಡನೇ ಸ್ಥಾನ ಪಡೆದರು. ಉದ್ದೀಪನ ಮದ್ದು ಸೇವನೆ ಪ್ರಕರಣದಲ್ಲಿ ಪೂವಮ್ಮ 2021 ರಲ್ಲಿ ನಿಷೇಧ ಶಿಕ್ಷೆಗೆ ಒಳಗಾಗಿದ್ದರು. ಎರಡು ವರ್ಷಗಳ ನಿಷೇಧ ಶಿಕ್ಷೆ 2021ರ ಫೆ.18 ರಂದು ಜಾರಿಗೆ ಬಂದಿತ್ತು.

'ಪೂವಮ್ಮ ಅವರ ನಿಷೇಧ ಶಿಕ್ಷೆಯ ಅವಧಿ ಪೂರ್ಣಗೊಂಡಿದ್ದು, ಸ್ಪರ್ಧಿಸಲು ಅರ್ಹರಾಗಿದ್ದಾರೆ. ಅವರು ಶ್ರೀಲಂಕಾದಲ್ಲಿ ನಡೆಯುತ್ತಿರುವ ಕೂಟದಲ್ಲಿ ಭಾರತ ತಂಡದ ಭಾಗವಾಗಿರದೆ, ಪ್ರತ್ಯೇಕ ಸ್ಪರ್ಧಿಯಾಗಿ ಪಾಲ್ಗೊಂಡಿದ್ದಾರೆ' ಎಂದು ರಾಷ್ಟ್ರೀಯ ತಂಡದ ಕೋಚ್‌ವೊಬ್ಬರು ತಿಳಿಸಿದರು.

"ಭವಿಷ್ಯದ ರಿಯಲ್ ಎಸ್ಟೇಟ್ ತಾಣ" ಪೆರೇಸಂದ್ರ



ಸಂದೀಪ್ ಬಿ.
ಎಂ.ಡಿ. ಚರಿಗನ್ ಗ್ರೂಪ್



ಚಿಕ್ಕಬಳ್ಳಾಪುರ ಜಿಲ್ಲೆಯ ಪೆರೇಸಂದ್ರ ಟೌನ್ ಮತ್ತು ಇತರ ಅನೇಕ ಪಟ್ಟಣಗಳು ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಗುರುತಿಸಿಕೊಂಡಿದೆ. ಇದಲ್ಲದೆ ವಸತಿ ಯೋಗ್ಯ ತಾಣಗಳಾಗಿ ವಿಶೇಷವಾಗಿ ಮೂಡಿಸಿರುತ್ತವೆ.

ಈ ಪಟ್ಟಣಗಳು ವಿವಿಧ ಕ್ಷೇತ್ರಗಳಲ್ಲಿ ವೇಗವಾಗಿ ಬೆಳೆದು ರಿಯಲ್ ಎಸ್ಟೇಟ್ ಕ್ಷೇತ್ರವು ಲಾಭದಾಯಕವಾಗಿ ಪರಿಣಮಿಸಿದೆ.

"ಇಶಾ ಫೌಂಡೇಶನ್‌ನಿಂದ ಕೇವಲ 5 ನಿಮಿಷ ಅಂತರ"

ಪೆರೇಸಂದ್ರದಲ್ಲಿ ಸಂಪತ್ತು ಹೂಡಿಕೆ ಮಾಡುವುದರಿಂದ ಹೆಚ್ಚಿನ ಲಾಭ ಸಿಗುತ್ತದೆ. ಏಕೆಂದರೆ ಇಲ್ಲಿನ ಭೂಮಿ ಫಲವತ್ತಾಗಿದೆ. ರಾಷ್ಟ್ರೀಯ ಹೆದ್ದಾರಿಗಳಿಂದ ಇಲ್ಲಿಗೆ ಬಹಳ ಸರಳವಾಗಿ ತಲುಪಬಹುದು. ಏರ್‌ಪೋರ್ಟ್ ಬಹಳ ಹತ್ತಿರ ಇರುವುದರಿಂದ ಕೇವಲ ಕೆಲವು ನಿಮಿಷಗಳ ಪ್ರಯಾಣ ಮಾಡಬಹುದು, ಇದರಿಂದ ಪೆರೇಸಂದ್ರವು ಪ್ರಖ್ಯಾತಿ ಗಳಿಸಿದೆ.
ಸಂದೀಪ್ ಬಿ. | ಎಂ.ಡಿ. ಚರಿಗನ್ ಗ್ರೂಪ್

ಸುತ್ತಮುತ್ತ:

ಚಿಕ್ಕಬಳ್ಳಾಪುರದಲ್ಲಿ ನಂದಿಬೆಟ್ಟ, ಆವಲಬೆಟ್ಟ, ಗುಮ್ಮನಾಯಕನ -ಪಾಳ್ಯ, ಗುಡಿಬಂಡೆ ಅಮಾನಿ ಭೈರಸಾಗರ ಕೆರೆ ಮುಂತಾದ ಪ್ರವಾಸಿ ಆಕರ್ಷಣೆಗಳಿವೆ. ಸದ್ಯಕ್ಕೆ ಪೆರೇಸಂದ್ರ, ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರದೇಶವಾಗಿದ್ದು ಇಲ್ಲಿ ರಿಯಲ್ ಎಸ್ಟೇಟ್ ಹೂಡಿಕೆಗೆ ವಿಪುಲ ಅವಕಾಶಗಳಿವೆ. ಬೆಂಗಳೂರು ನಗರದಿಂದ ಸುಮಾರು 60 ಕಿ.ಮೀ ದೂರದಲ್ಲಿರುವ ಚಿಕ್ಕಬಳ್ಳಾಪುರ ಪುಷ್ಪೋದ್ಯಮ, ದ್ರಾಕ್ಷಿ ತರಕಾರಿ ಕೃಷಿ ಇತ್ಯಾದಿಗಳಿಗೆ ಗುರುತಿಸಿಕೊಂಡಿದೆ. ಇಲ್ಲೀಗ ರಿಯಲ್ ಎಸ್ಟೇಟ್ ಚಟುವಟಿಕೆಗಳೂ ಗರಿಗೆದರಿದ್ದು ಬಹುತೇಕ ನಗರವಾಸಿಗಳು ಇಲ್ಲಿ ಪ್ರಾಪರ್ಟಿ ಖರೀದಿಗೆ ಮುಂದಾಗುತ್ತಿದ್ದಾರೆ ಇಲ್ಲಿಯ ಭೂಮಿ ಮೇಲೆ ಈಗ ಮಾಡುವ ಹೂಡಿಕೆಯು ಭವಿಷ್ಯದಲ್ಲಿ ಆತ್ಯಂತ ಲಾಭದಾಯಕವಾಗಿ ಪರಿಣಮಿಸಲಿದೆ ಎಂದು ಚರಿಗನ್ ಗ್ರೂಪ್‌ನ ಮ್ಯಾನೇಜಂಗ್ ಡೈರೆಕ್ಟರ್ ಸಂದೀಪ್ ಬಿ. ಹೇಳಿದ್ದಾರೆ..

ವಿದ್ಯಾಭ್ಯಾಸ:

ಚಿಕ್ಕಬಳ್ಳಾಪುರ ಸರಕಾರಿ ಮೆಡಿಕಲ್ ಕಾಲೇಜ್ ಮಾತ್ರವಲ್ಲದೆ. ಅನೇಕ ಶಾಲೆ ಮತ್ತು ಕಾಲೇಜ್‌ಗಳಿರುವ ಇಲ್ಲಿ ಪ್ಯಾರಾ ಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜ್ ಕೂಡ ಇದ್ದು ಶಿಕ್ಷಣಾಕಾಂಕ್ಷಿಗಳಿಗೆ ಅತ್ಯುತ್ತಮವಾಗಿ ಪರಿಣಮಿಸಿದೆ.

ಹೆದ್ದಾರಿಗೆ ಹತ್ತಿರ:

ಇಲ್ಲಿಂದಲೇ ಹಾದು ಹಾಗುವ ಬೆಂಗಳೂರು ಟು ಹೈದರಾಬಾದ್ ಹೈವೇ ಈ ಪ್ರದೇಶಕ್ಕೆ ಅತ್ಯುತ್ತಮ ಸಂಪರ್ಕ ಒದಗಿಸಿದ್ದು ಇಲ್ಲಿಯ ಸುತ್ತಮುತ್ತಲಿನ ನಿವೇಶನಗಳಿಗೆ ಬಹುಬೇಡಿಕೆಯದೆ. ಪೆರೇಸಂದ್ರದಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳು ಬೆಳೆಯಲು ಮತ್ತೊಂದು ಕಾರಣವೆಂದರೆ ಆದಕ್ಕೆ ಹೊಂದಿಕೊಂಡಿರುವ ರಾಷ್ಟ್ರೀಯ ಹೆದ್ದಾರಿ. ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪೆರೇಸಂದ್ರಕ್ಕೆ ಹೊಂದಿಕೊಂಡಂತಿದೆ.

ಮೂಲಸೌಲಭ್ಯಗಳು :

ಇಲ್ಲಿ ಸ್ಥಾಪನೆಯಾಗಿರುವ ಹೊಸ ಸರಕಾರಿ ಮೆಡಿಕಲ್ ಕಾಲೇಜ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು ಕೆಲವು ತಿಂಗಳಲ್ಲಿ ಸೇವೆಗೆ ಸುಸಜ್ಜಿತವಾಗಿದ್ದು ಇವುಗಳಿಂದಾಗಿ ಸುಮಾರು ಸಾವಿರಾರು ಸಂಖ್ಯೆಯಲ್ಲಿನೇರ ಅಥವಾ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲಿದೆ. ಜನರು ಆಸ್ತಿ ಖರೀದಿ ಮಾಡುವ ಸಂದರ್ಭದಲ್ಲಿ ಹೆಚ್ಚು ಪ್ರಾಮುಖ್ಯ ನೀಡುವ ಅಂಶಗಳಾದ ಆಸ್ಪತ್ರೆ ಬ್ಯಾಂಕ್; ಚಿತ್ರಮಂದಿರ, ಪೊಲೀಸ್‌ಠಾಣೆ, ಪೆಟ್ರೋಲ್‌ಬಂಕ್. ಶಾಪಿಂಗ್ ಕಾಂಪ್ಲೆಕ್ಸ್ ಇತ್ಯಾದಿಗಳೆಲ್ಲವೂ ಪೆರೇಸಂದ್ರದಲ್ಲಿವೆ. ಈ ಕಾರಣ ಭವಿಷ್ಯದ ದಿನಗಳಲ್ಲಿ ಇಲ್ಲಿ ಬಾಡಿಗೆ ಮನೆ ಸೇರಿದಂತೆ ಸ್ವಂತ ಮನೆ, ನಿವೇಶನಗಳಿಗೆ ಬಹುಬೇಡಿಕೆ ಕಂಡುಬರಲಿದೆ.

ಪರಿಸರ ಸ್ನೇಹಿ:

ಉದ್ಯಾನ ನಗರಿಯ ದಿನನಿತ್ಯದ ಟ್ರಾಫಿಕ್ ದಟ್ಟಣೆ, ವಾಯುಮಾಲಿನ್ಯ, ದುಬಾರಿ ಜೀವನ ಶೈಲಿಯಿಂದ ಬಳಲಿರುವ ಬೆಂಗಳೂರಿಗರು ಈಗ ಮಾಲಿನ್ಯ ರಹಿತ ಪರಿಸರಗಳಲ್ಲಿ ಮನೆ ಹೊಂದಲು ಬಯಸುತ್ತಿದ್ದು ಇಂಥವರಿಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಪೆರೇಸಂದ್ರ ಪ್ರಶಸ್ತ ತಾಣವಾಗಿ ಹೊರಹೊಮ್ಮಿದೆ.

ಹಸಿರುದಯವಾಗಿರುವ ಈ ಪ್ರದೇಶದಲ್ಲಿ ಭೂಮಿ ಬೆಲೆಯೂ ಯೋಗ್ಯವಾಗಿದೆ. ಆದ್ದರಿಂದ ಬೆಂಗಳೂರಿನ ಹೊರವಲಯದಲ್ಲಿ ನಿವೇಶನ, ಮನೆ ಹುಡುಕುತ್ತಿರುವವರಿಗೆ ಈಗ ಪೆರೇಸಂದ್ರ ಅಚ್ಚುಮೆಚ್ಚಾಗಿ ಪರಿಣಮಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

Hasiru Bhoomi Your Own Weekend Farm
CALL FOR MORE DETAILS : +91 8147873745
FARM LANDS FOR SALE IN NORTH BENGALURU
JUST 18KM FROM YELAHANKA NEW TOWN
www.hasirubhoomi.com

ATTENTION BUILDERS
Please contact for
- Project start to completion - advisory
- Project execution and PMC
- Onsite training

A K Enterprises
Proprietor: K Arulnathan BE, MBA
e-mail: arulnathan.k@gmail.com
M: +91 96633 95826

ನಿಮ್ಮ ಕನಸಿನ ನಿವೇಶನವನ್ನು ನಿಮ್ಮದಾಗಿಸಿಕೊಳ್ಳಿ..!!
Man ENCLAVE
ಚಿನ್ನಕುರ್ಚಿ
ಸ್ಪಾಟ್ ಬುಕ್ಕಿಂಗ್ ಮಾಡಿದವರಿಗೆ 100 ಗ್ರಾಂ ಬೆಳ್ಳಿಯ ಲಕ್ಷ್ಮಿ ವಿಗ್ರಹ ಉಚಿತ



VP Panchayat Approved
ಪ್ರಾರಂಭಿಕ ಬೆಲೆ ₹1499/-
ಕನಕಪುರ ರಸ್ತೆ ಇಂದ ಕೇವಲ 5 kms
ಕುಂಬಳಗೋಡುನಿಂದ ಕೇವಲ 7 kms
ಅಳತೆ 20×30, 20×40, 30×30, 30×40
ಸಂಪರ್ಕಕ್ಕಾಗಿ ಕೇಂದ್ರೀಕೃತವಾಗಿದೆ
ವಿವೇಕಾನಂದ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಇಂದ 5 ನಿಮಿಷ
ಬಿಜಿಎಸ್ ರೆಸಿಡೆನಿಯಲ್ ಶಾಲೆ ಮತ್ತು ಡಿಪಿಎಸ್ ಕೆ ಗೊಲ್ಲಹಳ್ಳಿ ಇಂದ 10 ನಿಮಿಷ
ದಯಾನಂದ ಸಾಗರ್ ಕಾಲೇಜು ಅಫ್ ಇಂಜಿನಿಯರಿಂಗ್ ನಿಂದ 10 ನಿಮಿಷ
ಸಿಲ್ಕ್ ಇನ್ಸಿಟ್ಯೂಟ್ ಮೆಟ್ರೋ ನಿಂದ 15 ನಿಮಿಷ
ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ.
ಬ್ಯಾಂಕ್ ಗಳಿಂದ ಸಾಲ ಲಭ್ಯವಿದೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 63601 92136

ಶೋ ಆಫ್



SHOWOFF
NEW WEDDING COLLECTIONS
JAYANAGAR COMMERCIAL Street MANTRI SQUARE Mall GOPALAN ARCADE Mall
Ph: 080 41145340
UPTO 50% OFF
Bangalore: • Commercial Street • DVG • Gopalan Arcade • Gopalan Signature Mall • Jayanagar • Mantri Square Mall • Malleshwaram • Phoenix Market City • Royal Meenakshi Mall • Yelahanka New Town
• Belagavi • Bellary • Bidar • Bijapur • Chikmagalur • Gulburga • Hassan • Hubli • Mangalore • Mysore • Tumkur • Ahmednagar (Maharasthra)

REAL ESTATE SELLING

Sites

Banashankari

30x40 SITE SALE



BSK 6th STAGE, 10th BLOCK, BDA NORTH FACING, PLOT FOR SALE 30x40, 1st ALLOTTE, CLEAR TITLE. Rs. 90 Lac, Negotiable 8088799686, 9611105595

BSK 6TH Stage, 4th 'B' Block, 50x80 East Site 7,500/- Owner meeting, Mahalaxmi Enterprise -9845144365

BANASHANKARI 6TH Stage 5th Block North East Corner 850 Square feet BDA Action Site For Sale. Contact: 9845298419

AVAILABLE BDA Sites Banashankari 6th Stage,Anjanapura,20x30, 30x40,40x60,50x80, Genuine Buyers Contact: 9686804914 /9148484444

SALE BSK 6th stage 9th Block 30x40 East Facing 65 Lakh Also 40x60 East Facing 4th Block 2.cr and 20x30 48 lakh Negotiable 9945373839, 9620041313

BANASHANKARI 6TH Stage, 40x60, 60" Road 20x30,30x40, 50x80, Residential /Commercial Sites Sale :9916817739

'BANASHANKARI' 6TH Stage, 3rd Block,30x40,West Facing BDA Site Good Location Contact :9900097239

'AVAILABLE 'AND Wanted Banashankari 6th Stage, Anjanapura, BDA And BBMP Sites,20X30,30X40,40X60, 50X80,Contact:9900097239

30X40, 40X60 Available Sale Both or East Face in Banashankari 6th Stage. Call: MANOJ 9731410616

Anjanapura

40X60 BDA Site for Sale at Anjanapura 5th G Block, 60 Feet Road, Contact: 9945427003

Bannerghatta Road

40X60 SITE SALE NORTH Facing HG 26 Nandanavana Residential Layout, Bannerghatta, NO Brokers. 9448421431, 9739364554.

Hosur Road

SALE: 1530SQ.FT A-Khata Site (North facing), attached to Oxford MedicalCollege, Yadavanahalli, Hosur Road. 3850/-sq.ft. Owner: 8762019900/ 8548908505

Jayanagar

JAYANAGAR 3RD BLOCK 10th 'B' Main Road Near Cosmopolitan Club 40×50 West Facing Vacant Site Sale: 9845075792

J P Nagar

SALE 30X40 East Facing JP Nagar 9th phase 4th "A" Block 8750/ square Feet also 30x40 South 7500/- Near Kanakpura Road 9945373839, 9620041313

SALE BDA JPNAGAR 8th phase 2nd Block 40x60 west Facing Commercial site Rate 11250/- per sqft. 9620041313, 9945373839

JPNAGAR 8TH Phase, Royal County BDA Site Sale, 30x50, S/F, 9000/- Negotioble: 9538680364 / 9513004587

Koramangala

SALE 50X80 NORTH RESIDENTIAL PLOT KORAMANGALA 1ST BLOCK, SERIOUS BUYERS PLEASE CONTACT: RAMESH HK 9844104958

PRIME PROPERTY. 30x40 BDA site south facing Koramangala St.bed. Rs. 32000 sft. 36 feet road front. Full cheque. 9886522868.

Kanakapura Road

KANAKAPURA ROAD Kaggalipura BMRDA Approved 'E'Khata 30x40 E/F, 30X50 W/F, 3000/- Negotioble : 9740150364/9986146147

Kempegowda Layout

BDA SITES For Sale @ Kempegowda Layout 20x30, 30x40, 40x60 6363496142 9845555666

Magadi Road

30X40 WF BBMP A' Katha 40ft Road Rs. 8750/- Negotiable Magadi Road BEL Layout: 9916826976

Nagarabhavi

30X40 WEST, Semi Commercial Site Sale. Near Deepa Complex, 80 Feet Road, Rs.13,000/-. Sqft. 9980409820.

Rajarajeshwari Nagar

'A' KHATA Property for Sale in RajarajeshwariNagar 30x40 and 40x60, East facing. Call: 9448288522

BDA & RERA



RERA No. : PRM/KA/RERA/ 1251/310/PR/191222/005541
TRILOK VILLAS AND APARTMENTS Premium PLOTS at Kenchanahalli @ R.R. Nagar 9008880994, 9900199564 & 9972399993

Vishweshwariah Layout

VISHWESHWARAIAH LAYOUT SITES FOR SALE 30x40, 20x30 6TH BLOCK SOUTH/ EAST FACING GOOD LOCATION: 9611257376

SALE 30X40 VISHVESWARAIAH LAYOUT 4th Block South Facing 78 lakh Negotiable 9945373839, 9620041313

"VISHVESHWARAIAH 4TH-BLOCK BDA Two sites for sale 30x40 North face, Good location. Contact: 8618934679"

Whitefield

30 X 40 site Chikkathirupathi road for 16 Lakhs. call 7022206007

Agricultural Land

North

72 ACRES farm land, 11 borewells, drip irrigation, farmhouse, beautiful location gadag district contact 9000092222

Ramanagar

AGRICULTURAL LANDS Sale Near Ramanagar 1.5-Acre and 3-Acres 55,00,000/- PerAcre Clear Title. Contact- 9900115519

Commercial Land

Yelahanka

"YELAHANKA NEW_TOWN 2 Acres East facing 60 feet Road Conversion BBMP 'A' katha Land Sale. 9379776189"

Commerical

Banashankari

COMMERCIAL BDA



SITE FOR SALE 100 ft. Main Road, BSK 6th Stage, 4th Block 25x30, North Face, opposite to Shoba Apartment, Rs. 21000/- sft nego. Ramesh - 9845286583

Commercial Street

COMMERCIAL PROPERTY for Sale- Commercial Street prime location 1134 sqft, first cross. Contact: 9902736284

ಸೈಟುಗಳು ಮಾರಾಟಕ್ಕಿವೆ
ನೆಲಮಂಗಲ ಹತ್ತಿರ
BMRDA APPROVED A KHATA
70% ಬ್ಯಾಂಕ್ ಲೋನ್ ದೊರೆಯುತ್ತದೆ.
ಸಂಪರ್ಕಿಸಿ: 8880660099

Flat

Banashankari

FLATS FOR SALE



RERA No : PRM/KA/RERA/ 1251/310/PR/220722/005096
MARS THE PLANET 2, 2.5, 3 BHK Flat Located @ BSK 3rd Stage opp to Tata Promont, 8792155802 9972399993 & 9880625336

Basaveshwaranagar

"MAGADI MAIN Road ready to occupy 3BHK 1315.Sfqt 8600000/-, 2BHK 1050.Sqft 6800000/- with occupancy certificate. 9845286505"

Jigani

DLF MAIDEN Heights, Jigani, Bangalore 2 BHK Flat No.C041 Fourth Floor Sale Area 1000 Sq.ft. Call:-9899869329,9810054005

J P Nagar

NEW_FLATS for Sale, J.P.Nagar`near Tippu Circle,2`BHK &.3 BHK, 39,00,000/-& 45,00,000/`,(Low Price) Completion`in 3 months`Bank Loan will`be approved`(only Muslims)Contact- Simha: 9036706304 Shahzad: 6364062086.

SOBHA DEWFLOWER Excellent 4 BHK East Facing, Sobha Tulip 3 BHK Flats For Sale 9845760178

SALE OVER 8 Year, Semi-furnished 2 BHK Flat 1080 Sq.ft. with Roofed Car-parking. JPNagar 5th Phase 9986763007.

First Time in KR PURAM Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
ITI Ground, Next to Hanging Bridge, KR Puram, Bengaluru
AQUA TUNNEL SHOW
July & August



Complete Family Shopping & Amusement Exhibition
VISIT TODAY | Daily : 4pm - 9pm | Call : 8904727123

Nagarabhavi

RAJU HIREMATH & CREW
NAGARBHAVI MARVEL
... a laxurious apartment
RED BRICKS Used for Walls
ಗೋಡೆಗಳಿಗೆ ಕೆಂಪು ಇಟ್ಟಿಗೆ ಉಪಯೋಗಿಸಲಾಗಿದೆ
NAGARBHAVI Near Ullal R.T.O Office
2 BHK & 3 BHK FLATS FOR SALE
Ready to Occupy
Contact 98443 45334

Kengeri

1BHK BDA FLAT EAST FACING RS. 15L, 2BHK RS. 40L, 3 BHK RS. 60L: 9886201690.

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Kanakapura Road

2-BHK FLATS Sale 1265-Sqft E/F Full Interiors Off Kanakpura Road Konankunte Near Junior Delhi Public School- 9343722162

Vijayanagar

THREE BEDROOM FLAT, Area-1470 sft including Balcony, Carparking, Rate:8200/Sft (Negotiable) at Saraswathinagar, Vijayanagar, Bangalore. (Broker excuse)- 9880100828.

Farm House/ Land/ Resorts

Mysore Road

12000 SQFT Farm Land with Fencing from Bangalore Mysore Highway 6kms Near Channapatna Total 22L: 9845169300

House

J P Nagar

SALE JPNAGAR 2nd_Phase 30x50 West`Facing BDA-Site With_old House Behind Woody's Hotel_3.4cr Maximum-White. Sunil_9845201710

SALE J.P.NAGAR 5th Phase, 30x40 North, old house, BDA good location, 2,45,00,000/- Suraj Realtors -9845232711

Uttarahalli

3 BHK House for sale in Maruti Layout Vasantapura, Uttarahalli, Bangalore. Contact owner - 9591299944

Yelahanka

4BHK, GROUND plus one, 3 Toilets, 3 Car Parks, 40X55 Site with a Well, for Sale at Yelahanka, 8 Crores. 9986563444

Industrial & Factory

Magadi Road

BUILD-TO-SUIT OR on sale 3 acre industrial converted land at Magadi singripalya attached STRR corner @ 495 psqft contact 9845851473.

Residential/ Commercial

Mysore

JOINT VENTURE partners required for developing food court, commercial and residential project in a best location on Mysore Express Highway near Mysore. Contact 9731433641/ 9741019028

REAL ESTATE BUYING

Sites

Anjanapura

WANTED BDA Site any measurement Anjanapura, Banashankari 6th Stage, JP.Nagar 8th/ 9th Phase, NarayanaNagar, Contact: 9880300791

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

Hosur Road

"SURYA-CITY KHB Wanted 20x30,30x40, 40x60,50x80 Any dimensions Site-for Immediate Settlement. Genuine Sellers Contact. "Krishna"- 9886294610"

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Vishweshwariah Layout

"REQUIRED NAGARABHAVI, Vishveshwaraiah, Kempegowda Layout 20x30, 30x40, 40x60, 50x80 Sites, Contact Genuine sellers only. 9846268611"

WANTED RESIDENTIAL Sites in Nagarbhavi 40x60, Vishweshwaraiah Layout 50x80 BDA 8th Block Contact: 9035151657

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

RENTAL PROPERTIES

Accommodation Available

Commercial

COMMERCIAL BUILDING for Rent, Ground floor 1500 sqft, 2nd 1000 sqft, 3rd 1000 sqft. Hoysala Circle, Kengeri Upanagara. Contact: 9449218890

***AVAILABLE FOR** RENT* RPC Layout near Swimming pool 2600 sqft Commercial 4floor Building. Call: 8867569333

Industrial And Factory

FOR RENT: Immediate availability, Peenya 2nd Stage, 10000 sq ft industrial facility, 66 HP power, crane, corner site. Suitable for CNC machining, manufacturing operations. Contact: 9148833730

BUSINESS

Business to Business

Business

BEST INVESTMENT For Petrol Bunk Lease Cum Sale or Partnership Kanakapura National Highway 209 Built`to`shuit Restaurant 35000sft Call:9035963540

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

AUTOMOTIVE

Four Wheelers Buying

Toyota

WEARE Looking To Buy Preowned Toyota Land Cruiser/Prado. Preferably Less Driven. Immediate Settlement. Good Price Offered. Contact: 9845050520

Four Wheelers Selling

Benz

MERCEDESBENZ S350. For Sale. 2016 Black Color 18k Driven. Extremely Well Maintained.PPF Installed, Fancy Number. Second Owner. Price 63L Contact: 9845009982

JOB OPPORTUNITIES

Manager

HIRING- FOURTH Largest Legendary Bank Subsidiary-Job in BANGALORE. 1st Time in India VAM Model, Age 32+ PT, WFH: 8762170086

PERSONAL

Change of Name

CHANGE OF NAME
I,ROSHAN,S/o.DOMINIC VARGHESE PANEGHAT, Residing at #128/129, Krishnappa Layout, Doddakanahalli Sarjapura Road, Carmalaram Post, Bengaluru – 560035, have changed my name to **ROSHAN DOMINIC** vide affidavit dated 28-07-2023 before Notary B.M. Chandrasekhar, Bangalore.

I, KAJOL RAMESH JAIN, R/a Flat#603, 6th Floor Platinum Ananda Apartment, Bull Temple Road next to Ramakrishna Matt, Bengaluru- 560019, have`changed name`to KAJOL BOHRA vide affidavit 11.07.2023 before Notary Hemalatha, Bangalore

CHANGE OF NAME
We, **ROYSTON CASTELLAS & SINDHU M** R/at. 005, Ashriwad Apts, Ground Floor, Austin Town, Bangalore-560047, have changed our minor daughter's name from **OLIVIA** to **OLIVIA ANNE CASTELLAS** vide affidavit dt. 06/01/2021, before Notary C.V. Earappa, Bangalore. Henceforth, I shall be called **OLIVIA ANNE CASTELLAS** only

I, **RIZWANA** GOWHER ASHAI residing at Icon G Corp D 1902, Thanisandra, Next to Elements Mall, Nagawara, Dr.Shivarama KaranthNagar, Bangalore-560077 have changed my name to RIZWANA GOWHER vide affidavit dated 28.07.23 before Notary Uday Kumar.K, Bangalore

DH DECCAN HERALD ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA & PRAJAVANI ALL KARNATAKA ON FRIDAY + SATURDAY + SUNDAY
@1600/-* Per Sqcm Single Column
@1800/-* Per Sqcm Multi Column
conditions apply*
For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



BBMP
ವ್ಯಾಪ್ತಿಯಲ್ಲಿ
ನಿವೇಶನಗಳು

ಒಂದು ವರ್ಷ EMI ಉಚಿತ ಸೈಟು/ನಿವೇಶನ ಖರೀದಿಸಲು ಸುವರ್ಣಾವಕಾಶ

₹ 1499/- per sft

ಕುಂಬಳಗೋಡು ಹತ್ತಿರ ಮೈಸೂರು ರಸ್ತೆ

ನೋಂದಣಿಗೆ ಮತ್ತು ಮನೆ ಕಟ್ಟಲು ಸಿದ್ಧವಿರುವ ಸೈಟುಗಳು
ನಿವೇಶನ ಖರೀದಿಸಲು ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ

ವಿಶೇಷತೆಗಳು :
- 1. 5 ಕಿಮೀ ಮೆಟ್ರೋ ನಿಲ್ದಾಣ
- 1.5 ಕಿಮೀ ಎಕ್ಸ್‌ಪ್ರೆಸ್ ಹೆದ್ದಾರಿ
- 3 ಕಿಮೀ ರೈಲು ನಿಲ್ದಾಣ
- ಕೆಂಗೇರಿಯಿಂದ 5 ಕಿ.ಮೀ
- BMTC ಬಸ್ಸುಗಳು ಲಭ್ಯವಿದೆ

ಸೌಲಭ್ಯಗಳು :
- ಪ್ರತಿ ಸೈಟಿಗೂ ಪ್ರತ್ಯೇಕ ನೀರು ಮತ್ತು ಸ್ಯಾನಿಟರಿ ಸಂಪರ್ಕ
- ರಸ್ತೆ
- ಬೀದಿ ದೀಪ

AVAILABLE BANK LOAN AVAILABLE

Call for more Details :
93411 18999

1 YEAR EMI *FREE

ನೆಲಮಂಗಲ ಮತ್ತು ಮಾಗಡಿ ರಸ್ತೆ ಸಮೀಪದಲ್ಲಿ E-Khata ಹೊಂದಿರುವ ಸೈಟುಗಳು

ನಗರಕ್ಕೆ ಸಮೀಪವಿರುವ ನಿವೇಶನ ಖರೀದಿಸಿ ಕೂಡಲೇ ಮನೆ ಕಟ್ಟಿಕೊಳ್ಳಬಹುದು



ರಾಜ್ ರೆಸಿಡೆನ್ಸಿ
~~₹1799 sq.ft~~
Nelamangala
OFFER PRICE
₹ 1599 sq ft

ವಿನಾಯಕ ಎನ್‌ಕ್ಲೇವ್
~~₹1499 sq.ft~~
MAGADI ROAD TAVAREKERE
OFFER PRICE
₹ 1299 sq ft

DC Converted Approved Sites at Nelamangala & Magadi Road

ನೋಂದಣಿ ಮತ್ತು ಕೂಡಲೇ ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
ಬ್ಯಾಂಕ್ ಲೋನ್ ಸೌಲಭ್ಯವಿದೆ

ಇಂದೇ ಸೈಟ್ ವಿಸಿಟ್ ಮಾಡಿ ಮತ್ತು ನಿಮ್ಮ ಸೈಟ್ ಬುಕ್ ಮಾಡಿ.
ಕೆಲವೇ ನಿವೇಶನಗಳು ಬಾಕಿ

* Conditions apply

ವಿಶೇಷತೆಗಳು :
- ಮಾಗಡಿ ರಸ್ತೆ, ಮೈಸೂರು ರಸ್ತೆ, ತುಮಕೂರು ರಸ್ತೆಗೆ ಸಂಪರ್ಕವಿದೆ.
- ಜ್ಞಾನಗಂಗಾ ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್
- ಜನಸೇವಾ ವಿದ್ಯಾಕೇಂದ್ರ ಪಿಯೂ ಕಾಲೇಜ್
- ಎಂಬೆಸ್ಸಿ ಪಬ್ಲಿಕ್ ಇಂಟರ್‌ನ್ಯಾಷನಲ್ ಸ್ಕೂಲ್
- ತುಮಕೂರು ರಸ್ತೆಯಿಂದ 2 ಕಿ.ಮೀ
- ನೆಲಮಂಗಲ ಟೌನ್ ಗೆ ಹತ್ತಿರ

ಸೈಟಿನ ಮೇಲೆ ಇನ್‌ವೆಸ್ಟ್ ಮಾಡಿ ಹೆಚ್ಚು ಲಾಭ ಗಳಿಸಿ.

ಸೌಲಭ್ಯಗಳು :
- ಮಕ್ಕಳ ಆಟದ ಮೈದಾನ
- ಅಗಲವಾದ ರಸ್ತೆಗಳು
- ಪ್ರತಿ ಸೈಟಿಗೂ ನೀರಿನ ಸಂಪರ್ಕ
- ಸುಸಜ್ಜಿತ ಬಾಕ್ಸ್‌ಟೈಪ್ ಒಳಚರಂಡಿ ವ್ಯವಸ್ಥೆ
- ಬೀದಿ ದೀಪಗಳು
- ಎಲೆಕ್ಟ್ರೀಕ್ ಲೈನು ಮುಂತಾದ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುತ್ತದೆ

ಉಚಿತ ನಿವೇಶನ ನೋಡಲು ಕರೆ ಮಾಡಿ : **81477 49273**

ವಿವಿಧ ಅಳತೆಯ ನಿವೇಶನಗಳು : 20X30, 30X40, 30X50



Artist's Impression of Main Entrance

PREMIUM VILLA PLOTS OFF MYSORE ROAD
₹72 LACS* ONWARDS

'The Akshara Valley Address' is designed for those longing to experience the true essence of nature. A premium plotted development housed amidst surreal green cover. Located near Kengeri Metro Station with close connectivity to NICE road, this project is artfully balanced by the blend of convenience and exclusiveness. This is your opportunity to go beyond crowds and congestion to build your dream home and experience nature friendly lifespaces.

STAGE 1 SOLD. BOOKINGS NOW OPEN FOR STAGE 2

THE AKSHARA VALLEY ADDRESS
www.addressmaker.in

Disclaimer : The images and impressions contained herein are artist's impression indicative of the actual design for information purpose only. This information and the contents herein mentioned are subject to change and is being updated by us in the light of enactment and commencement of the Real Estate (Regulation and Development) Act, 2016. The Company reserves the right to change by adding, deleting or altering the information/material including designs, plans, specifications, facilities, images, features, amenities such as clubhouse, parks etc without any prior notice. Any interested party should verify all the information including designs, plans, specifications, facilities, features etc. independently with the Company prior to concluding any decision for buying in the project. For RERA registration information, visit www.rera.karnataka.gov.in

88847 44244
*T& C Apply | Add-on services offered at additional charges.